ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮಾರ್ಚ್ 19 ಬುಧವಾರ 2025

ಸಂಪುಟ: 45 | ಸಂಚಿಕೆ: 329 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮದ್ಯ ಬಿಟ್ಟರೂ ಮದುವೆ ಆಗಲಿಲ್ಲ; ಹತಾಶೆಯಿಂದ ಹೈಟೆನ್ಷನ್ ವೈರ್ ಹಿಡಿದು ಯುವಕ ಆತ್ಮಹತ್ಯೆ

ಕೊಳ್ಳೇಗಾಲ ತಾಲೂಕು ಮಧುವನಹಳ್ಳಿಯಲ್ಲಿ ತಾಯಿ, ಗ್ರಾಮಸ್ಥರ ಕಣ್ಣೆದುರೇ ಘೋರ ಘಟನೆ ನಡೆದೋಯ್ತು



ಕೊಳ್ಳೇಗಾಲ, ಮಾ.18– ಮದುವೆಯ ವಯಸ್ಸು. ಅಮ್ಮ ಹೇಳಿದಂತೆ ಕುಡಿತವನ್ನೂ ಬಿಟ್ಟು, ವಧುವಿಗಾಗಿ ಎಷ್ಟು ಅನ್ವೇಷಣೆ ನಡೆಸಿದರೂ ಕಂಕಣಭಾಗ್ಯ ಮಾತ್ರ ಕೂಡಿ ಬರಲಿಲ್ಲ. ಇದರಿಂದ ಖಿನ್ನತೆಗೆ ಒಳಗಾದ ಯುವಕ ಭಾರಿ ಸಾಮರ್ಥ್ಯದ ವಿದ್ಯುತ್ ತಂತಿ ಮುಟ್ಟಿ, ಸಾವಿನ ದಾರಿ ಹಿಡಿದು, ಹೆತ್ತವರನ್ನು ದುಃಖಕ್ಕೆ ದೂಡಿದ್ದಾನೆ.

ಈ ಮನಕಲಕುವ ಘಟನೆ ನಡೆದಿರುವುದು ತಾಲೂಕಿನ ಮಧುವನಹಳ್ಳಿಯಲ್ಲಿ. ಗ್ರಾಮದ ಸಿದ್ದರಾಜಮ್ಮ ಅವರ ಪುತ್ರ ಮಸಣಶೆಟ್ಟಿ(27) ತಾಯಿಯ ಎದುರೇ ಹೈಟೆನ್ಷನ್ ತಂತಿ ಹಿಡಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕ್ಷಣಾರ್ಧದಲ್ಲಿ ವಿದ್ಯುತ್ ಪ್ರವಹಿಸಿ, ಅಸುನೀಗಿದ ಮಗನ ದೇಹ ಕಂಬದಲ್ಲಿ ನೇತಾಡುವುದನ್ನು ಕಂಡು ತಾಯಿಗೆ ಸಿಡಿಲು ಬಡಿದಂತಾಗಿದೆ.

ಮದ್ಯ ವ್ಯಸನಿಯಾಗಿದ್ದ ಮಸಣಶೆಟ್ಟಿ, ಮದುವೆ ಮಾಡಿಸುವಂತೆ ತನ್ನ ತಾಯಿಯ ಬಳಿ ದುಂಬಾಲು ಬಿದ್ದಿದ್ದ. ಈಗಿನ ಕಾಲದಲ್ಲಿ ಹೆಣ್ಣು ಸಿಗುವುದು ತುಂಬಾ ಕಷ್ಟ. ಅದರಲ್ಲೂ ಕುಡಿತದ ಚಟವಿದ್ದವರಿಗೆ ಯಾರು ಹೆಣ್ಣು ಕೊಡುತ್ತಾರೆ. ಮೊದಲು ನೀನು ಕುಡಿಯುವುದನ್ನು ಬಿಡು ಎಂದು ತಿಳಿಹೇಳಿದ್ದರು. ತಾಯಿಯ ಮಾತಿಗೆ ಮನ್ನಣೆ ನೀಡಿದ ಮಸಣಶೆಟ್ಟಿ, ಹಲವು ತಿಂಗಳಿಂದ ಕುಡಿತ ಬಿಟ್ಟಿದ್ದ. ಇದರಿಂದ ಸಂತಸಗೊಂಡ ತಾಯಿ, ಮಗನಿಗೆ ವಧು ಅನ್ವೇಷಣೆ ನಡೆಸಿದ್ದರು. ಹಲವಾರು ಕಡೆ ಹೋಗಿ ಹೆಣ್ಣು ನೋಡಿಕೊಂಡು ಬಂದಿದ್ದರು. ವಧುವಿನ ಕಡೆಯವರೂ ಮನೆಗೆ ಬಂದು ಹೋಗಿದ್ದರು. ಆದರೆ ಹುಡುಗನ ಮನೆ ಚಿಕ್ಕದು, ಆತನಿಗೆ ಜಮೀನು ಇಲ್ಲ ಎಂದು ಇತ್ತೀಚೆಗೆ ಎರಡು ಸಂಬಂಧಗಳು ಮುರಿದು ಬಿದ್ದಿದ್ದವು.


ಸಿದ್ದರಾಜಮ್ಮ

ಇದರಿಂದ ಮಸಣಶೆಟ್ಟಿ ತುಂಬಾ ವಿಚಲಿತನಾಗಿದ್ದ. ಕುಡಿತ ಬಿಟ್ಟರೂ ಮದುವೆ ಭಾಗ್ಯ ಕೂಡಿ ಬರಲಿಲ್ಲ. ಬಡತನದ ಕಾರಣಕ್ಕೆ ಹುಡುಗಿ ಮನೆಯವರು ಒಪ್ಪುವುದಿಲ್ಲ ಎಂದು ಖಿನ್ನತೆಗೊಳಗಾಗಿದ್ದ. ಮಗನ ಸ್ಥಿತಿ ನೋಡಿ ತಾಯಿಯೂ ಕಂಗಾಲಾಗಿದ್ದರು.

ಇಂದು ಬೆಳಗ್ಗೆ ಹೋಟೆಲ್‌ನಿಂದ ಉಪಾಹಾರ ತಂದು ಮಗನಿಗೆ ನೀಡಿದ್ದರು. ತಿಂಡಿ ತಿಂದು ಹೊರಗೆ ಹೋಗಿದ್ದ ಮಸಣಶೆಟ್ಟಿ, ಗಂಟೆಗಳಾದರೂ ವಾಪಸ್ ಬರಲಿಲ್ಲ. ಇದರಿಂದ ಆತಂಕಗೊಂಡ ತಾಯಿ, ಮಗನಿಗಾಗಿ ಹುಡುಕಾಟ ನಡೆಸಿದ್ದರು. ಆಗ ಗ್ರಾಮಸ್ಥರೊಬ್ಬರು ನಿಮ್ಮ ಮಗ ಹೈಟೆನ್ಷನ್ ಕಂಬವೇರಿದ್ದಾನೆ ಎಂದು ತಿಳಿಸಿದ್ದಾರೆ.

ಆಗ ಗಾಬರಿಯಿಂದ ಓಡಿದ ತಾಯಿ ಸಿದ್ದರಾಜಮ್ಮ, 'ಇಳಿದು ಬಾ ಮಗನೇ' 'ನಿನಗೇನಾದ್ರು ಆದರೆ ನನ್ನ ಗತಿಯೇನು' ಎಂದು ಪರಿಪರಿಯಾಗಿ ಬೇಡಿ, ಕಣ್ಣೀರಿಟ್ಟಿದ್ದಾರೆ. ಆದರೆ ತಾಯಿಯ ಆಕ್ರಂದನಕ್ಕೆ ಮಸಣಶೆಟ್ಟಿ ಕಿವಿಗೊಡಲಿಲ್ಲ. ತಾಯಿ ಎಷ್ಟೇ ಕಿರುಚಿಕೊಂಡರೂ ಕಂಬವೇರಿದ್ದ ಆತ, ಒಂದು ■ 6ನೇ ಪುಟಕ್ಕೆ

ಮಾ.22ಕ್ಕೆ ಕರ್ನಾಟಕ ಬಂದ್... ಬಂದ್... ಬಂದ್...

ಬೆಂಗಳೂರು, ಮಾ.18– **ಬೆಳಗಾವಿಯಲ್ಲಿ ಕರ್ನಾಟಕದ ಬಸ್ ಕಂಡಕ್ಟರ್ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ಮಾ.22ರಂದು ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿದೆ ಎಂದು ಕನ್ನಡ ಪರ ಚಳವಳಿಗಾರರೂ ಆದ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಘೋಷಿಸಿದ್ದಾರೆ.**

ಇತ್ತೀಚೆಗಷ್ಟೇ ಬೆಳಗಾವಿಯಲ್ಲಿ ಕರ್ನಾಟಕದ ಸಾರಿಗೆ ಇಲಾಖೆ ಬಸ್‌ನ ಕಂಡಕ್ಟರ್ ಮತ್ತು ಪ್ರಯಾಣಿಕನೊಂದಿಗೆ ನಡೆದಿದ್ದ ಗಲಾಟೆ ಪ್ರಕರಣ ತಾರಕಕ್ಕೇರಿತ್ತು. ಅಂದು ಬಸ್ ನಿರ್ವಾಹಕನ ಮೇಲೆ ಮರಾಠಿ ಪುಂಡರು ದಾಳಿ ಮಾಡಿದ್ದರು. ಅಲ್ಲದೆ ಕರ್ನಾಟಕದ ಬಸ್ ಚಾಲಕರ ಮುಖಕ್ಕೆ ಮಸಿ ಬಳಿದಿದ್ದರು. ಇಂತಹ ಪುಂಡಾಟಿಕೆ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿ ಕನ್ನಡಪರ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆ ನೀಡಿವೆ. ಕನ್ನಡಿಗರ ವಿರುದ್ಧ ದೌರ್ಜನ್ಯವೆಸಗುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹಾಕಲು ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಕರ್ನಾಟಕ ಬಂದ್‌ಗೆ ಕರೆ ನೀಡಿದ್ದಾರೆ.

ವಾಟಾಳ್ ನಾಗರಾಜ್ ಘೋಷಣೆ!


ಕನ್ನಡಪರ ಸಂಘಟನೆಗಳ ಸಭೆಯಲ್ಲಿ ವಾಟಾಳ್ ನಾಗರಾಜ್ ಮಾತನಾಡಿದರು.

ಮೆಟ್ರೋ, ಬಸ್, ಗಾಡಿ ಹತ್ತಬೇಡಿ

ಮಾ.22ರಂದು ಯಾರೂ ಮೆಟ್ರೋ ಹತ್ತಬೇಡಿ. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಜೊತೆ ಮಾತನಾಡಿ, ಅವತ್ತು ಬಸ್ ಓಡಿಸಬಾರದೆಂದು ಹೇಳಿದ್ದೇವೆ. ಮಂತ್ರಿ, ಸಿಎಂ ಕಾರಿನ ಚಾಲಕರೇ ಆಗಿರಲಿ, ಮಾನ–ಮರ್ಯಾದೆ, ಗೌರವ, ಅಭಿಮಾನ, ಸ್ವಾಭಿಮಾನವಿದ್ದರೆ ಅಂದು ಗಾಡಿ ಹತ್ತಬೇಡಿ ಎಂದರು. ಖಾಸಗಿ ಶಿಕ್ಷಣ ಸಂಸ್ಥೆಗಳು, ಕನ್ನಡ ಕಲಿಸಲ್ಲ ಅಂತ ನ್ಯಾಯಾಲಯಕ್ಕೆ ಹೋಗ್ತಾರೆ. ಚಾಲಕರು ಯಾರೇ ಇರಲಿ, ಬಸ್ ಆಟೋ, ಕಾರು ಚಾಲಕರಿಗೆ ಇದು ಸ್ವಾಭಿಮಾನ, ಮರ್ಯಾದೆ ಪ್ರಶ್ನೆಯಾಗಿದೆ.

–ವಾಟಾಳ್ ನಾಗರಾಜ್, ಕನ್ನಡ ಪರ ಚಳವಳಿಗಾರ

ಮಾ.22ರಂದು ಅಖಂಡ ಕರ್ನಾಟಕ ಬಂದ್ ಘೋಷಣೆ ಮಾಡಲಾಗಿದ್ದು, ಈ ಕುರಿತು ಇಂದು ನಡೆದ ಕನ್ನಡಪರ ಸಂಘಟನೆಗಳ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವೇಳೆ ಹಲವು ಸಂಘಟನೆಗಳ ಮುಖಂಡರು ಸಭೆಯಲ್ಲಿ ಹಾಜರಿದ್ದರು. ಸಭೆ ಬಳಿಕ ಮಾತನಾಡಿದ ವಾಟಾಳ್ ನಾಗರಾಜ್, 'ಯಾವುದೇ ಕಾರಣಕ್ಕೂ ಬಂದ್ ವಾಪಸ್ ಪಡೆಯುವುದಿಲ್ಲ. ಬಂದ್ ಮಾಡಿಯೇ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ.

ಹೊರರಾಜ್ಯ, ಸಂಸತ್ ಗಮನ ಸೆಳೆಯಲು ಕರ್ನಾಟಕ ಬಂದ್ ಮಾಡುತ್ತಿದ್ದೇವೆ. ಕರ್ನಾಟಕದಲ್ಲಿ ಕನ್ನಡಿಗರಿಗೆ ಹೊಡೆಯುತ್ತಿದ್ದಾರೆ. ಇತ್ತೀಚೆಗಷ್ಟೇ ಮರಾಠಿ ಪುಂಡರು ಕೆಎಸ್‌ಆರ್‌ಟಿಸಿ ಚಾಲಕ, ನಿರ್ವಾಹಕರ ಮುಖಕ್ಕೆ ಮಸಿ ಬಳಿಯುವುದಲ್ಲದೆ ಹಲ್ಲೆ ಕೂಡ ಮಾಡಿದ್ದಾರೆ. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುತ್ತದೆ ಎಂದು ಹೇಳಿದ್ದಾರೆ.

ಮನೆಯಲ್ಲೇ ಕೂತ್ಕೊಳ್ಳಿ: ಇದೇ ವೇಳೆ ಬಂದ್‌ಗೆ ನೈತಿಕ ಬೆಂಬಲ ಸೂಚಿಸಿರುವ ಕೆಲ ಸಂಘಟನೆಗಳ ವಿರುದ್ಧವೂ ಪರೋಕ್ಷ ಅಸಮಾಧಾನ ವ್ಯಕ್ತಪಡಿಸಿದ ವಾಟಾಳ್ ನಾಗರಾಜ್, ಬಂದ್‌ಗೆ ನೈತಿಕ ಬೆಂಬಲ ಅನ್ನೋರು ಮನೆಯಲ್ಲಿ ಕೂತುಕೊಳ್ಳಿ. ಸುಮ್ಮನೆ ಸಂಘಟನೆ ಯಾಕೆ ಇಟ್ಟುಕೊಳ್ತಿರಾ. ಅನೇಕ ಕನ್ನಡಪರ ಸಂಘಟನೆಗಳು ನಮಗೆ ಬೆಂಬಲ ಕೊಟ್ಟಿವೆ. ನಾವು ಬಂದ್ ಮಾಡುತ್ತೇವೆ. ಇನ್ನೂ 3 ದಿನಗಳ ಕಾಲಾವಕಾಶವಿದೆ. ಬಂದ್ ಸಂಪೂರ್ಣ ಯಶಸ್ವಿಯಾಗಲಿದೆ. ಮಾರ್ಚ್ 22ರಂದು ಬೆಳಗ್ಗೆ 6ರಿಂದ ಸಂಜೆ 6 ಗಂಟೆ ತನಕ ಬಂದ್ ನಡೆಯಲಿದೆ. ಬೆಳಗ್ಗೆ 10.30ಕ್ಕೆ ಟೌನ್‌ಹಾಲ್‌ನಿಂದ ಫ್ರೀಡಂ ಪಾರ್ಕ್‌ವರೆಗೆ ಪ್ರತಿಭಟನಾ ಮೆರವಣಿಗೆ ಮಾಡುತ್ತೇವೆ ಎಂದರು.

'ಶಿವಾಜಿ' ಚಿತ್ರ ಮಾಡಿದರೆ ಹುಷಾರ್!

ಶಿವಾಜಿ ಜೀವನಾಧಾರಿತ ಸಿನಿಮಾ ಮಾಡಲು ನಿರ್ಧರಿಸಿರುವ ಕಾಂತಾರ ಖ್ಯಾತಿಯ ರಿಷಬ್ ಶೆಟ್ಟಿಗೂ 'ಹುಷಾರ್' ಎಚ್ಚರಿಕೆಯನ್ನು ಇದೇ ವೇಳೆ ವಾಟಾಳ್ ನಾಗರಾಜ್ ನೀಡಿದರು. ಹಾಗೆಯೇ ಶಿಕ್ಷಣವೂ ಸೇರಿದಂತೆ ಕೇಂದ್ರದ ಧೋರಣೆ ಖಂಡಿಸಿ ತಮಿಳ್ನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶನಿವಾರ ಚೆನ್ನೈನಲ್ಲಿ ಕರೆದಿರುವ ಸಭೆಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೋಗಬಾರದು ಎಂದು ಆಗ್ರಹಿಸಿದ್ದಾರೆ.



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ
ಮಹಿಳಾ ಸಬಲೀಕರಣ ಬಲಿಷ್ಠ ಭಾರತಕ್ಕೆ ಹಾದಿ... ■ ಪುಟ–4

ಮುಂದಿನ ಚುನಾವಣೆಗಳಲ್ಲಿ ಬಿಜೆಪಿಯ ಧೂಳೀಪಟ ಮಾಡ್ತೇವೆ!

- ವಿಧಾನಪರಿಷತ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು
- ಬಿಜೆಪಿ ಇದುವರೆಗೆ ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬಂದಿಲ್ಲ

ಬೆಂಗಳೂರು, ಮಾ.18(ಕೆಎಂಶಿ)–ಮುಂಬರುವ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಧೂಳೀಪಟ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್ತಿನಲ್ಲಿಂದು ಸವಾಲು ಹಾಕಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ ಇವತ್ತಿನವರೆಗೂ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬಂದೇ ಇಲ್ಲ, ಆಪರೇಷನ್ ಕಮಲದ ಮೂಲಕ ಅಧಿಕಾರ ಹಿಡಿದರು.

ಇನ್ನು ರಾಷ್ಟ್ರಮಟ್ಟದಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಿಂದಿಗಿಂತ ಕಡಿಮೆ ಸ್ಥಾನಗಳನ್ನು ಗಳಿಸಿದೆ. ಮುಂದಿನ ಚುನಾವಣೆಯಲ್ಲಿ ಆ ಪಕ್ಷವನ್ನು ಪ್ರತಿಪಕ್ಷದ ಸ್ಥಾನದಲ್ಲಿ ನೋಡುತ್ತೀರಿ ಎಂದು ಭವಿಷ್ಯ ನುಡಿದರು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರಿಸಿದ ಅವರು, ಇಂದು ಗ್ಯಾರಂಟಿಯನ್ನೇ ಪುನಃ ಪುನಃ ಪ್ರಸ್ತಾಪಿಸಿದ್ದಲ್ಲದೆ, ಕರ್ನಾಟಕದ ಇತಿ ಹಾಸವನ್ನು ಅವಲೋಕಿಸಿದರೆ, ಬಿಜೆಪಿಗೆ ಜನರು ಆಶೀರ್ವಾದವನ್ನೇ ಮಾಡಿಲ್ಲ.



ಇಂತಹವರು ಗ್ಯಾರಂಟಿಗಳಿಂದ ರಾಜ್ಯದ ಖಜಾನೆ ಖಾಲಿ ಆಗಿದೆ. ದಿವಾಳಿ ಆಗಿದೆ ಎಂದು ಟೀಕಿಸುತ್ತಾರೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮೋದಿಕೀ ಗ್ಯಾರಂಟಿ ಎಂದು ಘೋಷಿಸಿದರು.

ಗ್ಯಾರಂಟಿಗಳನ್ನು ವಿರೋಧಿಸಿದ ಬಿಜೆಪಿಯವರು, ಚುನಾವಣೆಯನ್ನು ಎದುರಿಸಿ, ಕಳೆದ ಬಾರಿಗಿಂತ ಈ ಬಾರಿ ಕಡಿಮೆ ಸ್ಥಾನ ಪಡೆದರು. ಗ್ಯಾರಂಟಿ ಯೋಜನೆಯಿಂದ ರಾಜ್ಯದ ಬೊಕ್ಕಸ ಬರಿದಾಗಿಲ್ಲ. ನಾವು ಎಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕೋ ಅಲ್ಲಿ ಕೈಗೊಂಡಿದ್ದೇವೆ. ಇವರ ಕಣ್ಣಿಗೆ ಅದ್ಯಾವುದೂ ಕಾಣಿಸುವುದಿಲ್ಲ. ರೈತರ ಸಾಲ ಮನ್ನಾ ಮಾಡಿ ಎಂದರೆ, ನೋಟ್ ಪ್ರಿಂಟ್ ಮಾಡುವ ಮಿಷನ್ ಇಲ್ಲ ಎಂದು ಯಡಿಯೂರಪ್ಪ ಹೇಳಿದ್ದರು. ■ 6ನೇ ಪುಟಕ್ಕೆ

ಮುಂಜಾನೆ ಸುನೀತಾ ವಿಲಿಯಮ್ಸ್ ಭೂಮಿಗೆ!

8 ದಿನಗಳಲ್ಲಿ ಬರಬೇಕಿದ್ದವರು 9 ತಿಂಗಳ ಬಳಿಕ ವಾಪಸ್

ನವದೆಹಲಿ: ಒಂಭತ್ತು ತಿಂಗಳಿಗೂ ಹೆಚ್ಚು ಕಾಲ ಬಾಹ್ಯಾಕಾಶದಲ್ಲಿ ಅದ್ಭುತ ಸಾಹಸ ಮುಗಿಸಿ ಗಗನಯಾತ್ರಿ ಸುನೀತಾ ವಿಲಿಯಮ್ಸ್ ನಾಳೆ (ಬುಧವಾರ) ಬೆಳಗ್ಗಿನ ಜಾವ ಭೂಮಿಗೆ ವಾಪಸ್ ಆಗಲಿದ್ದಾರೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ತನ್ನ ಸಹ ಗಗನಯಾತ್ರಿ ಬುಚ್ ವಿಲ್ಮೋರ್ ಅವರೊಂದಿಗೆ ಸಿಲುಕಿಕೊಂಡಿದ್ದ ಸುನೀತಾ ನಾಳೆ ಭೂಮಿಗೆ ಬಂದು ತಮ್ಮ ಮನೆಗೆ ಹಿಂದಿರುಗಲಿದ್ದಾರೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆ ಇಂದು ಸಂಜೆ ಗಗನಯಾತ್ರಿಗಳು ಮರಳಲಿದ್ದಾರೆ ಎಂದು ತಿಳಿಸಿದೆ. ಅಂದರೆ ಭಾರತೀಯ ಕಾಲಮಾನದ ಪ್ರಕಾರ ನಾಳೆ ಬೆಳಗಿನ ಜಾವ 3.27ಕ್ಕೆ ವಾಪಸ್ ಆಗಲಿದ್ದಾರೆ.

ಮೊದಲು ಎಂಟೇ ದಿನಗಳ ಕಾಲ ಅಂತರಿಕ್ಷದಲ್ಲಿರುವ ಪ್ಲಾನ್ ಇತ್ತು. ಆದರೆ, ತಾಂತ್ರಿಕ ಸಮಸ್ಯೆಯಿಂದ 9 ತಿಂಗಳು ಅಂತರಿಕ್ಷದಲ್ಲೇ ಇರಬೇಕಾಯ್ತು. ಈಗ ಸುನೀತಾ ವಿಲಿಯಮ್ಸ್, ವಿಲ್ಮೋರ್ ಮತ್ತು ಕ್ರೂ–9 ಕಾರ್ಯಾಚರಣೆಯಲ್ಲಿನ ಇನ್ನಿಬ್ಬರು ಸದಸ್ಯರು ಸ್ಪೇಸ್‌ಎಕ್ಸ್ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯಲ್ಲಿ ಬಾಹ್ಯಾಕಾಶದಿಂದ ಭೂಮಿಗೆ ವಾಪಸ್ ಬರುತ್ತಿದ್ದಾರೆ. ಬೋಯಿಂಗ್ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಸುನೀತಾ ಮತ್ತು ವಿಲ್ಮೋರ್ ಕಳೆದ ವರ್ಷ ಜೂನ್‌ನಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿದ್ದರು. ಆದರೆ, ತಾಂತ್ರಿಕ ಸಮಸ್ಯೆಯಿಂದಾಗಿ ಅವರು ವಾಪಸ್ ಬರುವುದಕ್ಕೆ ಆಗಿರಲಿಲ್ಲ. ಸ್ಟಾರ್‌ಲೈನರ್‌ನಲ್ಲಿ ಸಮಸ್ಯೆ ಇದ್ದಿದ್ದರಿಂದ ಅವರು ಬೇರೆ ಯೋಜನೆ ಮಾಡಬೇಕಾಯಿತು.



ಮೈಸೂರು ಹಳೇ ಡಿಸಿ ಕಚೇರಿ ಕಟ್ಟಡ ಪಾರಂಪರಿಕ ಸಂಗ್ರಹಾಲಯವಾಗಿಸುವ ಪ್ರಕ್ರಿಯೆ ಆರಂಭ

ಸ್ವದೇಶ್ ದರ್ಶನ 2.0 ಅಡಿ ಯೋಜನೆ ಅನುಷ್ಠಾನ, ಡಿಪಿಆರ್ ಅನುಮೋದನೆ, ಟೆಂಡರ್ ಪ್ರಕ್ರಿಯೆ ಆರಂಭ: ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ. ಕೆ.ವಿ. ರಾಜೇಂದ್ರ ಮಾಹಿತಿ


ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಕಟ್ಟಡ.

ಮೈಸೂರು, ಮಾ. 18(ಆರ್‌ಕೆ)– ಮೈಸೂರಿನ ಹೃದಯ ಭಾಗದಲ್ಲಿರುವ ಹಳೇ ಜಿಲ್ಲಾಧಿಕಾರಿ ಕಚೇರಿ (ಅಠಾರ ಕಚೇರಿ) ಕಟ್ಟಡವು ಪಾರಂಪರಿಕ ಸಂಗ್ರಹಾಲಯವಾಗಿ ರೂಪುಗೊಳ್ಳಲಿದೆ.

ಕೇಂದ್ರ ಸರ್ಕಾರದ ಸ್ವದೇಶ್ ದರ್ಶನ 2.0 ಯೋಜನೆಯಡಿ ರಾಜಮನೆತನದ ಆಡಳಿತವನ್ನು ಬಿಂಬಿಸುವ ಪಾರಂಪರಿಕ ಸಂಗ್ರಹಾಲಯವನ್ನಾಗಿ ಹಳೇ ಡಿಸಿ ಕಚೇರಿ ಕಟ್ಟಡವನ್ನು ರೂಪುಗೊಳಿಸುವ ಕಾಮಗಾರಿಗೆ ಡಿಪಿಆರ್ ಅನುಮೋದನೆಯಾಗಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಎಂದು ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ. ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.


ಡಾ. ಕೆ.ವಿ. ರಾಜೇಂದ್ರ

ಈ ಯೋಜನೆ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಡಾ. ರಾಜೇಂದ್ರ, ಮೈಸೂರಿನ ಶ್ರೀಮಂತ ಇತಿಹಾಸ ಮತ್ತು ಪರಂಪರೆಯನ್ನು ಬಿಂಬಿಸುವ ಸಂಗ್ರಹಾಲಯವನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಸ್ವದೇಶ್ 2.0 ಯೋಜನೆಯಡಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಯೋಜನೆಗೆ 80 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದು, ಪ್ರಮುಖ ಪ್ರವಾಸಿತಾಣವನ್ನಾಗಿ ಮೈಸೂರಿನ ಹಳೇ ಡಿಸಿ ಕಚೇರಿ ಕಟ್ಟಡವನ್ನು ಅಭಿವೃದ್ಧಿ ಮಾಡಲು ಸಿದ್ಧಪಡಿಸಿದ್ದ ಡಿಪಿಆರ್ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿ ನಿಗಮವು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಏಜೆನ್ಸಿಯಾಗಿದ್ದು, ಡೆಲಾಯ್ಟ್ ಮತ್ತು ಅರ್ಕಾಡಿಸ್ ಐಬಿಐ ಗ್ರೂಪ್ ಈ ಯೋಜನೆಗೆ ಡಿಪಿಆರ್ ಸಿದ್ಧಪಡಿಸಿತ್ತು. ಸ್ವದೇಶ್ ದರ್ಶನ 2.0 ಅಡಿ ಮೈಸೂರಲ್ಲಿ ಟಾಂಗಾ ರೈಡ್ ಅನುಭವಕ್ಕಾಗಿ 2.3 ಕೋಟಿ ರೂ. ಯೋಜನೆಯನ್ನೂ ಸಿದ್ಧಪಡಿಸಿದೆ ಎಂದು ಡಾ. ರಾಜೇಂದ್ರ ತಿಳಿಸಿದರು.

ಎರಡನೇ ಹಂತದಲ್ಲಿ ನವದೆಹಲಿಯ ಪ್ರಗತಿ ಮೈದಾನದ ಮಾದರಿ ಹಲವು ಚಟುವಟಿಕೆಗಳನ್ನು ಮಾಡಲು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಸಿದ್ಧತೆ ಮಾಡಲಾಗುವುದು. ಹಳೇ ಡಿಸಿ ಕಚೇರಿ ಕಟ್ಟಡದ ಸುತ್ತಲಿನ ಪ್ರದೇಶದಲ್ಲಿ ■ 6ನೇ ಪುಟಕ್ಕೆ

ವಿಸ್ಟಾ ಸ್ಟ್ರೀಟ್‌ಗೆ ಡಿಪಿಆರ್



ಮೈಸೂರು, ಮಾ. 18(ಆರ್‌ಕೆ)– ಜಿಲ್ಲಾಧಿಕಾರಿ ಕಚೇರಿಯನ್ನು 2023ರ ಜೂನ್ ಮಾಹೆಯಲ್ಲಿ ಮೈಸೂರಿನ ಸಿದ್ಧಾರ್ಥನಗರದಲ್ಲಿ ನಿರ್ಮಿಸಿರುವ ಹೊಸ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣಕ್ಕೆ ಸ್ಥಳಾಂತರಗೊಳಿಸಿದ ಬಳಿಕ ಹಳೇ ಡಿಸಿ ಕಚೇರಿ ಅನಾಥವಾಗಿದೆ.

23ನೇ ಮೈಸೂರು ಮಹಾರಾಜರಾಗಿದ್ದ 10ನೇ ಚಾಮರಾಜ ಒಡೆಯರ್ ಆಡಳಿತದಲ್ಲಿ ನಿರ್ಮಿಸಿದ್ದ 129 ವರ್ಷಗಳ ಹಳೆಯ ಪಾರಂಪರಿಕ ಕಟ್ಟಡಕ್ಕೆ ಪಾರಂಪರಿಕ ಸ್ಪರ್ಶ ನೀಡಲು ಮುಂದಾಗಿರುವ ಪ್ರವಾಸೋದ್ಯಮ ಇಲಾಖೆಯು, ಕಟ್ಟಡದ ಎದುರಿನ ಜೆಎಲ್‌ಬಿ ರಸ್ತೆವರೆಗಿನ ಮಾರ್ಗವನ್ನು ವಿಸ್ಟಾ ಸ್ಟ್ರೀಟ್ ಆಗಿ ಮಾಡಲು ಡಿಪಿಆರ್ ಸಿದ್ಧಪಡಿಸಿದೆ.

ಪ್ರವಾಸಿಗರ ಅನುಭವಕ್ಕಾಗಿ ಈ ರಸ್ತೆಯಲ್ಲಿ ಶಿಲ್ಪಕಲೆಗಳು, ಮೈಸೂರಿನ ಇತಿಹಾಸ, ಕಲೆ, ಸಂಸ್ಕೃತಿ ಬಿಂಬಿಸುವ ಗೋಡೆಗಳು, ಒಡೆಯರ್ ಆಳ್ವಿಕೆ, ಟಿಪ್ಪುಸುಲ್ತಾನ ಆಡಳಿತದ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ಮೈಸೂರು ನಗರ ರಚನೆಯ ಐತಿಹಾಸಿಕ ಘಟನೆಗಳ ನಕ್ಷೆ, ಕರ್ನಾಟಕ ಸಂಗೀತ, ದಸರಾ ಮಹೋತ್ಸವ ವೈಭವ, ಫುಡ್ ಸ್ಟಾಲ್, ಇಲ್ಲಿನ ಸಾಂಪ್ರದಾಯಿಕ ಆಚರಣೆಗಳು ಹಳೇ ಡಿಸಿ ಕಚೇರಿ ಸುತ್ತ ಕಾಣಸಿಗುವಂತೆ ಮಾಡಲು ಯೋಜನೆ ರೂಪಿಸಲಾಗಿದೆ. ಡಿ. ದೇವರಾಜ ಅರಸು ರಸ್ತೆಯ ■ 6ನೇ ಪುಟಕ್ಕೆ

ಹೋಳಿ ಊಟ ಸೇವನೆ: ಸಾವಿನ ಸಂಖ್ಯೆ 2ಕ್ಕೇರಿಕೆ

ವಿದ್ಯಾರ್ಥಿಗಳ ಸಾವಿನ ಬಗ್ಗೆ ಸಮಗ್ರ ಮಾಹಿತಿ ಪಡೆಯಲು ಮೇಘಾಲಯ ಸರ್ಕಾರದಿಂದ ಕರ್ನಾಟಕಕ್ಕೆ ಇಬ್ಬರು ಅಧಿಕಾರಿಗಳ ನಿಯೋಜನೆ

ಮೈಸೂರು, ಮಾ. 18(ಆರ್‌ಕೆ)– ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಟಿ. ಕಾಗೇಪುರದ ಗೋಕುಲ ವಿದ್ಯಾ ಸಂಸ್ಥೆ ಹಾಸ್ಟೆಲ್‌ನಲ್ಲಿ ಹೋಳಿ ಊಟ ಸೇವಿಸಿದ್ದ ಮತ್ತೋರ್ವ ವಿದ್ಯಾರ್ಥಿ ಸೋಮವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ.

ಮೇಘಾಲಯ ಮೂಲದ ವಿದ್ಯಾರ್ಥಿ ನ್ಯಾಮೋ ಬಂಟಿ ಎಂಬ 13 ವರ್ಷದ ಬಾಲಕ ಸಾವನ್ನಪ್ಪಿದ್ದು, ಮಾರ್ಚ್ 16ರಂದು ಮೇಘಾಲಯ ವಿದ್ಯಾರ್ಥಿ ಕಿರ್ಶನ್ ಲ್ಯಾಂಗ್(13) ಮೃತಪಟ್ಟಿದ್ದ. ಹಾಸ್ಟೆಲ್‌ನಲ್ಲಿ ಹೋಳಿ ಊಟ ಸೇವಿಸಿ ಅಸ್ವಸ್ಥರಾಗಿದ್ದ 31 ಮಂದಿ ವಿದ್ಯಾರ್ಥಿಗಳ ಪೈಕಿ ಈವರೆಗೆ ಇಬ್ಬರು ಸಾವನ್ನಪ್ಪಿದಂತಾಗಿದೆ.

ಘಟನೆಯಿಂದ ತೀವ್ರವಾಗಿ ಅಸ್ವಸ್ಥನಾಗಿದ್ದ ನ್ಯಾಮೋ ಬಂಟಿಯನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿರಿಸಲಾಗಿತ್ತಾದರೂ, ಚೇತರಿಸಿಕೊಳ್ಳದ ಕಾರಣ ಸೋಮವಾರ ಮಧ್ಯಾಹ್ನ ಆತನನ್ನು ಮೈಸೂರಿನ ಅಪೊಲೋ ಬಿಜಿಎಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ರಾತ್ರಿ 10.30 ಗಂಟೆ ನಂತರ ಕೊನೆಯುಸಿರೆಳೆದ ಎಂದು ಮಂಡ್ಯ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮೋಹನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಹೋಳಿ ಹಬ್ಬದ ಊಟ ■ 6ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 19 ಮಾರ್ಚ್ 2025

ಮೊಬೈಲ್ ಫೋಟೋಗ್ರಫಿ ಕಾರ್ಯಾಗಾರ



ಮೊಬೈಲ್ ಫೋಟೋಗ್ರಫಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಸದಸ್ಯರ ಜೊತೆ ಸಂಪನ್ಮೂಲ ವ್ಯಕ್ತಿಗಳಾದ ಬಿ.ಎಸ್.ರಾಜಾರಾಂ, ಜಿ.ಎಲ್.ತ್ರಿಪುರಾಂತಕ ಚಿತ್ರದಲ್ಲಿದ್ದಾರೆ.

ಮೈಸೂರು: ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಭಾಂಗಣದಲ್ಲಿ ಮೊಬೈಲ್ ಫೋಟೋಗ್ರಫಿ ಹಾಗೂ ವಿಡೀಯೋಗ್ರಫಿಯ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಬೆಂಗಳೂರು ಸೇರಿದಂತೆ ವಿವಿಧೆಡೆಗಳಿಂದ ಬಂದಿದ್ದ 25ಕ್ಕೂ ಹೆಚ್ಚು ಆಸಕ್ತರು ಕಾರ್ಯಾಗಾರದಲ್ಲಿ ತರಬೇತಿ ಪಡೆದರು. ವೈದ್ಯರು, ಸಾಫ್ಟ್‌ವೇರ್ ಇಂಜಿನಿಯರ್ಸ್, ಬ್ಯಾಂಕ್ ಮ್ಯಾನೇಜರ್ಸ್, ಶಿಕ್ಷಕರು, ಉದ್ಯಮಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅನುಭವಿ ಛಾಯಾಗ್ರಾಹಕ ಬಿ.ಎಸ್.ರಾಜಾರಾಂ, ಜಿ.ಎಲ್.ತ್ರಿಪುರಾಂತಕ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಮೊಬೈಲ್ ಕ್ಯಾಮರಾದಲ್ಲಿ ಉತ್ತಮ ಚಿತ್ರ ಹಾಗೂ ವಿಡೀಯೋಗಳನ್ನು ಸೆರೆ ಹಿಡಿಯುವ ಕೌಶಲ ಅಷ್ಟೇ ಅಲ್ಲದೆ ಸುಲಭವಾಗಿ ಎಡಿಟ್ ಮಾಡಬಹುದಾದ ತಂತ್ರಜ್ಞಾನವನ್ನು ಕಾರ್ಯಾಗಾರದಲ್ಲಿ ಪ್ರಾತ್ಯಕ್ಷಿಕೆ ಸಹಿತ ತರಬೇತಿ ನೀಡಲಾಯಿತು. ಸ್ಥಳದಲ್ಲಿಯೇ ಒಂದು ಛಾಯಾಚಿತ್ರ ಸ್ಪರ್ಧೆ ಏರ್ಪಡಿಸಿ, ಉತ್ತಮ ಚಿತ್ರ ಸೆರೆಹಿಡಿದ ಸಿ.ಎನ್.ಅನಂತ ರಾಜ್ ಅವರಿಗೆ ಬಹುಮಾನ ನೀಡಿದರು. ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಸದಸ್ಯರಿಗೂ ಕೊನೆಯಲ್ಲಿ ಸರ್ಟಿಫಿಕೇಟ್‌ಗಳನ್ನು ನೀಡಲಾಯಿತು.

ಕಾರ್ಯಾಗಾರದಲ್ಲಿ ಮೊಬೈಲ್ ಫೋನ್‌ನಲ್ಲಿ ಸೆರೆಹಿಡಿದಿದ್ದ 60ಕ್ಕೂ ಹೆಚ್ಚು ಅತ್ಯುತ್ತಮ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್‌ನಲ್ಲಿ ಸೇಪಿಯೇಂಟ್, ಟೇಬಲ್ ಟೆನ್ನಿಸ್‌ನಲ್ಲಿ ಸಂತ ಜೋಸೆಫ್ ಪ್ರಥಮ



ಮೈಸೂರು ವಿವಿ ಅಂತರ ಕಾಲೇಜು ಚಾಮುಂಡಿ ವಲಯದ ಬ್ಯಾಸ್ಕೆಟ್ ಬಾಲ್ ಮತ್ತು ಟೇಬಲ್ ಟೆನ್ನಿಸ್ (ಪುರುಷರ) ಪಂದ್ಯಾವಳಿಯಲ್ಲಿ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ಬಹುಮಾನ ಪಡೆದರು.

ಮೈಸೂರು, ಮಾ.18– ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಚಾಮುಂಡಿ ವಲಯದ ಬ್ಯಾಸ್ಕೆಟ್ ಬಾಲ್ ಮತ್ತು ಟೇಬಲ್ ಟೆನ್ನಿಸ್ (ಪುರುಷರ) ಪಂದ್ಯಾವಳಿಯಲ್ಲಿ ಜಯಲಕ್ಷ್ಮೀಪುರಂನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿದರು. ಈ ಸ್ಪರ್ಧೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದು, ಸ್ಪರ್ಧೆಯಲ್ಲಿ ನಗರದ 18 ಬ್ಯಾಸ್ಕೆಟ್ ಬಾಲ್ ತಂಡಗಳು ಮತ್ತು 22 ಟೇಬಲ್ ಟೆನ್ನಿಸ್ ತಂಡಗಳು ಭಾಗವಹಿಸಿದ್ದವು.

ಸಮಾರೋಪ ಸಮಾರಂಭದಲ್ಲಿ ಎಂ.ಡಿ.ಇ.ಎಸ್‌ನ ಕಾರ್ಯದರ್ಶಿ ರೆವೆರೆಂಡ್ ಫಾದರ್ ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ, ಖಜಾಂಚಿ ರೆವೆರೆಂಡ್ ಫಾದರ್ ನವೀನ್‌ಕುಮಾರ್, ಕಾಲೇಜಿನ ಪ್ರಾಂಶುಪಾಲರಾದ ಚಂದ್ರಶೇಖರ, ಉಪಪ್ರಾಂಶುಪಾಲೆ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಶ್ರೀಮತಿ ಶಿಲ್ಪಾ, ದೈಹಿಕ ಶಿಕ್ಷಣ ನಿರ್ದೇಶಕ ವೆಂಕಟೇಶ್, ಪಂದ್ಯದ ಅಧಿಕಾರಿಗಳು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಸೇಪಿಯೇಂಟ್ ಕಾಲೇಜು ಪ್ರಥಮ ಸ್ಥಾನ ಪಡೆದುಕೊಂಡರೆ, ಆತಿಥೇಯ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು ಎರಡನೇ ಸ್ಥಾನ ಪಡೆದುಕೊಂಡಿತು. ಕ್ರೈಸ್ಟ್ ಕಾಲೇಜು ಮೂರನೇ ಸ್ಥಾನ ಪಡೆದುಕೊಂಡಿದೆ. ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು ಪ್ರಥಮ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಎರಡನೇ ಹಾಗೂ ಫಿಲೋಮಿನಾ ಕಾಲೇಜು ಮೂರನೇ ಸ್ಥಾನವನ್ನು ಪಡೆದುಕೊಂಡಿತು.

ತಗಡೂರು ರಾಮಚಂದ್ರರಾಯರಿಗೆ ಗೌರವ ಸಮರ್ಪಣೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷೀಯ ಚುನಾವಣಾ ಅಭ್ಯರ್ಥಿ ಎಸ್.ರಘುನಾಥ್ ಮೈಸೂರಿನ ಚಾಮುಂಡಿಪುರಂನಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರಾದ ತಗಡೂರು ರಾಮಚಂದ್ರರಾವ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ.ಶ್ರೀಕಂಠ ಕುಮಾರ್, ಡಾ.ಲಕ್ಷ್ಮೀದೇವಿ, ಶಂಕರ ನಾರಾಯಣ, ಶ್ರೀನಿವಾಸಪ್ರಸಾದ್, ಜಿ.ಆರ್.ಮೋಹನ್, ಹೆಚ್.ಎಸ್.ರಮೇಶ್, ಶ್ರೀನಿವಾಸ್, ರಂಗನಾಥ್, ಸುಂದರ್ ಇದ್ದರು.

ಡಾ.ಬಿ.ಚಂದ್ರಶೇಖರ್‌ಗೆ ಸನ್ಮಾನ...



ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ನೂತನ ಜಂಟಿ ನಿರ್ದೇಶಕ ಡಾ.ಬಿ.ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ನಿಧನ



ಹೆಚ್.ವಿ.ಗೋವಿಂದರಾಜು

ಮೈಸೂರು, ಮಾ.18–ಮೈಸೂರಿನ ಕುವೆಂಪುನಗರದ ಕೆಹೆಚ್‌ಬಿ ಕಾಲೋನಿ ನಿವಾಸಿ, ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ನಿವೃತ್ತ ಕಚೇರಿ ವ್ಯವಸ್ಥಾಪಕ ಹೆಚ್.ವಿ.ಗೋವಿಂದರಾಜು(76) ಅವರು ಇಂದು ಮುಂಜಾನೆ ನಿಧನರಾದರು.

ಅವರು ಪತ್ನಿ ಸುನಂದ ಗೋವಿಂದರಾಜು, ಪುತ್ರ ಡಾ.ಶ್ರೀಚಂದ್, ಸೊಸೆ ದೀಪಿಕಾ ಶ್ರೀಚಂದ್, ಮೂವರು ಸಹೋದರಿಯರು, ಓರ್ವ ಸಹೋದರ, ಸ್ನೇಹಿತರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇಂದು ಸಂಜೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರ್ಥಪೂರ್ಣವಾಗಿ ದೇವರ ದಾಸಿಮಯ್ಯ ಜಯಂತಿ ಆಚರಣೆ

ಮಹಾನುಭಾವರ ಆಚಾರ–ವಿಚಾರ, ಸಂದೇಶಗಳನ್ನು ಸಮಾಜಕ್ಕೆ ತಲುಪಿಸಲು ಜಯಂತಿ ಅವಶ್ಯ: ಎಡಿಸಿ ಡಾ.ಪಿ.ಶಿವರಾಜು



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ದೇವರ ದಾಸಿಮಯ್ಯ ಜಯಂತಿ, ಭಗವಾನ್ ಮಹಾವೀರ ಜಯಂತಿಗಳ ಆಚರಣೆ ಸಂಬಂಧ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು,ಮಾ.18– ವಿವಿಧ ಜಯಂತಿಗಳನ್ನು ಅರ್ಥಪೂರ್ಣ ಹಾಗೂ ಮಹಾನುಭಾವರು, ಸಾಧಕರ ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ಜಯಂತಿಗಳ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವಿವಿಧ ಜಯಂತಿಗಳಾದ ದೇವರ ದಾಸಿಮಯ್ಯ ಜಯಂತಿ ಹಾಗೂ ಭಗವಾನ್ ಮಹಾವೀರ ಜಯಂತಿಗಳ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಏಪ್ರಿಲ್ 2ರಂದು ಬೆಳಗ್ಗೆ ದೇವರ ದಾಸಿಮಯ್ಯ ಜಯಂತಿಯ ಮೆರವಣಿಗೆ ಕೋಟೆ ಆಂಜನೇಯ ದೇವಸ್ಥಾನದ ಆವರಣದಿಂದ ಬೆಳಗ್ಗೆ 9.30 ಗಂಟೆಗೆ ನಡೆಯುತ್ತದೆ. ಬೆಳಗ್ಗೆ 11.30 ಗಂಟೆಗೆ ದೇವರ ದಾಸಿಮಯ್ಯ ಜಯಂತಿಯನ್ನು ಕರ್ನಾಟಕ ಕಲಾಮಂದಿರದಲ್ಲಿ ಆಚರಿಸಲಾಗುವುದು. ಏ.10ರಂದು ಸಂಜೆ 4 ಗಂಟೆಗೆ ಗೀತ ಗಾಯನ ಹಾಗೂ ಸಂಜೆ 6 ಗಂಟೆಗೆ ಭಗವಾನ್ ಮಹಾವೀರ ಜಯಂತಿಯನ್ನು ಕಲಾಮಂದಿರದಲ್ಲಿ ಆಚರಣೆ ಮಾಡಲಾಗುವುದು ಎಂದು ತಿಳಿಸಿದರು.

ಜಯಂತಿಗಳ ಆಚರಣೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ. ಎಲ್ಲಾ ಸಮುದಾಯದವರು ಸೇರಿ ಜಯಂತಿಗಳ ಆಚರಣೆ ಮಾಡಬೇಕು. ಆಚರಣೆಯ ಉದ್ದೇಶ ಮಹನೀಯರ ಆದರ್ಶಗಳನ್ನು ಪಾಲನೆ ಮಾಡುವುದೂ ಆಗಿದೆ ಎಂದು ತಿಳಿಸಿದರು.

ಮೆರವಣಿಗೆ ಪ್ರಾರಂಭವಾಗುವ ಸ್ಥಳವಾದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶಾಮಿಯಾನ, ಸ್ವಚ್ಛತೆ, ಚೇರ್‌ಗಳ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ತಳಿರು ತೋರಣ, ಊಟದ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಮಾಡಬೇಕು. ಸಮುದಾಯದ ಮುಖಂಡರು ತಮ್ಮ ತಮ್ಮ ಸಮುದಾಯದ ಬಡವರಿಗೆ ಶೈಕ್ಷಣಿಕ ಹಾಗೂ ಇನ್ನಿತರೆ ರೀತಿಯಲ್ಲಿ ಸಹಾಯ ಮಾಡಬೇಕು. ಜಯಂತಿಗಳನ್ನು ಆಚರಣೆ ಮಾಡುವುದು ಅವರ ವಿಚಾರಧಾರೆಗಳನ್ನು ಯುವ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಜಯಂತಿಗಳನ್ನು ಆಚರಣೆ ಮಾಡಿದ್ದಕ್ಕೂ ಒಂದು ಅರ್ಥ ಬರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಿಎಂ ಸುದರ್ಶನ್, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಹೊಸ ಶೋರೂಂ ಚಿತ್ರದುರ್ಗದಲ್ಲಿ ಆರಂಭ



ಚಿತ್ರದುರ್ಗದಲ್ಲಿ ತೆರೆಯಲಾಗಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ನೂತನ ಶೋರೂಂ ಉದ್ಘಾಟನಾ ಸಮಾರಂಭದಲ್ಲಿ ಖ್ಯಾತ ನಟಿ ಶ್ರೀನಿಧಿ ಶೆಟ್ಟಿ, ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಆಡಳಿತ ಮಂಡಳಿಯ ಸದಸ್ಯರು, ಗ್ರಾಹಕರು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

ಚಿತ್ರದುರ್ಗ,ಮಾ.18–ಪ್ರಸಿದ್ಧ ಆಭರಣ ತಯಾರಕರಾದ ಮಲಬಾರ್ ಗೋಲ್ಡ್ & ಡೈಮಂಡ್ಸ್ ಚಿತ್ರದುರ್ಗದಲ್ಲಿ ಶೋರೂಂ ಆರಂಭಿಸಿದೆ. ಹೊಸ ವೈವಿಧ್ಯಮಯ ವಿನ್ಯಾಸಗಳು ಮತ್ತು ಶೈಲಿಗಳಲ್ಲಿ ಆಭರಣಗಳ ಸೊಗಸಾದ ಸಂಗ್ರಹದೊಂದಿಗೆ ಗ್ರಾಹಕರಿಗೆ ವಿಶ್ವದರ್ಜೆಯ ಶಾಪಿಂಗ್ ಅನುಭವ ನೀಡಲು ಈ ಹೊಸ ಶೋರೂಂ ಅನ್ನು ವಿನ್ಯಾಸಗೊಳಿಸಲಾಗಿದೆ. ಈ ಸುಸಂದರ್ಭದಲ್ಲಿ ಮಾರ್ಚ್ 16ರಿಂದ 23ರವರೆಗೆ ಗ್ರಾಹಕರು ಪ್ರತಿ ಖರೀದಿಯೊಂದಿಗೆ ಉಚಿತ ಬೆಳ್ಳಿ ನಾಣ್ಯವನ್ನು ಪಡೆಯುವ ಸದವಕಾಶ ಕಲ್ಪಿಸಲಾಗಿದೆ. ಈ ಶೋರೂಂ ಸೇರಿದಂತೆ ಕರ್ನಾಟಕದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ 40 ಶೋರೂಂಗಳಿವೆ.

ನೂತನ ಶೋರೂಂ ಉದ್ಘಾಟನಾ ಸಮಾರಂಭದಲ್ಲಿ ಖ್ಯಾತ ನಟಿ ಶ್ರೀನಿಧಿ ಶೆಟ್ಟಿ, ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಆಡಳಿತ ಮಂಡಳಿಯ ಸದಸ್ಯರು, ಗ್ರಾಹಕರು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

ಭಾರತ, ಮಧ್ಯಪ್ರಾಚ್ಯ, ಯುಎಸ್‌ಎ, ಯುಕೆ, ಕೆನಡಾ ಮತ್ತು ಆಸ್ಟ್ರೇಲಿಯಾ ಸೇರಿದಂತೆ 13 ದೇಶಗಳಲ್ಲಿ 375 ಕ್ಕೂ ಹೆಚ್ಚು ಶೋರೂಂಗಳ ಜಾಗತಿಕ ಜಾಲ ಹೊಂದಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್ ತನ್ನ ವ್ಯಾಪಕ ಸಂಗ್ರಹಗಳು, ಅಸಾಧಾರಣ ಗುಣಮಟ್ಟ ಮತ್ತು ಗ್ರಾಹಕ–ಕೇಂದ್ರಿತ ವಿಧಾನಕ್ಕೆ ಹೆಸರುವಾಸಿಯಾಗಿದೆ.

ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ.ಅಹಮ್ಮದ್ ಮಾತನಾಡಿ, ಚಿತ್ರದುರ್ಗದಲ್ಲಿ ನಮ್ಮ ಹೊಸ ಶೋರೂಂ ಆರಂಭಿಸಿರುವುದಕ್ಕೆ ಅತ್ಯಂತ ಸಂತೋಷವಾಗಿದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ, ಜಟಿಲತೆ ಮತ್ತು ಕುಶಲಕರ್ಮಿತ್ವವನ್ನು ಆಚರಿಸುವ ಆಭರಣಗಳನ್ನು ರಚಿಸುವಲ್ಲಿ ನಾವು ಹೆಮ್ಮೆಪಡುತ್ತೇವೆ. ಗುಣಮಟ್ಟ, ನೈತಿಕ ವ್ಯವಹಾರ ಅಭ್ಯಾಸಗಳು ಮತ್ತು ಗ್ರಾಹಕರ ತೃಪ್ತಿಗೆ ಅಚಲ ಬದ್ಧತೆಯೊಂದಿಗೆ, ನಮ್ಮ ಅಸಾಧಾರಣ ಸಂಗ್ರಹಗಳನ್ನು ಚಿತ್ರದುರ್ಗದ ಜನರಿಗೆ ಪ್ರಸ್ತುತಪಡಿಸುತ್ತಿದ್ದೇವೆ ಎಂದರು.

ಫೆಮಾ ಉಲ್ಲಂಘನೆ: ಬೆಂಗಳೂರಲ್ಲಿ ಜಾರ್ಜ್ ಸೊರೊಸ್ ಸಂಸ್ಥೆ ಮೇಲೆ ಇಡಿ ದಾಳಿ

ಬೆಂಗಳೂರು: ಅಮೆರಿಕದ ಬಿಲಿಯನೇರ್ ಜಾರ್ಜ್ ಸೊರೊಸ್ ಸ್ಥಾಪಿಸಿದ ಖಾಸಗಿ ಹಣಕಾಸು ಸಂಸ್ಥೆ ಓಪನ್ ಸೊಸೈಟಿ ಫೌಂಡೇಶನ್ ಮತ್ತು ಅದರ ಹೂಡಿಕೆ ವಿಭಾಗ EDF ವಿರುದ್ಧದ ವಿದೇಶಿ ವಿನಿಮಯ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಬೆಂಗಳೂರಿನಲ್ಲಿ ಶೋಧ ನಡೆಸಿದೆ. ಓಪನ್ ಸೊಸೈಟಿ ಫೌಂಡೇಶನ್ಸ್ ಮತ್ತು ಎಕನಾಮಿಕ್ ಡೆವಲಪ್‌ಮೆಂಟ್ ಫಂಡ್‌ನ ಕಚೇರಿ ಸೇರಿದಂತೆ ಎಂಟು ಕಡೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಎರಡು ಸೊರೊಸ್ ಸಂಸ್ಥೆಗಳು ವಿದೇಶಿ ನೇರ ಹೂಡಿಕೆ ಪಡೆಯುತ್ತಿವೆ ಮತ್ತು ಕೆಲವು ಫಲಾನುಭವಿಗಳು FEMA ಮಾರ್ಗಸೂಚಿಗಳ ಉಲ್ಲಂಘಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಇಡಿ ತನಿಖೆ ನಡೆಸುತ್ತಿದೆ. OSF ಭಾರತದಲ್ಲಿ 1999ರಿಂದ ಕಾರ್ಯನಿರ್ವಹಿಸುತ್ತಿದೆ. ಆರಂಭದಲ್ಲಿ OSF ವಿದ್ಯಾರ್ಥಿವೇತನಗಳನ್ನು ನೀಡುತ್ತಿತ್ತು. ನಂತರ ಅನುದಾನ ನೀಡಿಕೆ ಕಾರ್ಯಕ್ರಮಗಳಿಗೆ ವಿಸ್ತರಿಸಿತ್ತು. ಓಪನ್ ಸೊಸೈಟಿ ಫೌಂಡೇಶನ್ ವಿಶ್ವಾದ್ಯಂತ ನ್ಯಾಯ, ಶಿಕ್ಷಣ, ಸಾರ್ವಜನಿಕ ಆರೋಗ್ಯ ಹಾಗೂ ಸ್ವತಂತ್ರ ಮಾಧ್ಯಮಗಳನ್ನು ಮುನ್ನಡೆಸುವ ಗುಂಪುಗಳಿಗೆ ಸಹಾಯ ಮಾಡುತ್ತಿದೆ. ಅಧಿಕೃತ ಅಂಕಿಅಂಶಗಳ ಪ್ರಕಾರ 2021ರಲ್ಲಿ ಭಾರತದಲ್ಲಿ 4,06,000 ಡಾಲರ್ ಖರ್ಚು ಮಾಡಿದೆ ಎಂದು ಓಎಸ್‌ಎಫ್ ಹೇಳಿತ್ತು.

ಸುನೀತಾ ವಿಲಿಯಮ್ಸ್‌ಗೆ ಶುಭ ಕೋರಿ ಪ್ರಧಾನಿ ಮೋದಿ ಪತ್ರ: ಭಾರತಕ್ಕೆ ಆಹ್ವಾನ!



ನವದೆಹಲಿ: ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಪತ್ರ ಬರೆದಿದ್ದು, ಅವರನ್ನು ಭಾರತ ಭೇಟಿಗೆ ಆಹ್ವಾನಿಸಿದ್ದಾರೆ. ಸುನೀತಾ ವಿಲಿಯಮ್ಸ್ ಸುರಕ್ಷಿತ ವಾಪಸಾತಿಗಾಗಿ ಇಡೀ ವಿಶ್ವವೇ ಉಸಿರು ಬಿಗಿಹಿಡಿದು ಕಾಯುತ್ತಿತ್ತು. ಇಂತಹ ವೇಳೆ ನರೇಂದ್ರ ಮೋದಿ ಭಾರತ ಮೂಲದ ವಿಲಿಯಮ್ಸ್ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದಾರೆ. ನೀವು ಸಾವಿರಾರು ಮೈಲುಗಳಷ್ಟು ದೂರದಲ್ಲಿದ್ದರೂ, ನಮ್ಮ ಹೃದಯಕ್ಕೆ ಹತ್ತಿರವಾಗಿದ್ದೀರಿ ಎಂದು ಗಗನಯಾತ್ರಿ ಮೈಕ್ ಮಾಸ್ಸಿಮಿನೊ ಮೂಲಕ ಕೆಲ ದಿನಗಳ ಹಿಂದೆ ಸುನೀತಾ ವಿಲಿಯಮ್ಸ್‌ಗೆ ಪ್ರಧಾನಿ ಮೋದಿ ಕಳುಹಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ. ಕೆಲವು ದಿನಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ಮಾಸ್ಸಿಮಿನೊ ಅವರನ್ನು ಭೇಟಿ ಮಾಡಿದ್ದ ಪ್ರಧಾನಿ ಮೋದಿ ಈ ಪತ್ರ ಆಕೆಯನ್ನು ತಲುಪಬೇಕು ಎಂದು ಮನವಿ ಮಾಡಿದ್ದರು. ವಿಲಿಯಮ್ಸ್ ವಿಲ್ಮೋರ್ ಜೂ.5ರಂದು ಬೋಯಿಂಗ್ ಸ್ಟಾರ್ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ಆದರೆ ಪ್ರೊಪಲ್ಷನ್ ಸಿಸ್ಟಂ ಅಸಮರ್ಪಕ ಕಾರ್ಯನಿರ್ವಹಣೆ ಸೇರಿದಂತೆ ತಾಂತ್ರಿಕ ಸಮಸ್ಯೆಗಳಿಂದ ಅವರ ಮರಳುವಿಕೆ ವಿಳಂಬವಾಯಿತು. ಸೆಪ್ಟೆಂಬರ್ 2024ರಲ್ಲಿ ಸ್ಟಾರ್ಲೈನರ್ ಅನ್ನು ಸಿಬ್ಬಂದಿಗಳಿಲ್ಲದೆ ಭೂಮಿಗೆ ವಾಪಾಸ್ ಕಳುಹಿಸಿದಾಗ ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿಯೇ ಉಳಿಯಬೇಕಾಯಿತು.

ರಾಷ್ಟ್ರೀಯ ಯುವಜನೋತ್ಸವ: ಮೈಸೂರು ಜೆಎಸ್‌ಎಸ್‌ಎಸ್ ಕಾಲೇಜಿಗೆ ಕಂಚಿನ ಪದಕ



ಉತ್ತರಪ್ರದೇಶದ ಅಮಿಟಿ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಯುವಜನೋತ್ಸವ ಸ್ಪರ್ಧೆಯಲ್ಲಿ ಜೆಎಸ್‌ಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ವಿವಿಯನ್ನು ಪ್ರತಿನಿಧಿಸಿ ಮೂಕಾಭಿನಯ ಸ್ಪರ್ಧೆಯಲ್ಲಿ ಭಾಗವಹಿಸಿ ಕಂಚಿನ ಪದಕ ಪಡೆದಿದ್ದಾರೆ.

ಮೈಸೂರು, ಮಾ.18– ಉತ್ತರಪ್ರದೇಶದ ಅಮಿಟಿ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ್ದ 38ನೇ ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ರಾಷ್ಟ್ರೀಯ ಮಟ್ಟದ ಯುವಜನೋತ್ಸವ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ ಮೂಕಾಭಿನಯ ಸ್ಪರ್ಧೆಯಲ್ಲಿ ಭಾಗವಹಿಸಿ ಕಂಚಿನ ಪದಕವನ್ನು ಪಡೆದಿದ್ದಾರೆ.

ಒಟ್ಟು 23 ವಿಶ್ವವಿದ್ಯಾನಿಲಯಗಳು ಭಾಗವಹಿಸಿದ್ದ ಮುಕಾಭಿನಯ ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಹರ್ಷವರ್ಧನ್, ಶಿವಾನಿ, ಹರ್ಷಿತ, ಕ್ರಿಷ್ಮ, ಹರ್ಷಿತ ಎಚ್‌ಪಿ, ಭಾನುಪ್ರಕಾಶ್ ಭಾಗವಹಿಸಿದ್ದರು. ಅಂಕರಾಜು ನಿರ್ದೇಶಿಸಿದ ಮೊಬೈಲಿನಿಂದ ಆಗುವ ಅನಾಹುತಗಳ ಮೇಲೆ ಈ ಮೂಕಾಭಿನಯವು ಪ್ರದರ್ಶನಗೊಂಡು ಪ್ರಶಸ್ತಿ ಪಡೆಯಿತು.

ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಕಾರ್ಯದರ್ಶಿ ಶ್ರೀಮತಿ ಅನುಪಮ ಬಿ.ಪಂಡಿತ್, ಕಾರ್ಯನಿರ್ವಾಹಣಾಧಿಕಾರಿ ಆರ್.ಕೆ.ಭರತ್, ಪ್ರಾಂಶುಪಾಲ ಡಾ.ರಾಕೇಶ್ ಟಿ.ಎಸ್., ಗ್ರಂಥಪಾಲಕ ಅಂಕರಾಜು ಹಾಗೂ ಅಧ್ಯಾಪಕ, ಅಧ್ಯಾಪಕೇತರ ವೃಂದದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.03.2025 ಬುಧವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025ರಿಂದ 30.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕನ್ನಡ ಲೇಖಕಿಯರ ಟ್ರಸ್ಟ್, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ–2025, ಅಧ್ಯಕ್ಷತೆ: ಕನ್ನಡ ಲೇಖಕಿಯರ ಟ್ರಸ್ಟ್ ಅಧ್ಯಕ್ಷೆ ಪ್ರೊ.ಪದ್ಮಾಶೇಖರ್, ಉದ್ಘಾಟನೆ: ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಉಷಾರಾಣಿ ಎಸ್. ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಮಾನಸ ಯುವ ಸಬಲೀಕರಣ–2025, ಔದ್ಯೋಗಿಕ ಮತ್ತು ಯುವ ಸಬಲೀಕರಣ ಕಾರ್ಯಾಗಾರ, ಸಮಾರೋಪ ಸಮಾರಂಭ, ಮುಖ್ಯ ಅತಿಥಿ : ಮೈಸೂರು ವಿಭಾಗದ ಪೊಲೀಸ್ ಅಧಿಕಾರಿ ಡಾ.ಎ.ಎನ್.ಪ್ರಕಾಶ್‌ಗೌಡ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ.ಸವಿತಾ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ :** ರಾಜ್ಯ ಮಟ್ಟದ ಯುವ ಜನೋತ್ಸವ–2025, 'ನನ್ನ ಭಾರತಕ್ಕಾಗಿ ಯುವ ಜನತೆ' ವಿಶೇಷ ಉಪನ್ಯಾಸ, ಪ್ರೊ. ಕೆ.ಕಾಳೇಗೌಡರಿಂದ, ಯುವ ಜನರು ಮತ್ತು ಸಾಂಸ್ಕೃತಿಕ ನಾಯಕರು ವಿಷಯ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ, ಬೆಳಗ್ಗೆ 6.30ರಿಂದ

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ), ಬೆಳಕು ಗ್ರಾಮೀಣ ಮಹಿಳಾ ಒಕ್ಕೂಟ ಮತ್ತು ಗ್ರಾಮ ಪಂಚಾಯತಿ, ಕೀಳನಪುರ:** ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಮೈಸೂರು ವಿಭಾಗದ ವಿಭಾಗೀಯ ಸಹ ನಿರ್ದೇಶಕ ಡಾ.ಕೆ.ಎಚ್.ಪ್ರಸಾದ್, ಅಧ್ಯಕ್ಷತೆ: ಕೀಳನಪುರ ಗ್ರಾಪಂ ಅಧ್ಯಕ್ಷ ನಂಜುಂಡಸ್ವಾಮಿ, ಆನೇಕಲ್ ಗಮನ ಮಹಿಳಾ ಸಮೂಹದ ಶ್ರೀಮತಿ ಮಮತಾ ಯಜಮಾನ್ ಅವರಿಂದ ಮಹಿಳಾ ಸಶಕ್ತತೆ ಕುರಿತು ವಿಚಾರ ಮಂಡನೆ, ಸ್ಥಳ: ಪ್ರಾಥಮಿಕ ಆರೋಗ್ಯ ಕೇಂದ್ರ ಆವರಣ, ಕೀಳನಪುರ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ–ಎಸ್.ರಾಮನಾಥ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸಿ.ವಿಶ್ವನಾಥ್, ವ್ಯಾಖ್ಯಾನ –ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಚಿತ್ರಗೀತೆಗಳು, 9.00–ವೃತ್ತಿ ಮಾರ್ಗದರ್ಶನ ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿರುವ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್‌ನಲ್ಲಿರುವ ಅಧ್ಯಯನ ಮತ್ತು ಸಂಶೋಧನಾ ಅವಕಾಶಗಳು ಕುರಿತು ಕುಲಸಚಿವ ಕುಮಾರ್. ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00–ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ, 12.35–ದೇವರನಾಮ, 12.45–ಜನಪದ ಸಂಗೀತ: ಟಿ.ನರಸೀಪುರ ತಾಲೂಕು ಬನ್ನೂರಿನ ಚಿಕ್ಕತಾಯಮ್ಮ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00– ಕರ್ನಾಟಕ ಶಾಸ್ತ್ರೀಯ ಸಂಗೀತ: 4.00–ಮಹಿಳಾರಂಗ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ ಮೇವು ಮೆಲುಕು ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಮೇವಿನ ಬೆಳೆಗಳ ಕೀಟ ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಮೇವು ಅಭಿವೃದ್ಧಿ ವಿಭಾಗದ ತಾಂತ್ರಿಕ ಅಧಿಕಾರಿ ಡಾ.ನಾಗೇಶ್ ಚಿಕ್ಕರೂಗಿ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ವಿಧಾನಮಂಡಲದಲ್ಲಿ ಇಂದು, 8.00–ಸಂಸತ್ ಸಮೀಕ್ಷಾ, 8.15 –ಕರ್ನಾಟಕ ಶಾಸ್ತ್ರೀಯ ಸಂಗೀತ: 9.30–ಕ್ರೀಡಾಲೋಕ, 10.00–ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

■ **ಶ್ರೀದೇವಿ ಪಟ್ಟಲದಮ್ಮ ಹಾಗೂ ಶ್ರೀ ಕತ್ತಿ ಮುನೇಶ್ವರ ದೇವಸ್ಥಾನ (ಕುಲ ಪಂಚಾಯತಿ ಸಮಿತಿ) :** 94ನೇ ವರ್ಷದ ಜ್ಯೋತಿ ಕರಗ ಜಾತ್ರಾ ಮಹೋತ್ಸವ, ಮಧ್ಯಾಹ್ನ 2 ಗಂಟೆಗೆ ತಾಯಿಗೆ ತಂಪು ತೋರಿನ, ತಂಬಿಟ್ಟಿನ ಜೊತೆಯಲ್ಲಿ ಊರಿನಲ್ಲಿ ಹಬ್ಬ, ಬೀದಿಗಳಲ್ಲಿ ಮೆರವಣಿಗೆ, ಸ್ಥಳ: ದೇವಸ್ಥಾನದ ಆವರಣ, ಅಶೋಕಪುರಂ.

■ **ಶ್ರೀ ಅವನಿ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ, ಶ್ರೀ ಶಾರದಾ ಪೀಠಂ, ಮೈಸೂರು ಶಾಖೆ:** ಶ್ರೀ ಗಣೇಶ, ಶ್ರೀ ಶಾರದಾಂಬ, ಶ್ರೀ ಶಂಕರ ಭಗವತ್ಪಾದವರ 14ನೇ ಪ್ರತಿಷ್ಠಾನದ ವರ್ಧಂತಿ ಮಹೋತ್ಸವ, ಬೆಳಗ್ಗೆ 8 ಗಂಟೆಗೆ ಗಣಪತಿ ಪೂಜೆ, ಪುಣ್ಯಾಹ, ಮೂಲ ದೇವತಾ ಪ್ರಾರ್ಥನೆ, ಯೋಗ ಸಂಕಲ್ಪ, ಕಳಸಸ್ಥಾಪನೆ, ಪಂಚಾಮೃತಾಭಿಷೇಕ (ಶಾರದಾಂಬೆಗೆ), ಶ್ರೀ ಮಹಾಗಣಪತಿ ಆಧಿವಾಸ ಹೋಗಮ, ಆದಿಪ್ರಾಪ್ತಿ ನವಗ್ರಹ ಹೋಮ, ಶ್ರೀ ಚಂದ್ರಮೌಳೇಶ್ವರ ಆದಿವಾಸ ಹೋಮ, ಕಲಾತತ್ವ ಹೋಮ, ಬೆಳಗ್ಗೆ 11.30ಕ್ಕೆ. ಶ್ರೀ ಶ್ರೀ ಅವನಿ ಮಹಾಸ್ವಾಮಿಗಳ ಆಗಮನ, ಪೂರ್ಣಾಹುತಿ ಮಹಾಮಂಗಳಾರತಿ, ಆಶೀರ್ವಚನ, ಫಲ ಮಂತ್ರಾಕ್ಷತೆ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಶ್ರೀಮತಿ ರೇಖಾ ವೆಂಕಟೇಶ್, ಶಾರದಾ ಕಲಾಕೇಂದ್ರ ಇವರ ಶಿಷ್ಯೆಯರಾದ ಶ್ರೀಮತಿ ಡಾ.ಯಮುನಾ ನಾಗೇಂದ್ರ, ಶ್ರೀಮತಿ ಚೈತ್ರಾ ಮಹೇಶ್, ಶ್ರೀಮತಿ ಸುಪರ್ಣಾ ಸುಧಾಕರ್ ಹಾಗೂ ಶ್ರೀಮತಿ ಸಂಧ್ಯಾ ಜಯಸಿಂಹ ಅವರಿಂದ ಭಕ್ತಿ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀ ಶಾರದಾಪೀಠ, 9ನೇ ಕ್ರಾಸ್, ವಿದ್ಯಾರಣ್ಯಪುರಂ.

ಶೀಘ್ರದಲ್ಲೇ ಮಹಿಳೆಯರ ಖಾತೆಗೆ ಗೃಹಲಕ್ಷ್ಮಿ ಹಣ

• ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ • 2026–27ನೇ ಸಾಲಿಗೆ 7 ರೂ. ಹಾಲಿನ ಪ್ರೋತ್ಸಾಹ ಧನ ಕೊಡ್ತೀವಿ

ಬೆಂಗಳೂರು, ಮಾ.18– ಎಲ್ಲಾ ಗ್ಯಾರಂಟಿ ಯೋಜನೆಗಳಿಗೆ ಈಗಾಗಲೇ ಹಣ ಬಿಡುಗಡೆ ಮಾಡಿದ್ದೇವೆ. ಗೃಹಲಕ್ಷ್ಮಿ ಯೋಜನೆಯ ಹಣ ಜನವರಿಯಿಂದ ಕೊಡಬೇಕಾಗಿದ್ದು, ಶೀಘ್ರದಲ್ಲೇ ಅದನ್ನು ಕೊಡ್ತೀವಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.



ಪರಿಷತ್ ಕಲಾಪದಲ್ಲಿಂದು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಿದ ಸಿಎಂ, ಶೀಘ್ರದಲ್ಲೇ ಗೃಹಲಕ್ಷ್ಮಿ ಹಣ ನೀಡಲಾಗುವುದು. ಅಲ್ಲದೇ ಪ್ರಣಾಳಿಕೆಯಲ್ಲಿ ಹೇಳಿದಂತೆ 2026–27ನೇ ಸಾಲಿಗೆ 7 ರೂಪಾಯಿ ಹಾಲಿನ ಪ್ರೋತ್ಸಾಹ ಧನ ಸಹ ಕೊಡುತ್ತೇವೆ ಎಂದು ತಿಳಿಸಿದರು.

ರೈತರ ಆತ್ಮಹತ್ಯೆಗಳು 50% ಕಡಿಮೆ ಆಗಿದೆ: ಪ್ರಸಕ್ತ ವರ್ಷದಲ್ಲಿ ಶೇ.50 ರೈತರ ಆತ್ಮಹತ್ಯೆಗಳು ಕಡಿಮೆಯಾಗಿದೆ. ಫೆಬ್ರವರಿ ಅಂತ್ಯಕ್ಕೆ 640 ಮಂದಿ ರೈತರ ಆತ್ಮಹತ್ಯೆಯಾಗಿದ್ದು, ಇದು ಬಿಜೆಪಿ ಆಡಳಿತದ ಅವಧಿಗಿಂತ ಕಡಿಮೆಯಾಗಿವೆ ಎಂದು ಸಿಎಂ ಹೇಳಿದರು.

ಮುಂದುವರಿದು, ಪ್ರತಿ ವರ್ಷ 10 ಸಾವಿರ ಕೋಟಿ ರೂ. ನೀರಾವರಿಗೆ ಖರ್ಚು ಮಾಡುವುದಾಗಿ ಕೂಡಲ ಸಂಗಮದಲ್ಲಿ ಹೇಳಿದ್ದೆವು. ಅದರಂತೆ ಕಳೆದ 5 ವರ್ಷಗಳಲ್ಲಿ 56 ಸಾವಿರ ಕೋಟಿ ಖರ್ಚು ಮಾಡಿದ್ದೇವೆ. ಈಗಲೂ 5 ವರ್ಷ 1.5 ಲಕ್ಷ ಕೋಟಿ ರೂ. ಅನುದಾನ ನೀರಾವರಿಗೆ ಕೊಡುತ್ತಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಂದೇ ಹಂತದಲ್ಲಿ ಭೂಸ್ವಾಧೀನ ಮಾಡಿ ದುಡ್ಡು ಕೊಡುತ್ತೇವೆ ಎಂದು ಹೇಳಿದ್ದೇವೆ. ಆದರೆ ಬಿಜೆಪಿಯವರು ಅಧಿಕಾರದಲ್ಲಿದ್ದ 4 ವರ್ಷ ಏನೂ ಮಾಡಿಲ್ಲ. ಕೇಂದ್ರ ಸರ್ಕಾರ ಸಹ ಈವರೆಗೆ ಘೋಷಣೆ ಮಾಡಿದ ಹಣವನ್ನೇ ಕೊಟ್ಟಿಲ್ಲ ಎಂದು ವಾಗ್ದಾಳಿ ನಡೆಸಿದರು. ಈ ವೇಳೆ ಬಿಜೆಪಿ–ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

PAPER PUBLICATION

Under instructions from our client, Sri. GANESH S POOJARI, aged about 30 years, son of Late. Sanjeev S. Poojari, resident of # 57/1, "Sahana Nilaya", 5th Cross Road, Gayathripuram, Bengaluru-560021, we are causing this public notice:

Our client has filed a Commercial suit in Com. O.S.No.237/2023 on the file of the Hon'ble Principal District Judge and Designated Commercial Court, at Mysuru seeking for the recovery of the amount against one B. PRASHANTH, aged about 45 years, son of Late. Basavaraj. M., residing at # 2902, Kantharaj Urs Road, Saraswathipuram, Mysuru 570 009. Said B.Prashanth has got 1/4 right over property more appropriately described in the schedule below; Now, the Hon'ble Court in the said case has directed said B.Prashanth to furnish security for Rs.3,75,00,000/- within 2 months from 10-08-2023 and place the same for disposal of the court when required. And accordingly a conditional order of attachment of 1/4 right of said B.Prashanth over the said property is being ordered. The said order of attachment still subsists.

This is to inform the public in large that if anybody indulges in buying any right over the schedule property from said B.Prashanth, the same will be subject to the above said liability.

'A' SCHEDULE : All that piece and parcel of the Commercial Property bearing Khata No.2902 CH 80 situated at Kantharaj Urs Road, Saraswathipuram, Mysuru-570009, measuring 21525 Sq. Ft. building constructed on the above site bounded on: East by : Property of B schedule (belongs to Defendant), West by : Kantharaje Urs Road (Saraswathipuram 1st Main Road), North by : remaining property of defendant, South by :Property of TTL college.

'B' SCHEDULE :All that piece and parcel of residential vacant site property bearing Khata No.2902 CH 80/1 situated at Kantharaj Urs Road, Saraswathipuram, Mysuru-570009, measuring 99910 Sq. Ft. bounded on: East by : Pampapathi Road, West by :Petrol Bunk, Kantharaj Urs Road, Saraswathpuram 1st Main Road, North by : Muslim Hostel, South by : Property of TTL college and Petrol Bunk.

Sd/- O. Shama Bhat, B.A.LL.B., Reg. No. Kar 417/77
Sd/- O. Sathisha, B.Sc. LL.b., Reg. No: Kar 721/89 , Advocates, No. 20/c, 2nd Floor, Near Airlines Hotel, Jayalakshmi Vilas Road, Chamarajapuram, Mysuru-570004. Phone : 0821-2429851
Date: 13-03-2025

ನಗರಸಭಾ ಕಾರ್ಯಾಲಯ, ಮಡಿಕೇರಿ, ಕೊಡಗು ಜಿಲ್ಲೆ

ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ – 571201
ದೂರವಾಣಿ: 08272-228323, ಫ್ಯಾಕ್ಸ್: 08272-223998 , e-mail: itstaff_ulb_madikeri1@yahoo.com

ಸಂ:ಮನಸ/ತಾಂತ್ರಿಕ/ಜೆಇ.4/ಟೆಂಡರ್-27/ಎಸ್.ಎಫ್.ಸಿ.(ವಿ.ಅ)/ಕು.ನೀ/2024-25
ದಿನಾಂಕ: 18.03.2025

ಟೆಂಡರ್ ಪ್ರಕಟಣೆ

2023-24ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ ಹಾಗೂ 2024-25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು ಅನುದಾನದಡಿ ಸಿವಿಲ್/ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧ್ಯಾದೇಶ 1999 ಹಾಗೂ ನಿಯಮ 2000ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ-1) ಮತ್ತು (ಕೆ.ಡಬ್ಲ್ಯೂ-2) ನಿಯಮಾವಳಿಯಂತೆ KPP ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPP ಪೋರ್ಟಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್‌ಲೋಡ್, ಅಪ್‌ಲೋಡ್, ಟೆಂಡರ್ ಪ್ರೋಸೆಸಿಂಗ್ ಮತ್ತು ಇ.ಎಂ.ಡಿ ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/–
ಆಡಳಿತಾಧಿಕಾರಿಗಳು, ನಗರಸಭೆ, ಮಡಿಕೇರಿ ಹಾಗೂ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ.

ಸಹಿ/–
ಪೌರಾಯುಕ್ತರು
ನಗರಸಭೆ, ಮಡಿಕೇರಿ



ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.

ಬೆಂಗಳೂರು–ಮೈಸೂರು ರಸ್ತೆ, ಕಲ್ಲಹಳ್ಳಿ, ಮಂಡ್ಯ–571401
ಇ–ಮೇಲ್:apmcmandya@rediffmail.com, :apmcmandya@gmail.com, ದೂ: 220792;238120;220110, ಫ್ಯಾಕ್ಸ್: 220792
ಸಂಖ್ಯೆ: ಕೃಉಮಾಸ(ಮಂ)/874/2024–25, ದಿನಾಂಕ:17–03–2025

ಹಂಚಿಕೆ ಪ್ರಕಟಣೆ–2

ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಕೊಮ್ಮೇರಹಳ್ಳಿ (ಗೋಪಾಲಪುರ) ಉಪ ಮಾರುಕಟ್ಟೆ ಪ್ರಾಂಗಣ ಹಾಗೂ ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಖಾಲಿ ಇರುವ ಈ ಕೆಳಕಂಡ ಗೋದಾಮುಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮ 2004 ರ ನಿಯಮ 13 ರನ್ವಯ 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೊಮ್ಮೆ ಶೇ.5ರಂತೆ ಲೀವ್ ಅಂಡ್ ಲೈಸನ್ಸ್ ಶುಲ್ಕವನ್ನು ಹೆಚ್ಚಿಸುವ, ಗರಿಷ್ಠ 55 ತಿಂಗಳುಗಳ ಅವಧಿಗೆ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲು ಪೇಟೆಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಗೋದಾಮುಗಳ ವಿವರ

ಕ್ರ ಸಂ	ಗೋದಾಮುಗಳ ವಿವರ	ಗೋದಾಮಿನ ಸಾಮರ್ಥ್ಯ/ ವಿಸ್ತೀರ್ಣ	ಮೀಸಲಾತಿ ವರ್ಗ	ನಿಗಧಿ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ ರೂ.	ಅರ್ಜಿ ಶುಲ್ಕ (ತೆರಿಗೆ ಪ್ರತ್ಯೇಕ)	ನೋಂದಣಿ ಶುಲ್ಕ	ಮುಂಗಡ ಠೇವಣಿ ಪ್ರತಿಯೊಂದು ಮಳಿಗೆಗೆ
01	'ಎ' ಮಾದರಿ ಗೋದಾಮು ಸಂಖ್ಯೆ 9	60 M.T.	ಸಾಮಾನ್ಯ	45560–00			91120.00
02	'ಬಿ' ಮಾದರಿ ಗೋದಾಮು ಸಂಖ್ಯೆ 17	50 M.T.	ಸಾಮಾನ್ಯ	38840–00			77680.00
03	ಟ್ವಿನ್ ಮಾದರಿ ಗೋದಾಮು (ಬಿ–ಟೈಪ್) ಸಂಖ್ಯೆ 23	50 M.T.	ಸಾಮಾನ್ಯ	37025–00			74050.00
04	ಟ್ವಿನ್ ಮಾದರಿ ಗೋದಾಮು (ಬಿ–ಟೈಪ್) ಸಂಖ್ಯೆ 24	50 M.T.	ಸಾಮಾನ್ಯ	37025–00			74050.00
05	'ಸಿ' ಮಾದರಿ ಗೋದಾಮು ಸಂಖ್ಯೆ 06	40 M.T.	ಸಾಮಾನ್ಯ	13290–00			26580.00
06	'ಸಿ' ಮಾದರಿ ಗೋದಾಮು ಸಂಖ್ಯೆ 07	40 M.T.	ಸಾಮಾನ್ಯ	13290–00			26580.00
07	'ಸಿ' ಮಾದರಿ ಗೋದಾಮು ಸಂಖ್ಯೆ 10	40 M.T.	ಸಾಮಾನ್ಯ	13290–00			26580.00
08	'ಸಿ' ಮಾದರಿ ಗೋದಾಮು ಸಂಖ್ಯೆ 13	40 M.T.	ಸಾಮಾನ್ಯ	13290–00			26580.00
09	'ಸಿ' ಮಾದರಿ ಗೋದಾಮು ಸಂಖ್ಯೆ 14	40 M.T.	ಸಾಮಾನ್ಯ	13290–00			26580.00
10	'ಸಿ' ಮಾದರಿ ಗೋದಾಮು ಸಂಖ್ಯೆ 19	40 M.T.	ಸಾಮಾನ್ಯ	13290–00			26580.00
11	'ಸಿ' ಮಾದರಿ ಗೋದಾಮು ಸಂಖ್ಯೆ 21	40 M.T.	ಎಫ್.ಪಿ.ಓ.	13290–00	1000	500	26580.00
12	'ಸಿ' ಮಾದರಿ ಗೋದಾಮು ಸಂಖ್ಯೆ 08	40 M.T.	ಮಹಿಳೆ (ಸಾಮಾನ್ಯ)	13290–00			26580.00
13	'ಸಿ' ಮಾದರಿ ಗೋದಾಮು ಸಂಖ್ಯೆ 09	40 M.T.	ಎಫ್.ಪಿ.ಓ.	13290–00			26580.00
14	'ಸಿ' ಮಾದರಿ ಗೋದಾಮು ಸಂಖ್ಯೆ 20	40 M.T.	ಪರಿಶಿಷ್ಟ ಜಾತಿ	13290–00			26580.00
15	'ಸಿ' ಮಾದರಿ ಗೋದಾಮು ಸಂಖ್ಯೆ 25	40 M.T.	ಪರಿಶಿಷ್ಟ ಪಂಗಡ	13290–00			26580.00
16	'ಡಿ' ಮಾದರಿ ಗೋದಾಮು ಸಂಖ್ಯೆ 01	40 M.T.	ಪರಿಶಿಷ್ಟ ಜಾತಿ	15965–00			26580.00
17	'ಡಿ' ಮಾದರಿ ಗೋದಾಮು ಸಂಖ್ಯೆ 21	40 M.T.	ಸಾಮಾನ್ಯ	15965–00			26580.00
18	'ಡಿ' ಮಾದರಿ ಗೋದಾಮು ಸಂಖ್ಯೆ 23	40 M.T.	ಸಾಮಾನ್ಯ	15965–00			31930.00
19	ಇ' ಮಾದರಿ ಗೋದಾಮು ಸಂಖ್ಯೆ 04	40 M.T.	ಸಾಮಾನ್ಯ	6345–00			12690.00
20	'ಇ' ಮಾದರಿ ಗೋದಾಮು(ಆರ್.ಸಿ.ಸಿ.) ಸಂಖ್ಯೆ 25	40 M.T.	ಸಾಮಾನ್ಯ	17145–00			34290.00
21	ತರಕಾರಿ ಗೋದಾಮು (ಇ–ಟೈಪ್) ಸಂಖ್ಯೆ 03	1440.00 Sqft	ಸಾಮಾನ್ಯ	29925–00			59850.00
22	ತರಕಾರಿ ಗೋದಾಮು (ಇ–ಟೈಪ್) ಸಂಖ್ಯೆ 04	1440.00 Sqft	ಸಾಮಾನ್ಯ	29925–00			59850.00
23	ಮುಖ್ಯ ಮಾರುಕಟ್ಟೆ ಪ್ರಾಂಗಣದ ಶಾಪ್ ಕಂ ಗೋದಾಮು ಸಂಖ್ಯೆ 25 (ಸಂಗ್ರಹಣಾ ಗೋದಾಮು)	2145 Sqft	ಸಾಮಾನ್ಯ	43260–00			86520.00
	ಕೊಮ್ಮೇರಹಳ್ಳಿ (ಗೋಪಾಲಪುರ) ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಗೋದಾಮುಗಳ ವಿವರ						
01	1000 ಮೆ.ಟನ್ ಸಾಮರ್ಥ್ಯದ ಗೋದಾಮು ಕಟ್ಟಡ ಸಂಖ್ಯೆ–01	1000 M.T.	ಸಾಮಾನ್ಯ	164178–00			328356.00
02	250 ಮೆ.ಟನ್ ಸಾಮರ್ಥ್ಯದ ಗೋದಾಮು ಕಟ್ಟಡ ಸಂಖ್ಯೆ–01	250 M.T.	ಸಾಮಾನ್ಯ	49285–00	1000.00	500.00	98570.00
03	250 ಮೆ.ಟನ್ ಸಾಮರ್ಥ್ಯದ ಗೋದಾಮು ಕಟ್ಟಡ ಸಂಖ್ಯೆ–02	250 M.T.	ಸಾಮಾನ್ಯ	49285–00			98570.00
	ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಗೋದಾಮುಗಳ ವಿವರ						
01	ಸಣ್ಣ ಮಳಿಗೆ ಸಂಖ್ಯೆ –03	267.30 Sft	ಸಾಮಾನ್ಯ	6670–00			13340.00
02	ಸಣ್ಣ ಮಳಿಗೆ ಸಂಖ್ಯೆ –04	267.30 Sft	ಎಫ್.ಪಿ.ಓ.	6670–00			13340.00
03	ಸಣ್ಣ ಮಳಿಗೆ ಸಂಖ್ಯೆ –06	267.30 Sft	ಪರಿಶಿಷ್ಟ ಜಾತಿ	6670–00	1000.00	500.00	13340.00
04	ಸಣ್ಣ ಮಳಿಗೆ ಸಂಖ್ಯೆ –08	267.30 Sft	ಪರಿಶಿಷ್ಟ ಪಂಗಡ	6670–00			13340.00

ಷರತ್ತುಗಳು ಹಾಗೂ ನಿಬಂಧನೆಗಳಿಗೆ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯದರ್ಶಿ(ಪ್ರ), ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ ಸಹಿ/–ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.

ಬೆಂಗಳೂರು–ಮೈಸೂರು ರಸ್ತೆ, ಕಲ್ಲಹಳ್ಳಿ, ಮಂಡ್ಯ–571401
ಇ–ಮೇಲ್:apmcmandya@rediffmail.com, :apmcmandya@gmail.com, ದೂ: 220792;238120;220110, ಫ್ಯಾಕ್ಸ್: 220792
ಸಂಖ್ಯೆ: ಕೃಉಮಾಸ(ಮಂ)/376/2024–25, ದಿನಾಂಕ:17–03–2025

ಹಂಚಿಕೆ ಪ್ರಕಟಣೆ

ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಸದಾಗಿ ನಿರ್ಮಿಸಿರುವ 3 ಸಂಖ್ಯೆ ಮುಚ್ಚಿದ ಹರಾಜುಕಟ್ಟೆಗಳಲ್ಲಿ ಕಂಬದಿಂದ ಕಂಬಕ್ಕೆ ಒಟ್ಟು 23 ವಿಭಜಕಗಳನ್ನು ಸಮಿತಿಯಿಂದ ಪರವಾನಗಿ ಪಡೆದು ವ್ಯವಹರಿಸುತ್ತಿರುವ ತರಕಾರಿ ವ್ಯಾಪಾರಸ್ಥರುಗಳಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ 1966 ನಿಯಮ 1968 ಮತ್ತು 2004ರ ಆಸ್ತಿ ಹಂಚಿಕೆ ನಿಯಮ 13ರನ್ವಯ (ಜೇಷ್ಠತೆಯನುಸಾರ) ಕೇಳಿದಾಗ ಬಿಟ್ಟು ಕೊಡುವ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಹ ಪೇಟೆಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಸದಾಗಿ ನಿರ್ಮಿಸಿರುವ 3 ಸಂಖ್ಯೆ ಮುಚ್ಚಿದ ಹರಾಜುಕಟ್ಟೆಗಳಲ್ಲಿ ಕಂಬದಿಂದ ಕಂಬಕ್ಕೆ ಒಟ್ಟು 23 ವಿಭಜಕಗಳ ವಿವರ

ಕ್ರ ಸಂ	ಮುಚ್ಚಿದ ಹರಾಜು ಕಟ್ಟೆಗಳ ವಿವರ (ಸಂಖ್ಯೆಗಳಲ್ಲಿ)	ಮೀಸಲಾತಿ ವರ್ಗ	ವಿಸ್ತೀರ್ಣ ಚ.ಅಡಿ	ನಿವೇಶನದ ಮೌಲ್ಯ + ಕಟ್ಟಡದ ಮೌಲ್ಯ: ದರ ರೂ. ಚ.ಅಡಿ	ನಿವೇಶನದ ಮೌಲ್ಯ + ಕಟ್ಟಡದ ಮೌಲ್ಯ: ಮೊತ್ತ ರೂ.	ಮಾಸಿಕ ಬಾಡಿಗೆ ಒಟ್ಟು ಮೌಲ್ಯದ ಮೇಲೆ ಶೇ.10 ರಂತೆ ರೂ.	ನೋಂದಣಿ ಶುಲ್ಕ	ಅರ್ಜಿ ಶುಲ್ಕ+ ತೆರಿಗೆ	ಮುಂಗಡ ಹಣ ಡಿ.ಡಿ ಮೂಲಕ
1	2	3	4	5	6	7	8	9	10
	ಮುಚ್ಚಿದ ಹರಾಜುಕಟ್ಟೆ–1								
01	1	ಎಫ್.ಪಿ.ಓ.	198.06	19.30	3822.51	3822.00			7644.00
02	2	ಮಹಿಳೆ	198.06	19.30	3822.51	3822.00			7644.00
03	3	ಸಾಮಾನ್ಯ	198.06	19.30	3822.51	3822.00			7644.00
04	4	ಸಾಮಾನ್ಯ	198.06	19.30	3822.51	3822.00			7644.00
05	5	ಪರಿಶಿಷ್ಟ ಜಾತಿ	98.81	19.30	1907.10	1907.00			3814.00
06	6	ಸಾಮಾನ್ಯ	98.81	19.30	1907.10	1907.00			3814.00
	ಮುಚ್ಚಿದ ಹರಾಜುಕಟ್ಟೆ–2								
07	7	ಸಾಮಾನ್ಯ	100.00	19.30	1929.95	1929.00			3858.00
08	8	ಸಾಮಾನ್ಯ	100.00	19.30	1929.95	1929.00			3858.00
09	9	ಪರಿಶಿಷ್ಟ ಜಾತಿ	200.53	19.30	3870.29	3870.00			7740.00
10	10	ಸಾಮಾನ್ಯ	200.53	19.30	3870.29	3870.00	500.00	1180.00	7740.00
11	11	ಸಾಮಾನ್ಯ	200.53	19.30	3870.29	3870.00			7740.00
12	12	ಸಾಮಾನ್ಯ	200.53	19.30	3870.29	3870.00			7740.00
13	13	ಸಾಮಾನ್ಯ	200.53	19.30	3870.29	3870.00			7740.00
14	14	ಸಾಮಾನ್ಯ	100.00	19.30	1929.95	1929.00			3858.00
15	15	ಪರಿಶಿಷ್ಟ ಪಂಗಡ	100.00	19.30	1929.95	1929.00			3858.00
	ಮುಚ್ಚಿದ ಹರಾಜುಕಟ್ಟೆ–3								
16	16	ಎಫ್.ಪಿ.ಓ.	97.31	19.30	1878.02	1878.00			3756.00
17	17	ಸಾಮಾನ್ಯ	97.31	19.30	1878.02	1878.00			3756.00
18	18	ಸಾಮಾನ್ಯ	194.94	19.30	3762.27	3762.00			7524.00
19	19	ಸಾಮಾನ್ಯ	194.94	19.30	3762.27	3762.00			7524.00
20	20	ಸಾಮಾನ್ಯ	194.94	19.30	3762.27	3762.00			7524.00
21	21	ಪರಿಶಿಷ್ಟ ಜಾತಿ	194.94	19.30	3762.27	3762.00			7524.00
22	22	ಸಾಮಾನ್ಯ	194.94	19.30	3762.27	3762.00			7524.00
23	23	ಮಹಿಳೆ	194.94	19.30	3762.27	3762.00			7524.00

ಷರತ್ತುಗಳು ಹಾಗೂ ನಿಬಂಧನೆಗಳಿಗೆ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ ಸಹಿ/–ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ

ನಕ್ಕರೆ ಅದೇ ಸ್ವರ್ಗ

ಕುಡುಕ : ಇವತ್ತು ಎಲ್ಲಿ ತನಕ ಕುಡಿತೀನಿ ಅಂದ್ರೆ, ಮುಂದೆ ಇರೋ 3 ಮರಗಳು ಆರು ಮರಗಳಾಗಿ ಕಾಣಿಸ್ಬೇಕು ಅಷ್ಟು

ಬಾರ್ ಮ್ಯಾನೇಜರ್ : ಸಾಕು ಬಿಡೋ ಮಾರಾಯ ಅಲ್ಲಿ ಇರೋದೇ ಒಂದೇ ಮರ.

ಮೈಸೂರು ಮಿತ್ರ

ಬುಧವಾರ, 19 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಾವು ಎಂತಹ ಸಮಾಜದಲ್ಲಿ ಇದ್ದೇವೆ ಎಂದರೆ ಇಲ್ಲಿ ಸೌಂದರ್ಯವನ್ನು ಬಣ್ಣದಿಂದ ನೋಡುತ್ತಾರೆ, ವಿದ್ಯೆಯನ್ನು ಅಂಕಗಳಿಂದ ನೋಡುತ್ತಾರೆ, ಗೌರವವನ್ನು ಹಣ, ಸಂಪತ್ತು ನೋಡಿ ಕೊಡುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರಿಗೆ ಅರಸನಾದರೂ, ತಾಯಿಗೆ ಮಗ.

ನಿಮ್ಮ ಪತ್ರಗಳು

■ ಟ್ರಾಫಿಕ್ ಸಿಗ್ನಲ್ ಅಳವಡಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ರಿಂಗ್ ರೋಡ್‌ನಿಂದ ಹೊರಗಡೆ ಇರುವ ಬಡಾವಣೆಗಳಿಂದ, ಅಲ್ಲಿನ ನಿವಾಸಿಗಳು ಜೆ.ಪಿ.ನಗರಕ್ಕೆ, ಬಸ್ ನಿಲ್ದಾಣಕ್ಕೆ, ವಾಣಿಜ್ಯ ಉದ್ದೇಶಗಳಿಗಾಗಿ ತಲುಪಲು ರಿಂಗ್ ರೋಡ್ ಅನ್ನು ವಾಹನಗಳಲ್ಲಿ ಅಥವಾ ನಡಿಗೆಯಲ್ಲಿ ದಾಟಬೇಕಾದ ಅನಿವಾರ್ಯತೆ ಇದೆ. ಆದರೆ ಇತ್ತೀಚೆಗೆ ರಿಂಗ್ ರೋಡ್‌ನಲ್ಲಿ ಅಧಿಕ ವಾಹನಗಳ ಸಂಚಾರದಿಂದ ರಸ್ತೆ ದಾಟಲು ಬಹಳ ಕಷ್ಟವಾಗಿ, ಬಹಳಷ್ಟು ಅಪಘಾತಗಳಾಗಿ, ಸಾಕಷ್ಟು ಸಾವು-ನೋವುಗಳಾಗುತ್ತಾ ಇವೆ.

ಜೆ.ಪಿ.ನಗರದ ರೈಲ್ವೆ ಸೇತುವೆ ಜಂಕ್ಷನ್ ಹಾಗೂ ಅಕ್ಕಮಹಾದೇವಿ ರಸ್ತೆ ರಿಂಗ್ ರೋಡ್ ಸೇರುವ ರಸ್ತೆಗಳು ಒಟ್ಟಿಗೆ ಐದು ರೋಡ್‌ಗಳು ಸೇರುವ ಸ್ಥಳವಾಗಿದ್ದು, ರಿಂಗ್ ರೋಡ್ ನಿಂದ ಬರುವ ಅತೀ ವೇಗದ ವಾಹನಗಳನ್ನು ತಪ್ಪಿಸಿ ರಸ್ತೆ ದಾಟಲು ಕಷ್ಟಸಾಧ್ಯ ಸಾಹಸವಾಗಿದೆ. ಕಳೆದ ವರ್ಷದಲ್ಲಿ ಈ ಜಾಗಗಳಲ್ಲಿ ಅಪಘಾತಗಳಾಗಿ ಹತ್ತಾರು ಸಾವುಗಳಾಗಿವೆ.

ಸಾರಿಗೆ ಇಲಾಖೆ ಇತ್ತೀಚೆಗೆ ರಿಂಗ್ ರೋಡ್‌ಗಳಲ್ಲಿ ಬಸ್ಸುಗಳನ್ನು ಓಡಿಸಿದರೂ ಈ ಸ್ಥಳಗಳಲ್ಲಿ ಬಸ್ ಸ್ಟಾಪ್‌ಗಳಿಲ್ಲದೆ, ಬಸ್‌ಗಳು ನಿಲ್ಲಿಸದೆ ಇರುವುದರಿಂದ ಜನರಿಗೆ ಪ್ರಯೋಜನವು ಆಗದೆ, ಇಲಾಖೆಗೆ ಲಾಭವು ಆಗದೆ ನನೆಗುದಿಗೆ ಬಿದ್ದಿದೆ.

ದಯಮಾಡಿ ಈ ಜಾಗಗಳಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಿ ಹಾಗೂ ರಿಂಗ್ ರೋಡ್‌ನಲ್ಲಿ ಬಸ್‌ಗಳ ನಿಲುಗಡೆಗೆ ಅವಕಾಶ ಮಾಡಿಕೊಟ್ಟರೆ, ಜೆ.ಪಿ.ನಗರ ರಿಂಗ್ ರೋಡ್ ಹೊರ ಬಡಾವಣೆಗಳ ಸಾವಿರಾರು ನಿವಾಸಿಗಳಿಗೆ ಅನುಕೂಲವಾಗಿ, ಅಪಘಾತಗಳನ್ನು ತಪ್ಪಿಸಬಹುದು. ಈ ವಿಷಯವಾಗಿ ತುರ್ತು ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿವೆ.

–ಜೆ.ಪಿ.ನಗರ ಹೊರ ಬಡಾವಣೆಗಳ ಒಕ್ಕೂಟ,
ಶ್ರೀ ಸಿದ್ದಲಿಂಗೇಶ್ವರ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.

■ ಭಯ, ಆತಂಕ ಬಿಟ್ಟು ಪರೀಕ್ಷೆ ಬರೆಯಿರಿ...

ಮಾನ್ಯರೆ,

2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಇದೇ ಮಾರ್ಚ್ 21ರಿಂದ ಆರಂಭವಾಗುತ್ತಿವೆ. ಈ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಇದು ಮೊದಲ ಬೋರ್ಡ್ ಪರೀಕ್ಷೆ ಆಗಿದೆ. ಹೀಗಾಗಿ ವಿದ್ಯಾರ್ಥಿಗಳಲ್ಲಿ ಸಹಜವಾಗಿಯೇ ಭಯ, ಆತಂಕ ಇದ್ದೇ ಇರುತ್ತದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಘಟ್ಟವಾಗಿದ್ದು, ಈ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ ಮುಂದೆ ಯಾವ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ನಿರ್ಧಾರವಾಗಲಿರುವ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಘಟ್ಟವಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಆತಂಕ ಪಡದೆ, ಪರೀಕ್ಷೆಯನ್ನು ಎದುರಿಸುತ್ತೇನೆ ಎನ್ನುವ ಧೈರ್ಯದಿಂದ ಇರುವುದು ಒಳಿತು. ಏಕೆಂದರೆ ಪರೀಕ್ಷೆ ಬರೆಯುವವರು ಎಲ್ಲರೂ ಟಾಪರ್ ಆಗಲು ಸಾಧ್ಯವಿಲ್ಲ. ಇದನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಮನಸ್ಸಿನಲ್ಲಿ ಇಟ್ಟುಕೊಂಡು ಓದಿದ ವಿಷಯವನ್ನು ಸ್ಪಷ್ಟವಾಗಿ ಬರೆಯುವುದು ಉತ್ತಮ. ಗೊತ್ತಿರುವ ವಿಷಯವನ್ನು ಯಾವುದೇ ಗೊಂದಲವಿಲ್ಲದೆ ಬರೆದು, ಉತ್ತರ ಗೊತ್ತಿಲ್ಲದ ಪ್ರಶ್ನೆಗಳ ಬಗ್ಗೆ ಹೆಚ್ಚು ಆತಂಕಪಡುವುದು ಬೇಡ. ಏಕೆಂದರೆ ಆತಂಕ, ಭಯದಿಂದ ಓದಿದ ಅಷ್ಟೂ ವಿಷಯಗಳು ಮರೆತುಹೋಗುವ ಸಾಧ್ಯತೆ ಇರುತ್ತದೆ.

ಸಾಮಾನ್ಯವಾಗಿ ಮೊದಲ 15 ನಿಮಿಷ ಪ್ರಶ್ನೆಪತ್ರಿಕೆಯನ್ನು ಸಂಪೂರ್ಣವಾಗಿ ಓದಲು ಅವಕಾಶ ನೀಡಲಾಗುತ್ತದೆ. ಪ್ರಶ್ನೆಪತ್ರಿಕೆ ಕೊಟ್ಟ ಕೂಡಲೇ ಉತ್ತರ ಬರೆಯಲು ಪ್ರಾರಂಭಿಸುವ ಬದಲು ಒಮ್ಮೆ ಪ್ರಶ್ನೆಪತ್ರಿಕೆಯನ್ನು ಓದಿಕೊಂಡು ಉತ್ತರ ಗೊತ್ತಿರುವ ಪ್ರಶ್ನೆಗಳನ್ನು ಮೊದಲು ಆಯ್ಕೆ ಮಾಡಿಕೊಂಡು ಅದಕ್ಕೆ ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಬರೆಯುವುದು ಒಳ್ಳೆಯದು. ಇದರಿಂದ ಸಮಯ ಉಳಿತಾಯ ಆಗುತ್ತದೆ. ಕೊನೆಗೆ ಉತ್ತರ ಗೊತ್ತಿಲ್ಲದ ಪ್ರಶ್ನೆಗಳ ಬಗ್ಗೆ ಯೋಚಿಸಲು ಸಮಯ ಸಿಕ್ಕಂತಾಗುತ್ತದೆ. ಸಮಯ ಪೋಲಾಗದಂತೆ ಎಚ್ಚರವಹಿಸುವುದು ಅಷ್ಟೇ ಅವಶ್ಯಕ. ಕೊನೆಯಲ್ಲಿ ಕೆಲ ನಿಮಿಷಗಳನ್ನು ಉತ್ತರಗಳ ಮರುಪರಿಶೀಲನೆಗೆ ಬಳಸುವುದು ಜಾಣತನ. ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಪರೀಕ್ಷಾ ಭಯವನ್ನು ತನ್ನ ಮನಸ್ಸಿನಿಂದ ತೆಗೆದುಹಾಕಿ ಆತ್ಮವಿಶ್ವಾಸ, ಧೈರ್ಯ, ನಂಬಿಕೆ ಹಾಗೂ ಶಾಂತ ರೀತಿಯಲ್ಲಿ ಪರೀಕ್ಷೆಯನ್ನು ಬರೆದು ಯಶಸ್ಸು ಕಾಣಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಮಂಟಿಯಲ್ಲಿ ಕಸದ ರಾಶಿಯ ಸಮಸ್ಯೆ



ಮಾನ್ಯರೆ,

ಇದು ಶ್ರೀರಂಗಪಟ್ಟಣ ತಾಲೂಕಿನ ಮೊಗರಹಳ್ಳಿ (ಮಂಟಿ)ಯ ಸಮಸ್ಯೆ ಊರಿನ ಆರಂಭದಿಂದ ಕೊನೆವರೆಗೂ ಕಸದ ರಾಶಿ ಬಿದ್ದಿರುವುದನ್ನು ಕಾಣಬಹುದು. ಸಿಕ್ಕ ಸಿಕ್ಕ ಜಾಗದಲ್ಲಿ ಕಸ ಎಸೆಯಬಾರದು ಎಂದು ಎಷ್ಟೇ ಹೇಳಿದರೂ, ಈ ಸಮಸ್ಯೆ ಬಗೆಹರಿದಿಲ್ಲ. ಊರಿನ ಜನರು ಮಾತ್ರವಲ್ಲ ಬೇರೆ ಊರಿನ ಜನರೂ ಕಸ ಬಿಸಾಕುತ್ತಾರೆ. ಇದರಿಂದ ರಸ್ತೆಯಲ್ಲಿ ಓಡಾಡಲು ಬಹಳ ತೊಂದರೆಯಾಗುತ್ತಿದೆ. ಕಸ ಹಾಕಲು ಕಸದ ಬುಟ್ಟಿಗಳ ಅವಶ್ಯಕತೆ ಇದೆ. ಎಂಸಿಸಿ ಅವರು ಎಷ್ಟೇ ರಸ್ತೆಯನ್ನು ಸ್ವಚ್ಛ ಮಾಡಿದರೂ ಒಂದೇ ದಿನದಲ್ಲಿ ಮತ್ತೆ ಕಸ ತಂದು ಸುರಿದಿರುತ್ತಾರೆ. ಶಾಲೆ ಆವರಣದ ಮುಂಭಾಗದಲ್ಲೂ ಕಸ ಹಾಕುತ್ತಾರೆ. ಊರಿನ ಪಕ್ಕದಲ್ಲಿ ಕಾಲುವೆ ಇದೆ. ಅದಕ್ಕೂ ಕಸವನ್ನು ಎಸೆಯುತ್ತಾರೆ. ಹೀಗಾಗಿ, ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಇಲಾಖೆಯವರು, ಅಧಿಕಾರಿಗಳು ಕಸ ಬಿಸಾಕುವವರಿಗೆ ತಕ್ಷಣವೇ ಕಡಿವಾಣ ಹಾಕಬೇಕೆಂದು ಕೇಳುತ್ತೇನೆ.

–ಯಶಸ್ವಿನಿ, ಪತ್ರಿಕೋದ್ಯಮ ವಿದ್ಯಾರ್ಥಿನಿ,
ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಮಹಿಳಾ ಸಬಲೀಕರಣ ಬಲಿಷ್ಠ ಭಾರತಕ್ಕೆ ಹಾದಿ...

ಈ ಬಾರಿಯ ಅಂತಾರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿಯೂ ಮಹಿಳೆಯರ ಸುರಕ್ಷತೆ ಇನ್ನೂ ಗಂಭೀರ ಸಮಸ್ಯೆಯಾಗಿ ಉಳಿದಿದ್ದರೂ ಮಹಿಳಾ ಸಬಲೀಕರಣ ಮತ್ತು ಅವರ ಆರ್ಥಿಕ ಸ್ವಾತಂತ್ರ್ಯದಲ್ಲಿನ ಗಮನಾರ್ಹ ಪ್ರಗತಿಯನ್ನು ಮಾತ್ರ ನಿರಾಕರಿಸಲಾಗದು.

ಆದರೆ, ಇಂತಹ ಬದಲಾವಣೆ ಭಾರತದ ನಗರ ಪ್ರದೇಶದಲ್ಲಿ ಗೋಚರಿಸುತ್ತಿದ್ದರೂ ಇದು ಅಗತ್ಯವಾಗಿ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿ, ಸಮಗ್ರ ಬದಲಾವಣೆಗೆ ನಾಂದಿ ಹಾಡುವ ಮೂಲಕ ಇಡೀ ಸಮಾಜವನ್ನ ಪರಿವರ್ತಿಸಬೇಕಿದೆ.

ನೈಜ ವಿಮೋಚನೆಗಾಗಿ, ಮಹಿಳೆಯರು ಕೆಲ ಮೂಲಭೂತ ಲಕ್ಷಣಗಳನ್ನು ಹೊಂದಿರಬೇಕು. ಅದೆಂದರೆ, ಧೈರ್ಯ-ತಮ್ಮದೇ ಆದ ಮಾರ್ಗವನ್ನು ರೂಪಿಸಿಕೊಳ್ಳುವ ಧೈರ್ಯ ಹೊಂದಿರಬೇಕು. ಸಾಮಾಜಿಕ ನಿರ್ಬಂಧಗಳಿಂದ ಮುಕ್ತವಾಗಿ ತಮ್ಮದೇ ಆಯ್ಕೆಗಳನ್ನು ಮಾಡುವ ಅಚಲತೆ ಮತ್ತು ಆ ನಿರ್ಧಾರಗಳಲ್ಲಿ ಆಕೆ ದೃಢವಾಗಿ ನಿಲ್ಲಬೇಕಿದೆ.

ಆದಾಗ್ಯೂ ಕೇವಲ ಧೈರ್ಯ ಒಂದೇ ಸಾಕಾಗುವುದಿಲ್ಲ. ಅದನ್ನು ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯದಿಂದ ಬಲಪಡಿಸಬೇಕು. ಈ ಅವಳಿ ಶಕ್ತಿಗಳು ಮಹಿಳೆಯರು ತಮ್ಮ ಜೀವನದಲ್ಲಿ ಆತ್ಮವಿಶ್ವಾಸ ಮತ್ತು ದೃಢ ನಿಶ್ಚಯದಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತವೆ.

ವಿದ್ಯಾವಂತ ಮಹಿಳೆಯು ತನ್ನ ಜೀವನದಲ್ಲಿ ಸ್ವಾಯತ್ತತೆ ಪಡೆದುಕೊಳ್ಳುವ ಮೂಲಕ ತನ್ನ ಹಣಕಾಸು ನಿರ್ವಹಣೆ, ಜೀವನ ಸಂಗಾತಿ ಆಯ್ಕೆ ಹಾಗೂ ಮಕ್ಕಳನ್ನು ಹೊಂದುವ ಬಗ್ಗೆಯೂ ಸೂಕ್ತ ನಿರ್ಧಾರ ಕೈಗೊಳ್ಳಬಲ್ಲಳು.

ಈ ಬದಲಾವಣೆಯು ಈಗಾಗಲೇ ಬೇರೂರಿರುವ ಪುರುಷ ಪ್ರಧಾನ ಮನಸ್ಥಿತಿಗೆ ಸವಾಲೊಡ್ಡುವುದರ ಜೊತೆಗೆ ಮಹಿಳೆಯರನ್ನು ದೀರ್ಘಕಾಲ ನಿರ್ಬಂಧಿಸಿರುವ ಅತಿಯಾದ ನೈತಿಕ ಪೊಲೀಸ್‌ಗಿರಿ ವ್ಯವಸ್ಥೆ ನಾಶಪಡಿಸುತ್ತದೆ. ಅಲ್ಲದೆ, ಇದರ ಪರಿಣಾಮ ಕೇವಲ ಸಾಮಾಜಿಕವಾಗಿ ಮಾತ್ರವಲ್ಲದೆ, ಆರ್ಥಿಕವಾಗಿಯೂ ಆಗಲಿದೆ.

'ದಿ ಪವರ್ ಆಫ್ ಪ್ಯಾರಿಟಿ ; 'ಅಡ್ವಾನ್ಸಿಂಗ್ ವುಮೆನ್ಸ್ ಇಕ್ವಾಲಿಟಿ ಇನ್ ಏಷ್ಯಾ ಪೆಸಿಫಿಕ್ ' ಶೀರ್ಷಿಕೆಯಡಿಯ 2015ರ ಅಧ್ಯಯನವು ಮಹಿಳಾ ಉದ್ಯೋಗಿಗಳ ಭಾಗವಹಿಸುವಿಕೆಯಲ್ಲಿ ಕೇವಲ 10 ಪ್ರತಿಶತದಷ್ಟು ಹೆಚ್ಚಳವಾದರೂ ಭಾರತದ ಜಿಡಿಪಿಯನ್ನು 770 ಶತಕೋಟಿ ಡಾಲರ್‌ಗಳಷ್ಟು ಹೆಚ್ಚಿಸಬಹುದು ಎಂದು ಹೇಳಿದೆ.

ಈ ಪ್ರಯೋಜನಗಳು ಆಯಾಯ ಕುಟುಂಬಗಳಿಗೂ ವಿಸ್ತರಿಸುತ್ತವೆ. ಒಂದೇ ಸಮಾನ ವಯಸ್ಸಿನ ಗುಂಪಿನಲ್ಲಿರುವ ಏಕ ಆದಾಯ ಕುಟುಂಬಗಳಿಗೆ ಹೋಲಿಸಿದರೆ ದ್ವಿ-ಆದಾಯ ಕುಟುಂಬಗಳು ಉತ್ತಮ ಆರೋಗ್ಯ ರಕ್ಷಣೆ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸೇರಿದಂತೆ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ.

ಸಹಜವಾಗಿಯೇ, ಪೋಷಕರ ಅನುಪಸ್ಥಿತಿ ಸಮಸ್ಯೆ ಎದುರಾದರೂ ಆಧುನಿಕ ಜೀವನದ ಬೇಡಿಕೆಗಳಿಗೆ ಸೂಕ್ತವಾದ ಪೋಷಕರ ಶೈಲಿಯೊಂದಿಗೆ ಅದನ್ನು ಪರಿಹರಿಸಬಹುದು.



> ❝ ಭಾರತೀಯ ಮಹಿಳೆಯರು ಮನೆಯ ಉಳಿತಾಯದ ಬೆನ್ನೆಲುಬಾಗಿದ್ದರು. ಆ ಮೂಲಕ ದೇಶದ ಆರ್ಥಿಕ ಸ್ಥಿರತೆಯ ನಿರ್ಣಾಯಕ ಚಾಲನಶಕ್ತಿಯೂ ಆಗಿದ್ದರು. ಆದರೆ ಈಗ ಮನೆಯ ಉಳಿತಾಯ ಕಡಿಮೆಯಾದ ಕಾರಣ ಮಹಿಳೆಯರನ್ನು ವಿವಿಧ ಕಾರ್ಯಕ್ಷೇತ್ರಗಳಲ್ಲಿ ಒಗ್ಗೂಡಿಸುವುದು ಹಾಗೂ ಅವರ ಉದ್ಯಮಶೀಲತೆಯ ಸಾಮರ್ಥ್ಯ ವೃದ್ಧಿಸುವಂತೆ ಮಾಡುವುದು ಅತ್ಯಗತ್ಯವಾಗಿದೆ.

ಮಹಿಳೆಯರು ಶಿಕ್ಷಣ ಪಡೆಯುವ ಅವಕಾಶ ಪಡೆದಾಗ ಅವರು ಸ್ವಾಭಾವಿಕವಾಗಿಯೇ ತಮ್ಮ ಮತ್ತು ಅವರ ಕುಟುಂಬದ ಸುಧಾರಣೆಗೆ ದೊರೆಯುವ ಅವಕಾಶಗಳ ನಿಟ್ಟಿನಲ್ಲಿ ಸಾಗುತ್ತಾರೆ ಎಂಬ ಅಂಶವನ್ನು ನಿರಾಕರಿಸಲಾಗದು.

ಇಲ್ಲಿಂದಲೇ ಸಂಪತ್ತು ಸೃಷ್ಟಿ ಆರಂಭವಾಗಲಿದೆ. ಸರ್ಕಾರ ಇದನ್ನು ಗಮನಿಸಿ ಮಹಿಳಾ ನೇತೃತ್ವದ ಉದ್ಯಮಶೀಲತೆ ಬೆಳೆಸುವಲ್ಲಿ ಪರಿಣಾಮಕಾರಿಯಾಗಿ ಹೂಡಿಕೆ ಮಾಡಬೇಕು. ಉತ್ತೇಜನ ಕ್ರಮದಿಂದಾಗಿ ಭಾರತೀಯ ಮಹಿಳಾ ಉದ್ಯಮಿಗಳು ಯಶಸ್ಸಿನ ದಾಖಲೆ ಹೊಂದಿದ್ದಾರೆ. ಪುರುಷರಲ್ಲಿ ಕೇವಲ ಶೇ.30ರಿಂದ 40ರಷ್ಟು ಮಾತ್ರ ಸಾಲ ಮರುಪಾವತಿ ಸಾಧ್ಯವಾದರೆ, ಶೇ.80ರಿಂದ 90ರಷ್ಟು ಮಹಿಳಾ ಉದ್ಯಮಿಗಳು ತಮ್ಮ ಸಾಲವನ್ನು ನಿಗದಿಯಂತೆ ಮರುಪಾವತಿ ಮಾಡುತ್ತಿದ್ದಾರೆ. ಇದನ್ನು ಗಮನಿಸಿದ ಭಾರತ ಸರ್ಕಾರವು 2018ರಲ್ಲಿ ನೀತಿ ಆಯೋಗದ ನೇತೃತ್ವದಲ್ಲಿ 'ಮಹಿಳಾ ಉದ್ಯಮಶೀಲತಾ ವೇದಿಕೆ (ಡಬ್ಲ್ಯೂಇಪಿ)' ಆರಂಭಿಸಿತು.

ಆದಾಗ್ಯೂ ಒಂದು ಸವಾಲು ಮುಂದುವರೆದಿದ್ದು, ಅನೇಕ ಮಹಿಳೆಯರು ತಮ್ಮ ಪತಿಯಂದಿರು ಆರ್ಥಿಕ ಸಂಪನ್ಮೂಲಗಳನ್ನು ವಹಿಸಿಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ತಮ್ಮ ಸ್ಥಾನವನ್ನು ತಾವೇ ಇಳಿಸಿಕೊಳ್ಳುತ್ತಾರೆ. ನಿಜವಾದ ಹೋರಾಟವು ಕೇವಲ ಬಂಡವಾಳದ ಲಭ್ಯತೆ ಬಗ್ಗೆ ಮಾತ್ರವಲ್ಲ. ಮಹಿಳೆಯರು ತಮ್ಮ ವ್ಯವಹಾರಗಳ ಮೇಲೆ ನಿಯಂತ್ರಣ ಹೊಂದುವುದನ್ನು ಖಾತ್ರಿಪಡಿಸಿಕೊಳ್ಳುವುದಾಗಿದೆ.

ಸಾಂಪ್ರದಾಯಿಕವಾಗಿ, ಭಾರತೀಯ ಮಹಿಳೆಯರು ಮನೆಯ ಉಳಿತಾಯದ ಬೆನ್ನೆಲುಬಾಗಿದ್ದರು. ಆ ಮೂಲಕ ದೇಶದ ಆರ್ಥಿಕ ಸ್ಥಿರತೆಯ ನಿರ್ಣಾಯಕ ಚಾಲನಶಕ್ತಿಯೂ ಆಗಿದ್ದರು. ಆದರೆ ಈಗ ಮನೆಯ ಉಳಿತಾಯ ಕಡಿಮೆಯಾದ ಕಾರಣ ಮಹಿಳೆಯರನ್ನು ವಿವಿಧ ಕಾರ್ಯಕ್ಷೇತ್ರಗಳಲ್ಲಿ ಒಗ್ಗೂಡಿಸುವುದು ಹಾಗೂ ಅವರ ಉದ್ಯಮಶೀಲತೆಯ ಸಾಮರ್ಥ್ಯ ವೃದ್ಧಿಸುವಂತೆ ಮಾಡುವುದು ಅತ್ಯಗತ್ಯವಾಗಿದೆ.

ಕುತೂಹಲಕಾರಿಯೆಂದರೆ, ಆತಿಥ್ಯ ವಲಯವು ಸ್ಫೂರ್ತಿದಾಯಕ ಅಧ್ಯಯನವೊಂದನ್ನು ಬಿಡುಗಡೆ ಮಾಡಿದೆ. ಭಾರತೀಯ ಮಹಿಳಾ ಉದ್ಯಮಿಗಳು 2024ರಲ್ಲಿ ತಮ್ಮ ಮನೆಗಳನ್ನು ಆತಿಥೇಯಕ್ಕೆ ಒದಗಿಸುವ ಮೂಲಕ 260 ಕೋಟಿ ರೂ. ಗಳಿಸಿದ್ದಾರೆ ಎಂದು ಕೇವಲ ಎರಡು ದಿನಗಳ ಹಿಂದೆಯಷ್ಟೇ ಏರ್‌ಬಿಎನ್‌ಬಿ ವರದಿ ಮಾಡಿದೆ. ಪ್ರಸ್ತುತ ಭಾರತದಲ್ಲಿ ಶೇ.30ರಷ್ಟು ಏರ್‌ಬಿಎನ್‌ಬಿ ಹೋಸ್ಟ್‌ಗಳು ಮಹಿಳೆಯರೇ ಆಗಿದ್ದಾರೆ.

ಈ ಪ್ರಗತಿಯ ನಡುವೆಯೂ ಮಹಿಳಾ ಉದ್ಯಮಿಗಳು ಇನ್ನೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಿಶೇಷವಾಗಿ ಮಹಿಳಾ ಸಾಲವನ್ನು ಹಣಕಾಸು ಸಂಸ್ಥೆಗಳು ನಿರಾಕರಿಸುವುದು ಸೇರಿದೆ. ಅಲ್ಲದೆ, ಅವರ ಕುಟುಂಬದ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು ಉದ್ಯಮದ ಯಶಸ್ಸಿಗೆ ತಡೆಯಾಗಿದೆ.

ಆದಾಗ್ಯೂ ಮೈಸೂರಿನ ವಿಜಯ್ ವೈರ್ಸ್ ಅಂಡ್ ಫಿಲ್ಮೆಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರೂ, ವ್ಯವಸ್ಥಾಪಕ ನಿರ್ದೇಶಕರೂ ಆದ ಡಾ.ಬಿ.ಆರ್.ಪೈ ಅವರ ಪ್ರಕಾರ, ಈ ಪೂರ್ವಾಗ್ರಹಗಳು ಆಧಾರರಹಿತವಾಗಿವೆ. 'ಮಹಿಳೆಯರು ಸ್ವಾಭಾವಿಕವಾಗಿಯೇ ಉದ್ಯಮಿಗಳಾಗಲು ಅರ್ಹರು ಎನ್ನುತ್ತಾರೆ. ಅಲ್ಲದೆ, ಅವರು 5 ಪ್ರಮುಖ ಕಾರಣಗಳನ್ನು ನೀಡುತ್ತಾರೆ.

1. ಅಪಾಯ ಎದುರಿಸುವ ಮನಸ್ಥಿತಿ: ಚಿಕ್ಕ ವಯಸ್ಸಿನಿಂದಲೇ ಮಹಿಳೆಯರು ಬದಲಾವಣೆಗೆ ಒಗ್ಗಿಕೊಳ್ಳುವ ಮನಸ್ಥಿತಿಗೆ ಸಜ್ಜಾಗಿರುತ್ತಾರೆ. ಅವರು ಮುಂದೊಂದು ದಿನ ತಮ್ಮ ಪೋಷಕರ ಮನೆಯಿಂದ ನಿರ್ಗಮಿಸಿ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಪೂರ್ವ ಅರಿವು ಹೊಂದಿರುತ್ತಾರೆ.

2. ಬಹುಮುಖತ್ವ: ಯಶಸ್ವಿ ಉದ್ಯಮಿ ಅನೇಕ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಅಂತೆಯೇ ಒಬ್ಬ ಮಹಿಳೆ ತನ್ನ ಮನೆ ನಿರ್ವಹಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾಳೆ. ಅಲ್ಲದೆ, ಹಣಕಾಸು ಸಮರ್ಪಕ ನಿರ್ವಹಣೆ ಹಾಗೂ ಸಂಬಂಧಗಳನ್ನು ಕಾಪಾಡಿಕೊಳ್ಳುವಲ್ಲಿಯೂ ಅತ್ಯಂತ ಕಳಕಳಿ ಹೊಂದಿರುತ್ತಾಳೆ.

3. ಮನೆಯ ನಾಯಕತ್ವ: ಮಹಿಳೆಯರು ಅಂತರ್ಗತವಾಗಿ ತಮ್ಮ ಮನೆಗಳನ್ನು ಮುನ್ನಡೆಸುತ್ತಾರೆ. ತಮ್ಮ ಕುಟುಂಬ ರೂಪಿಸುವಲ್ಲಿಯೂ ಹಾಗೂ ಆರ್ಥಿಕ ಮತ್ತು ಭಾವನಾತ್ಮಕ ನಿರ್ಧಾರಗಳಲ್ಲಿ ಮಹಿಳೆಯ ಪಾತ್ರ ಮಹತ್ವದ್ದು.

4. ಯಶಸ್ಸಿನ ರೂವಾರಿ : ಮಹಿಳೆಯರು ಬೆಳೆಯುವಾಗ ಕಡಿಮೆ ಸ್ವಾತಂತ್ರ್ಯ ಹೊಂದಿರುವುದೇ ಹೆಚ್ಚು. ಹಾಗಾಗಿ ಅವರು ಒದಗಿ ಬರುವ ಅವಕಾಶಗಳನ್ನು ಬಳಸಿಕೊಳ್ಳಲು ನಿಶ್ಚಯದಿಂದಿರುವ ಗುಣ ಹೊಂದಿರುತ್ತಾರೆ.

5. ತಾಳ್ಮೆ ಮತ್ತು ದೃಢತೆ: ಕಷ್ಟಗಳನ್ನು ಎದುರಿಸುವ ಹಾಗೂ ಅವುಗಳಿಂದ ಶೀಘ್ರ ಚೇತರಿಸಿಕೊಳ್ಳುವ ಸಾಮರ್ಥ್ಯ ಮಹಿಳೆಗಿದೆ. ಸಂಗಾತಿ, ಮಕ್ಕಳು ಸೇರಿದಂತೆ ತಮ್ಮ ಕುಟುಂಬದ ಸಂಬಂಧಗಳನ್ನು ಕಳಕಳಿಯಿಂದ ನಿರ್ವಹಿಸುವ ವಿಶೇಷ ಗುಣ ಹೊಂದಿರುತ್ತಾಳೆ. ಈ ರೀತಿಯ ಗುಣ ವಿಶೇಷತೆಯು ಉದ್ಯಮಶೀಲತೆಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಡಾ.ಪೈ ಅವರ ಈ ಪ್ರಮುಖ ಐದು ಅಂಶಗಳು ಸರಿ ಇರಬಹುದು. ಆದರೆ ಹೆಚ್ಚು ಹೆಚ್ಚು ಮನೆಗಳು ದ್ವಿ ಆದಾಯ ಹೊಂದುತ್ತಿದ್ದಂತೆ ವಿವಾಹ ಚಲನಶೀಲತೆ ಹಾಗೂ ಕಾರ್ಯ ಒತ್ತಡದಲ್ಲಿ ಮಹಿಳೆಯ ಪಾತ್ರವನ್ನು ಪುನರೂಪಿಸುವುದು.

ಹೇಳಬೇಕೆಂದರೆ ಒಂದು ಸತ್ಯ ಉಳಿದಿದೆ: ಮಹಿಳೆಯರು ವಿದ್ಯಾವಂತರಾಗಿ ಹಾಗೂ ಆರ್ಥಿಕವಾಗಿ ಕೊಡುಗೆ ನೀಡುವಂತಿದ್ದರೆ ಸಮಾಜಗಳು ಹೆಚ್ಚು ಪ್ರಗತಿಪರವಾಗಿ ಇರುವ ಜೊತೆಗೆ ಸಮೃದ್ಧ ಮತ್ತು ಸ್ಥಿರವಾಗಿರುತ್ತವೆ.

ವಿದ್ಯಾವಂತಳೂ ಹಾಗೂ ಆರ್ಥಿಕವಾಗಿ ಸಬಲೀಕರಣಗೊಂಡ ಮಹಿಳೆ ತನಗಾಗಿ ಮಾತ್ರವೇ ಭವಿಷ್ಯ ನಿರ್ಮಾಣ ಮಾಡುವುದಿಲ್ಲ. ಬದಲಿಗೆ ಅವಳು ಮಕ್ಕಳನ್ನು ಉತ್ತಮವಾಗಿ ಬೆಳೆಸುತ್ತಾಳೆ. ಅಂತಿಮವಾಗಿ ಹೆಚ್ಚು ನ್ಯಾಯಸಮ್ಮತ, ಸಮಾನ ಹಾಗೂ ಪ್ರಗತಿಪರ ಸಮಾಜ ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸುತ್ತಾಳೆ.

ಈ ಬಾರಿಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳಾ ಉದ್ಯಮಶೀಲತೆಗೆ ಸರ್ಕಾರ ಹೆಚ್ಚು ಹೆಚ್ಚು ಹೂಡಿಕೆ ಮಾಡುವ ಮೂಲಕ ರಾಷ್ಟ್ರದ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಲೆಂದು ಆಶಿಸೋಣ.

Email:
vikram@starofmysore.com

ನಾಗ್ಪುರ ಹಿಂಸಾಚಾರ: ಹಲವೆಡೆ ಕರ್ಫ್ಯೂ ಜಾರಿ; 50ಕ್ಕೂ ಹೆಚ್ಚು ಜನರ ಬಂಧನ

ನಾಗ್ಪುರ: ಮೊಘಲ್ ದೊರೆ ಔರಂಗಜೇಬ್ ಸಮಾಧಿ ವಿಚಾರವಾಗಿ ಎರಡು ಗುಂಪುಗಳ ನಡುವೆ ಸಂಘರ್ಷ ಉಂಟಾಗಿದ್ದು, ಹಿಂಸಾಚಾರ ಭುಗಿಲೆದ್ದಿದೆ. ಘಟನೆ ಬೆನ್ನಲ್ಲೇ ಕೊತ್ವಾಲಿ ಸೇರಿದಂತೆ ಹಲವೆಡೆ ಕರ್ಫ್ಯೂ ಜಾರಿ ಮಾಡಲಾಗಿದ್ದು, 50ಕ್ಕೂ ಹೆಚ್ಚು ಮಂದಿಯನ್ನು ಬಂಧನಕ್ಕೊಳಪಡಿಸಲಾಗಿದೆ.

ಔರಂಗಜೇಬ್ ನೋವು ಮತ್ತು ಗುಲಾಮಗಿರಿಯ ಸಂಕೇತ. ಹೀಗಾಗಿ ಸಂಭಾಜಿನಗರ ಜಿಲ್ಲೆಯಲ್ಲಿರುವ ಔರಂಗಜೇಬ್ ಸಮಾಧಿ ತೆರವುಗೊಳಿಸಬೇಕು ಎಂದು ವಿಎಚ್‌ಪಿ ಸೇರಿದಂತೆ ಹಲವು ಹಿಂದೂ ಸಂಘಟನೆಗಳು ಸೋಮವಾರ ರಾಜ್ಯದ ಹಲವು ಕಡೆ ಪ್ರತಿಭಟನೆ ನಡೆಸಿದ್ದವು. ಜೊತೆಗೆ ಈ ಕುರಿತು ಮುಖ್ಯಮಂತ್ರಿಗಳಿಗೆ ಮನವಿ ಕೂಡ ಸಲ್ಲಿಸಿದ್ದವು. ಪ್ರತಿಭಟನೆ ವೇಳೆ ಧರ್ಮಗ್ರಂಥ ಕುರಾನ್ ಸುಡಲಾಗಿದೆ ಎಂದು ವದಂತಿ ಹಬ್ಬಿಸಲಾಗಿದ್ದು, ಇದರಿಂದಾಗಿ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.



ಹಿಂಸಾಚಾರದ ವೇಳೆ ಎರಡು ಗುಂಪುಗಳ ನಡುವೆ ಕಲ್ಲು ತೂರಾಟ, ವಾಹನಗಳಿಗೆ ಬೆಂಕಿ ಹಚ್ಚಿದ ಘಟನೆ ನಡೆದಿದೆ. ಹಿಂಸಾಚಾರ ತಡೆಗೆ ಪೊಲೀಸರು ಅಶ್ರುವಾಯು ಸಿಡಿಸಿ, ಲಾಠಿಪ್ರಹಾರ ನಡೆಸಿದ್ದಾರೆ. ಈ ವೇಳೆ ಹಲವರು ಗಾಯಗೊಂಡಿದ್ದಾರೆ. ನಿನ್ನೆ ಸಂಜೆ ಇಡೀ ನಾಗ್ಪುರ್‌ನಲ್ಲಿ ಪತ್ಥರ್ ಬಾಜಿ ನಡೆದಿದೆ. ದೊಣ್ಣೆಗಳನ್ನು ಹಿಡಿದು ರಸ್ತೆಗಳಲ್ಲಿ ದಾಂಧಲೆ ನಡೆಸಲಾಗಿದೆ. ಪರಿಸ್ಥಿತಿ ಕೈಮೀರುತ್ತಿದ್ದಂತೆ ನಗರದಲ್ಲಿ 144 ಸೆಕ್ಷನ್ ಜಾರಿ ಮಾಡಲಾಗಿದೆ. ವದಂತಿಗೆ ಯಾರೂ ಕಿವಿಗೊಡದೇ, ಶಾಂತಿ ಕಾಪಾಡುವಂತೆ ಕೇಂದ್ರ ಸಚಿವ ಗಡ್ಕರಿ ಮತ್ತು ಮುಖ್ಯಮಂತ್ರಿ ಫಡ್ನವೀಸ್ ಮನವಿ ಮಾಡಿದ್ದಾರೆ.

ನಾವು ಪೊಲೀಸ್ ಆಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ನಾಗರಿಕರು ಅವರೊಂದಿಗೆ ಸಹಕರಿಸಬೇಕು. ನಾಗ್ಪುರ ಶಾಂತಿಯುತ ಮತ್ತು ಸಹಕಾರಿ ನಗರವಾಗಿದೆ. ಇದು ಇಲ್ಲಿನ ಶಾಶ್ವತ ಸಂಪ್ರದಾಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಯಾವುದೇ ವದಂತಿಗಳನ್ನು ನಂಬದೇ ಆಡಳಿತಕ್ಕೆ ಪೂರ್ಣ ಸಹಕಾರ ನೀಡಿ ಎಂದು ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

ಈ ನಡುವೆ ಹಿಂದೂ ಸಂಘಟನೆಗಳಿಂದ ಸಮಾಧಿ ತೆರವಿಗೆ ಆಗ್ರಹ ಕೇಳಿಬಂದ ಬೆನ್ನಲ್ಲೇ ಸಮಾಧಿ ಸುತ್ತಮುತ್ತ ಬಿಗಿ ಬಂದೋಬಸ್ತ್ ಮಾಡಲಾಗಿದೆ.

ಸಮಾಧಿಗೆ ಭೇಟಿ ನೀಡುವವರ ನೋಂದಣಿ, ಗುರುತಿನ ಚೀಟಿ ಪರಿಶೀಲನೆ ಕಡ್ಡಾಯಗೊಳಿಸಿದೆ. ಜೊತೆಗೆ ಖುಲ್ತಾಬಾದ್ ಪಟ್ಟಣ ಪ್ರವೇಶ ದ್ವಾರದಿಂದ ಸಮಾಧಿ ಇರುವ ಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಪೊಲೀಸರು ಹಲವಾರು ಭದ್ರತಾ ಠಾಣೆಗಳನ್ನು ಸ್ಥಾಪಿಸಿದ್ದಾರೆ. ಸದ್ಯ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದರಾದರೂ, ನಗರದ ಪರಿಸ್ಥಿತಿಯು ಬೂದಿ ಮುಚ್ಚಿದ ಕೆಂಡದಂತಿದೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆಯಲಾಗಿದ್ದು, ಐದು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸ್ ಆಯುಕ್ತ ರವೀಂದರ್ ಸಿಂಘಾಲ್ ಹೇಳಿದ್ದಾರೆ.

ಘಟನೆಯಲ್ಲಿ 34 ಪೊಲೀಸ್ ಸಿಬ್ಬಂದಿ ಮತ್ತು ಇತರ ಐದು ಜನರು ಗಾಯಗೊಂಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಂದ್ರಶೇಖರ್ ಬವಾಂಕುಲೆ ತಿಳಿಸಿದ್ದಾರೆ.

ಐವರು ನಾಗರಿಕರ ಪೈಕಿ ಇಬ್ಬರು ಐಸಿಯುವಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಮೂವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಹಿಂಸಾಚಾರದಲ್ಲಿ 45 ವಾಹನಗಳು ಧ್ವಂಸಗೊಂಡಿವೆ.

ಇದರಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ತರಕಾರಿ ಬೆಲೆ ನಿಯಂತ್ರಿಸಿ, ರೈತರ ಕಾಪಾಡಿ...

ತರಕಾರಿ ಬುಟ್ಟಿಗಳನ್ನು ಹೊತ್ತು ಪ್ರತಿಭಟನೆ



ಹಾಸನ: ತರಕಾರಿ ಬೆಲೆ ಕುಸಿತ ತಡೆಯಬೇಕು. ಕೇರಳ ಮಾದರಿಯಲ್ಲಿ ತರಕಾರಿ ಬೆಲೆ ನಿಗದಿಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆ ಎದುರು ಸಂಘಟಿತರಾದ ರೈತರು, ವಿವಿಧ ತರಕಾರಿಗಳನ್ನು ಬುಟ್ಟಿಯಲ್ಲಿ ಸಂಗ್ರಹಿಸಿ, ತಲೆ ಮೇಲೆ ಹೊತ್ತು ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಆವರಣದ ಎದುರು ಕೆಲಕಾಲ ಧರಣಿ ನಡೆಸಿದರು.

ಈ ವೇಳೆ ರೈತ ಮುಖಂಡ ಕಣಗಾಲ್ ಮೂರ್ತಿ ಮಾತನಾಡಿ, ರೈತರು ಬೆಳೆದ ತರಕಾರಿ ಬೆಳೆಗೆ ಬೆಂಬಲ ಬೆಲೆ ಸಿಗದೇ ಸಂಕಷ್ಟಕ್ಕೀಡಾಗಿದ್ದಾರೆ. ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರಿಗೆ ನ್ಯಾಯ ಸಿಗುತ್ತಿಲ್ಲ. ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ರೈತರಿಗೆ ನೇರವಾಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಸೂಕ್ತ ಸ್ಥಳಾವಕಾಶ ಕಲ್ಪಿಸಿ ಕೊಡಬೇಕು. ಶೀತಲೀಕರಣ ಘಟಕದ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ವಿಧಾನಸಭೆಯ ಅಧಿವೇಶನ ನಡೆಯುತ್ತಿದ್ದು, 224 ಶಾಸಕರು ತಮಗೆ ಸಂಬಳ ಹೆಚ್ಚಿಗೆ ಆಗಬೇಕು ಎಂದು ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಆದರೆ ಅವರನ್ನು ಆರಿಸಿ ಕಳುಹಿಸಿರುವ ರೈತರ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ. ಹಾಲಿನ ದರ, ತರಕಾರಿ ದರ ಕುಸಿತವಾಗಿದೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಈ ವೇಳೆ ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ, ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ಟಿ.ಶಾಂತಲಾ, ರೈತರ ಸಮಸ್ಯೆಯನ್ನು ಆಲಿಸಿ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಸಭೆ ನಡೆಸಿ, ರೈತರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯುವುದಾಗಿ ಭರವಸೆ ನೀಡಿದರು. ಮಂಜು, ಮಲ್ಲೇಶ್, ಆನಂದ್, ಮಂಜುನಾಥ್, ಯತೀಶ್, ಕುಮಾರ್, ಲಕ್ಷ್ಮಣ್, ರಮೇಶ್, ನಿಂಗರಾಜು, ಹನುಮಂತೇಗೌಡ, ಚಂದ್ರಶೇಖರ್, ಶೇಷಣ್ಣ, ಮಲ್ಲೇಶ್ ಭಾಗವಹಿಸಿದ್ದರು.

ಹಿರೀಸಾವೆ ಬಳಿ ವೈಭವದ ಕಬ್ಬಳಿ ಬಸವೇಶ್ವರಸ್ವಾಮಿ ರಥೋತ್ಸವ



ಹಿರೀಸಾವೆ: ಹೋಬಳಿಯ ಕಬ್ಬಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದ ಬಸವೇಶ್ವರ ಸ್ವಾಮಿಯ ರಥೋತ್ಸವದಲ್ಲಿ, ಹರಕೆ ಹೊತ್ತ ರೈತರು ಮತ್ತು ಭಕ್ತರು, ರಥದ ಕಲ್ಲಿನ ಚಕ್ರಕ್ಕೆ ತೆಂಗಿನ ಕಾಯಿಗಳನ್ನು ಒಡೆಯುವ ಮೂಲಕ ಹರಕೆ ತೀರಿಸಿದರು.


ಉತ್ಸವ ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಶೃಂಗರಿಸಿದ ನಂತರ, ಸಂಜೆ 6 ಗಂಟೆಗೆ ಮೆರವಣಿಗೆ ಪ್ರಾರಂಭವಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವವು ಸಾಗಿತು. ಊರ ಹೊರಗೆ ಇರುವ ದೇವರ ಮೂಲ ಸ್ಥಾನವನ್ನು ತಲುಪಿದಾಗ, ದೇವಸ್ಥಾನದ ಬಳಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು.

ಮಂಗಳ ವಾದ್ಯದೊಂದಿಗೆ ಗ್ರಾಮಕ್ಕೆ ದೇವರನ್ನು ಕರೆತಂದು, ವಿದ್ಯುತ್ ದೀಪ ಮತ್ತು ಹೂವುಗಳಿಂದ ಅಲಂಕರಿಸಿದ್ದ ರಥದಲ್ಲಿ ಮೂರ್ತಿಯನ್ನು ಕೂರಿಸಲಾಯಿತು. ರಥೋತ್ಸವದಲ್ಲಿ ಭಾಗವಹಿಸಿದ್ದ ಭಕ್ತರು ರಥದ ಮುಂದೆ ಸಾಲಾಗಿ, ಕರ್ಪೂರ ಹಚ್ಚಿ ದೇವರಿಗೆ ಪೂಜೆ ಸಲ್ಲಿಸಿದರು.

ಆದಿಚುಂಚನಗಿರಿ ಹಾಸನ ಮಠದ ಶಂಭುನಾಥ ಸ್ವಾಮೀಜಿ, ಮುನಿಗಂಗಾಧರಪ್ಪನ ಹೆಸರಿನಲ್ಲಿ ರಾತ್ರಿ 8 ಗಂಟೆಗೆ ಮಹಾಮಂಗಳಾರತಿ ಮಾಡುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ಸಮಯದಲ್ಲಿ ಭಕ್ತರು ಧವನ ಮತ್ತು ಬಾಳೆಹಣ್ಣನ್ನು ರಥದ ಕಳಸ ಕಡೆಗೆ ಎಸೆದರು.

ರಥವು ಈಶ್ವರ ದೇವಸ್ಥಾನದ ಬಳಿಗೆ ಬರುತ್ತಿದ್ದಂತೆಯೇ ರೈತರು ರಥದ ಕಲ್ಲಿನ ನಾಲ್ಕು ಚಕ್ರಗಳಿಗೆ ಈಡುಗಾಯಿ ಒಡೆದು, ಹರಕೆ ತೀರಿಸಿದರು. ನಂತರ ರಥವನ್ನು ಮುಂದಕ್ಕೆ ಎಳೆದರು. ಕಬ್ಬಳಿ ಮಠದ ಶಿವಪುತ್ರನಾಥಸ್ವಾಮಿ ಸೇರಿದಂತೆ ಗ್ರಾಮದ ಹಲವು ಮುಖಂಡರು, ಜನಪ್ರತಿನಿಧಿಗಳು ಭಾಗವಹಿಸಿದ್ದರು. ಕಲಾವಿದರು ಪೌರಾಣಿಕ ನಾಟಕ ಪ್ರದರ್ಶಿಸಿದರು. ತುಮಕೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳ ರೈತರು ಜಾತ್ರೆಯಲ್ಲಿ ಭಾಗವಹಿಸಿದ್ದರು.

ಹಳೇಬೀಡು ಸ್ಮಾರಕದ ಬಳಿ ಗಣಿಗಾರಿಕೆ: ಲಾರಿ, ಕಲ್ಲು ವಶ



ಹಳೇಬೀಡು: ಇಲ್ಲಿನ ಸ್ಮಾರಕಗಳ ಬಳಿ ಅಕ್ರಮ ಗಣಿಗಾರಿಕೆ ನಡೆಸಿ, ಬಂಡೆಗಳನ್ನು ಸಾಗಿಸುತ್ತಿದ್ದ ಬಗ್ಗೆ ಬಸ್ತಿಹಳ್ಳಿ ಯುವಕರು ನೀಡಿದ ಮಾಹಿತಿ ಮೇರೆಗೆ ಮಂಗಳವಾರ ಕಾರ್ಯಾಚರಣೆ ನಡೆಸಿದ ಪೊಲೀಸರು, ಲಾರಿ ಸಮೇತ ಕಲ್ಲುಗಳನ್ನು ವಶಕ್ಕೆ ಪಡೆದಿದ್ದಾರೆ.

ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಸೇರಿದ ಸ್ಮಾರಕದ ಬಳಿ ಗಣಿಗಾರಿಕೆ ಮಾಡುವಂತಿಲ್ಲ ಎಂಬ ನಿಯಮವಿದ್ದರೂ, ಮೂರು ದಿನದಿಂದ ರಾತೋರಾತ್ರಿ ಗಣಿಗಾರಿಕೆ ನಡೆಯುತ್ತಿತ್ತು.

ಇದು ಹತ್ತಿರದಲ್ಲಿರುವ ಬಸ್ತಿಹಳ್ಳಿಯ ಯುವಕರ ಗಮನ ಬಂದಿದೆ. ಯುವಕರು ಪೊಲೀಸ್ ತುರ್ತು ಸೇವೆಗೆ ಕರೆ ಮಾಡಿದ್ದು, ಕೂಡಲೇ ಕಾರ್ಯ ಪ್ರವೃತ್ತರಾದ ಹಳೇಬೀಡು ಪೊಲೀಸರು, ಬಂಡೆ ಸಾಗಿಸುತ್ತಿದ್ದ ಲಾರಿ ವಶಪಡಿಸಿಕೊಂಡಿದ್ದಾರೆ. ಲಾರಿ ಹಾಗೂ ಬಂಡೆಯನ್ನು ಗಣಿ ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಲಾಗಿದೆ. ಗಣಿಗಾರಿಕೆ ನಡೆಸಲು ಅನುಮತಿ ಪಡೆದಿದ್ದಾರೆಯೆ, ಇಲ್ಲವೆ ಎಂಬುದನ್ನು ಇಲಾಖೆ ಪರಿಶೀಲನೆ ನಡೆಸುತ್ತದೆ. ರಾಜಧನ ಪಾವತಿಸದೇ ಗಣಿಗಾರಿಕೆ ನಡೆಸಿದ್ದರೆ ಗಣಿ ಭೂ ವಿಜ್ಞಾನ ಇಲಾಖೆಯವರು ಮುಂದಿನ ಕ್ರಮ ಕೈಗೊಳ್ಳುತ್ತಾರೆ ಎಂದು ಸಬ್ ಇನ್ಸ್ಪೆಕ್ಟರ್ ಸಿದ್ದಲಿಂಗ ಬಾನಸೆ ತಿಳಿಸಿದರು.

ನಗರೇಶ್ವರ ಉತ್ಖನನ ಸಂಕೀರ್ಣದ ಬಳಿ ಗಣಿಗಾರಿಕೆ ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಗಣಿಗಾರಿಕೆ ನಡೆಯುತ್ತಿದ್ದ ನಿವೇಶನದ ಮಾಲೀಕರಾದ ಗಿರೀಜಮ್ಮ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಪುನಃ ಗಣಿಗಾರಿಕೆ ಆರಂಭಿಸಿದರೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಲಾಗಿದೆ ಎಂದು ಸಹಾಯಕ ಸ್ಮಾರಕ ಸಂರಕ್ಷಣಾಧಿಕಾರಿ ಗೌತಮ್ ತಿಳಿಸಿದರು.

ಅಧಿಕ ಬೆಲೆಗೆ ಬಿತ್ತನೆ ಬೀಜ, ರಸಗೊಬ್ಬರ ಮಾರಿದರೆ ಮಳಿಗೆ ಮುಟ್ಟುಗೋಲು

● ಅಧಿಕೃತ ಮಾರಾಟ ಮಳಿಗೆಗಳಿಗೆ ಕೃಷಿ ಜಂಟಿ ನಿರ್ದೇಶಕ ಡಾ.ರವಿ ಎಚ್ಚರಿಕೆ ● ರೈತರು ಕೇಳಿದ ಕೀಟನಾಶಕವನ್ನೇ ಕಲ್ಪಿಸಿ, ರೈತರಲ್ಲಿ ಜಾಗೃತಿ ಮೂಡಿಸುವುದು ನಿಮ್ಮ ಕರ್ತವ್ಯ

ಮೈಸೂರು, ಮಾ.18(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಮುಂಗಾರು ಆರಂಭದ ಹಿನ್ನೆಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಮಾರಾಟ ಮಳಿಗೆಗಳಲ್ಲಿ ಎಂಆರ್‌ಪಿ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುವುದು ಕಂಡು ಬಂದರೆ, ಅಂತಹ ಮಳಿಗೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಕೆ.ಹೆಚ್.ರವಿ ಎಚ್ಚರಿಸಿದ್ದಾರೆ.

ಮೈಸೂರಿನ ಜಯನಗರದ ಇಸ್ಕಾನ್ ಶ್ರೀಧಾಮ ಸಭಾಂಗಣದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಮತ್ತು ಕ್ರಿಮಿನಾಶಕ ಮಾರಾಟಗಾರರ ಸಂಘದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಸಂಘದ ವಾರ್ಷಿಕ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಬಿತ್ತನೆ ಬೀಜ ಹಾಗೂ ರಸಗೊಬ್ಬರ ಮಾರಾಟಗಾರರು ಸರ್ಕಾರದ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು. ಯಾವುದೇ ಕಾರಣಕ್ಕೂ ನಿಯಮ ಉಲ್ಲಂಘಿಸಿ ಹೆಚ್ಚಿನ ದರದಲ್ಲಿ ರಸಗೊಬ್ಬರ, ಬಿತ್ತನೆ ಬೀಜ ಮಾರಾಟ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ಕೆಲವು ಮಳಿಗೆಗಳಲ್ಲಿ ನಿಗಧಿಗಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ರೈತರಿಂದ ದೂರು ಬಂದಿದೆ. ಅವುಗಳನ್ನು ಪರಿಶೀಲಿಸಿ, ಮಾರಾಟಗಾರರು ತಪ್ಪು ಮಾಡಿದ್ದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಮೈಸೂರಿನ ಜಯನಗರದ ಇಸ್ಕಾನ್ ಶ್ರೀಧಾಮ ಸಭಾಂಗಣದಲ್ಲಿ ಮಂಗಳವಾರ ನಡೆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಮತ್ತು ಕ್ರಿಮಿನಾಶಕ ಮಾರಾಟಗಾರರ ಸಂಘದ ವಾರ್ಷಿಕ ಸಮಾವೇಶವನ್ನು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಕೆ.ಹೆಚ್.ರವಿ ಉದ್ಘಾಟಿಸಿದರು.

ಲೈಸನ್ಸ್ ಪಡೆದ ಮಳಿಗೆದಾರರು ನಿಯಮದ ಅನುಸಾರವೇ ವ್ಯವಹಾರ ನಡೆಸಬೇಕು. ರೈತರು ನಿಮ್ಮನ್ನೇ ನಂಬಿ ನಿಮ್ಮ ಮಳಿಗೆಗೆ ಆಗಮಿಸುತ್ತಾರೆ. ಅದಕ್ಕಾಗಿ ರೈತರಿಗೆ ಉತ್ತಮ ಸೇವೆ ಒದಗಿಸಬೇಕು. ಕೆಲವು ಮಳಿಗೆಗಳಲ್ಲಿ ದರ ಪಟ್ಟಿ ಹಾಕಿರುವುದಿಲ್ಲ ಎಂಬ ದೂರು ರೈತರಿಂದ ಕೇಳಿ ಬರುತ್ತಿದೆ. ಮಳಿಗೆಗಳಲ್ಲಿ ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ದರ ಪಟ್ಟಿ ಪ್ರದರ್ಶಿಸಬೇಕು. ಕೃಷಿ ಇಲಾಖೆಯಿಂದ ಮಾರಾಟಗಾರರಿಗೆ ಎಲ್ಲ ರೀತಿಯ ಸಹಕಾರ ನೀಡುತ್ತಿದ್ದೇವೆ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಳಿಗೆದಾರರು ಕೆಲಸ ಮಾಡಬೇಕು ಎಂದು ತಿಳಿಸಿದರು.


ರೈತರು ಕೇಳಿದ ಔಷಧಿ ಕಲ್ಪಿಸಿ: ರೈತರು ತಾವು ಬೆಳೆಯುತ್ತಿರುವ ಬೆಳೆಗೆ ಕೀಟ ಬಾಧೆಯಾದಾಗ ತಜ್ಞರು ಹೇಳಿದ ಔಷಧಗಳನ್ನು ಪಡೆಯಲು ಕೀಟನಾಶಕ ಮಾರಾಟದ ಅಂಗಡಿಗೆ ಬರುತ್ತಾರೆ. ಆಗ ಮಾರಾಟಗಾರರು ರೈತರು ಕೇಳಿದ ಔಷಧಿಯನ್ನು ನೀಡದೆ, ಬೇರೆ ಔಷಧಿ ನೀಡಿ ದಾರಿ ತಪ್ಪಿಸಬಾರದು. ಯಾವುದೇ ವಸ್ತುಗಳನ್ನು ಮಾರಾಟ ಮಾಡಿದಾಗ ಅದಕ್ಕೆ ಸಂಬಂಧಿಸಿದ ಬಿಲ್ ನೀಡಬೇಕು. ರೈತರು ನಿಗದಿತ ಅವಧಿಯಲ್ಲಿ ಲೈಸೆನ್ಸ್ ನವೀಕರಣ ಮಾಡಿಸಿಕೊಳ್ಳಬೇಕು. ರೈತರು ಮತ್ತು ರಸಗೊಬ್ಬರ ಮಾರಾಟಗಾರರ ನಡುವೆ ಒಳ್ಳೆಯ ಬಾಂಧವ್ಯ ಇರಬೇಕು. ಹಾಕಿದ ಬೆಳೆಯ ಪೋಷಣೆಗೆ ಗೊಬ್ಬರ ಖರೀದಿಸಲು, ಬೆಳೆಯು ಕೀಟಬಾಧೆಗೆ ಒಳಗಾದಾಗ, ಬಿತ್ತನೆ ಬೀಜಕ್ಕಾಗಿ ಮಾರಾಟಗಾರರ ಬಳಿಗೆ ರೈತರು ಬರುತ್ತಾರೆ. ಆ ಸಂದರ್ಭದಲ್ಲಿ ಅವರೊಂದಿಗೆ ಸಂಯಮದಿಂದ ವರ್ತಿಸುವುದಲ್ಲದೇ ಯಾವುದೇ ರೀತಿಯ ವ್ಯತ್ಯಾಸಗಳಾಗದಂತೆ ವಸ್ತುಗಳನ್ನು ಮಾರಾಟ ಮಾಡಬೇಕು ಎಂದರು.

ತೋಟಗಾರಿಕಾ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ಡಾ.ಹೆಚ್.ಎಂ.ನಾಗರಾಜ್ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಕ್ರಿಮಿನಾಶಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುತ್ತಿದ್ದು, ಇದು ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಶಿಫಾರಸು ಮಾಡಿದ ಪ್ರಮಾಣಕ್ಕಿಂತ ಹೆಚ್ಚಿಗೆ ಕ್ರಿಮಿನಾಶಕ ಬಳಸಲಾಗುತ್ತಿದೆ. ಈ ವಿಚಾರದಲ್ಲಿ ಮಾರಾಟಗಾರರು ರೈತರಲ್ಲಿ ಜಾಗೃತಿ ಮೂಡಿಸಬೇಕು. ಹಾಗಿದ್ದಲ್ಲಿ ಮಾತ್ರ ಉತ್ತಮ ಗುಣಮಟ್ಟದ ಆಹಾರ ಉತ್ಪಾದನೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಖೋ ಖೋ ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಭಾರತ ತಂಡದ ಆಟಗಾರ್ತಿ ಕುರುಬೂರಿನ ಬಿ.ಚೈತ್ರಾ ಅವರನ್ನು ಸನ್ಮಾನಿಸಲಾಯಿತು. ಅಲ್ಲದೇ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಸಂಘದ ಸದಸ್ಯರ ಮಕ್ಕಳನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕಗಳ ಮಾರಾಟಗಾರರ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಎಸ್.ಎಸ್.ಅಬೀದ್, ಜಾಗೃತ ಕೋಶದ ಮೈಸೂರು ವಿಭಾಗದ ಜಂಟಿ ಕೃಷಿ ನಿರ್ದೇಶಕ ಡಾ.ಕೆ. ಮಧುಸೂದನ್, ಸಂಘದ ಅಧ್ಯಕ್ಷ ಬಿ.ಪಿ.ಶಿವಪ್ರಕಾಶ್, ಗೌರವ ಕಾರ್ಯದರ್ಶಿ ಕೆ.ಸಿ.ಸತೀಶ್, ಇನ್ನಿತರರು ಉಪಸ್ಥಿತರಿದ್ದರು.

ಹಂಚ್ಯಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಮೈಸೂರು ತಾಲೂಕು ಹಂಚ್ಯಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಚ್.ಸಿ.ನಾಗೇಂದ್ರಮೂರ್ತಿ, ಉಪಾಧ್ಯಕ್ಷರಾಗಿ ಗಳಗರ ಹುಂಡಿ ಮಹದೇವ್ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಹಂಚ್ಯಾ ಗ್ರಾಪಂ ಮಾಜಿ ಅಧ್ಯಕ್ಷ ಎಚ್.ಸಿ.ಕುಮಾರಸ್ವಾಮಿ, ಗ್ರಾಮದ ಯಜಮಾನ ಕೆ.ಸಣ್ಣಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಬಸವರಾಜ, ಎಚ್.ಡಿ.ಚೆನ್ನಯ್ಯ, ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷ ಜೋಗಿ ಸಿದ್ದಯ್ಯ, ಮಾಜಿ ಅಧ್ಯಕ್ಷ ಹೆಚ್.ಎಸ್.ಕುಮಾರ್, ಮುಖಂಡರಾದ ಎಚ್.ಡಿ. ಮಂಜು, ಪರಮೇಶ್, ನಂಜಪ್ಪ, ವೆಂಕಟೇಶ್, ಚಂದ್ರಶೇಖರ್, ಎಚ್.ಎಸ್.ಕುಮಾರ್ ಭೈರಿ, ಹೆಚ್.ಸಿ.ಮಂಜುನಾಥ್, ಸ್ವಾಮಿಗೌಡ, ಕುಂಬಾರ, ಮಹಾದೇವ ಮತ್ತು ಸದಸ್ಯರು, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ರಾಮಚಂದ್ರು, ಶಂಭು ಶರಣಪ್ಪ ಇತರರು ಉಪಸ್ಥಿತರಿದ್ದರು.

ಐಪಿಎಲ್ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕುವಂತೆ ಮೈಸೂರು ಸೈಬರ್ ಕ್ರೈಂಗೆ ಮನವಿ

ಮೈಸೂರು: ಐಪಿಎಲ್ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕುವಂತೆ ಕರ್ನಾಟಕ ಹಿತರಕ್ಷಣಾ ವೇದಿಕೆ ಸದಸ್ಯರು, ಸೈಬರ್ ಕ್ರೈಂ ಪೊಲೀಸ್ ಇನ್ಸ್ಪೆಕ್ಟರ್ ನಂದೀಶ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್ ಮಾತನಾಡಿ, ಮುಂದಿನ ವಾರದಿಂದ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ಆರಂಭವಾಗಲಿದ್ದು, ಮುಂದಿನ ಎರಡು ತಿಂಗಳು ಯುವ ಸಮೂಹ ಈ ಕ್ರಿಕೆಟ್ ಹಬ್ಬದಲ್ಲಿ ಮುಳುಗೇಳಲಿದೆ. ಇತ್ತೀಚೆಗೆ ಗ್ರಾಮೀಣ ಭಾಗದ ಯುವಕರು, ವಿದ್ಯಾರ್ಥಿಗಳನ್ನು ಹೆಚ್ಚಾಗಿ ಇದು ಆಕರ್ಷಿಸುತ್ತದೆ ಜೊತೆಗೆ ಬೆಟ್ಟಿಂಗ್ ದಂಧೆಗೂ ಕಾರಣವಾಗುತ್ತಿದೆ. ವಿದ್ಯಾರ್ಥಿಗಳು ಸಂಜೆಯಾಗುತ್ತಿದ್ದಂತೆ ಆನ್‌ಲೈನ್ ಕ್ಲಾಸ್ ನೆಪ ಹೇಳಿಕೊಂಡು ಮೊಬೈಲ್‌ನಲ್ಲಿ ಕ್ರಿಕೆಟ್ ವೀಕ್ಷಿಸುತ್ತಾ ಬೆಟ್ಟಿಂಗ್ ದಂಧೆಯಲ್ಲಿ ತೊಡಗುತ್ತಿದ್ದಾರೆ. ಸಾಮಾನ್ಯವಾಗಿ ಈ ದಂಧೆಗಿಳಿಯುವವರಲ್ಲಿ ಕಾಲೇಜು ವಿದ್ಯಾರ್ಥಿಗಳು, ಯುವಕರು, ಕೂಲಿ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಲವು ಯುವಕರು ಇದಕ್ಕಾಗಿ ಸಾಲ ಮಾಡಿ ಮೊಬೈಲ್, ಬೈಕ್ ಅಡಮಾನ ಮಾಡಿ ಕೈ ಸುಟ್ಟುಕೊಂಡಿದ್ದಾರೆ. ಇದರಲ್ಲಿ ತೊಡಗಿದ ವಿದ್ಯಾರ್ಥಿಗಳು, ಯುವಕರು ಗೆದ್ದ ಖುಷಿಗೆ, ಸೋತ ದುಃಖಕ್ಕೆ ಮದ್ಯದ ಅಮಲಲ್ಲಿ ತೇಲುತ್ತಿರುವ ನಿದರ್ಶನಗಳು ಬೇಕಾದಷ್ಟಿವೆ. ಸಾಲ ತೀರಿಸಲಾಗದೆ ಊರು ಬಿಟ್ಟು ಹೋದ, ಆತ್ಮಹತ್ಯೆಗೆ ಶರಣಾದ ಪ್ರಕರಣಗಳೂ ಅಲ್ಲಲ್ಲಿ ವರದಿಯಾಗಿವೆ. ಇನ್ನಷ್ಟು ಜನ ಇಂತಹ ಸಂಕಷ್ಟಕ್ಕೆ ಸಿಲುಕದಂತೆ ಇದಕ್ಕೆಲ್ಲ ಕಡಿವಾಣ ಹಾಕಬೇಕಾಗಿದೆ.



ಐಪಿಎಲ್ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕುವಂತೆ ಮೈಸೂರು ಸೈಬರ್ ಕ್ರೈಂ ಪೊಲೀಸರಿಗೆ ಕರ್ನಾಟಕ ಹಿತರಕ್ಷಣಾ ವೇದಿಕೆ ಸದಸ್ಯರು ಮನವಿ ಸಲ್ಲಿಸಿದರು.

ಈ ಬೆಟ್ಟಿಂಗ್ ದಂಧೆ ವ್ಯಾಪಕವಾಗಿ ನಡೆಯುತ್ತಿದ್ದರು ಸೈಬರ್ ಕ್ರೈಂ ವಿಭಾಗದ ಪೊಲೀಸರು ಇಂತಹ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ಈ ವೇಳೆ ಎಸ್.ಎನ್.ರಾಜೇಶ್, ಗುರುರಾಜ್ ಶೆಟ್ಟಿ, ಮಂಜುನಾಥ್, ರವಿಚಂದ್ರ, ಸಂತೋಷ್‌ಕುಮಾರ್, ರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಕಾರ್ಯಕರ್ತೆ ನಂದಿನಿ ನಾಗರಾಜ್ ಮೇಲೆ ಸಿಎಂ ಆಪ್ತ ಮಾಜಿ ಸಚಿವ ರೇವಣ್ಣ ಹಲ್ಲೆ: ಮಾಜಿ ಸಚಿವರ ವಿರುದ್ಧ ದೂರು ದಾಖಲು



ಬೆಂಗಳೂರು: ಮಾಜಿ ಸಚಿವ ಹೆಚ್.ಎಂ. ರೇವಣ್ಣ ಕಾಂಗ್ರೆಸ್ ಕಾರ್ಯಕರ್ತೆ ಮೇಲೆ ಹಲ್ಲೆ ಮಾಡಿರುವ ಆರೋಪ ಕೇಳಿಬಂದಿದೆ. ಪ್ರಕರಣ ಸಂಬಂಧ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ನಂದಿನಿ ನಾಗರಾಜ್ ದೂರು ದಾಖಲಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಎಚ್.ಎಂ. ರೇವಣ್ಣ ವಿರುದ್ಧ ಹಲ್ಲೆ ಮತ್ತು ಜೀವ ಬೆದರಿಕೆ ಆರೋಪ ಕೇಳಿ ಬಂದಿದೆ. ಸದ್ಯ ರೇವಣ್ಣ ಅವರು ಕರ್ನಾಟಕ ರಾಜ್ಯ ಖಾತರಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ರೇವಣ್ಣ, ನಂದಿನಿ ಅವರನ್ನು ತಳ್ಳುತ್ತಿರುವ ವೀಡಿಯೊ ಸಾಕ್ಷ್ಯವನ್ನು ನಂದಿನಿ ಪೊಲೀಸರಿಗೆ ಸಲ್ಲಿಸಿದ್ದಾರೆ. ವಿಡಿಯೋ ತುಣುಕಿನಲ್ಲಿ, ನಂದಿನಿ ರೇವಣ್ಣ ಅವರು ರಾಹುಲ್ ಗಾಂಧಿ ಅವರಿಗೆ ಈ ವಿಷಯವನ್ನು ತಲುಪಿಸುವುದಾಗಿ ಹೇಳಿದ್ದಾರೆ. ರೇವಣ್ಣ ಸಿಎಂ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಕಾರಣ ಈ ಪ್ರಕರಣ ಸದ್ಯ ನಡೆಯುತ್ತಿರುವ ವಿಧಾನಸಭೆ ಅಧಿವೇಶನದಲ್ಲಿ ಚರ್ಚೆಗೆ ಕಾರಣವಾಗುವ ಸಾಧ್ಯತೆಯಿದೆ.

ತಮ್ಮ ವಿರುದ್ಧ ಕೇಳಿಬಂದಿರುವ ಆರೋಪದ ಬಗ್ಗೆ ಮಾಜಿ ಸಚಿವ ಹೆಚ್.ಎಂ. ರೇವಣ್ಣ ಸ್ಪಷ್ಟನೆ ನೀಡಿದ್ದು, ಆ ಮಹಿಳೆ ಗಲಾಟೆ ಮಾಡುತ್ತಿದ್ದರು. ಪದೇ ಪದೆ ರಾಹುಲ್ ಗಾಂಧಿ ಹೆಸರು ಹೇಳುತ್ತಿದ್ದಳು. ಕೊಲೆ ಮಾಡಲು ಬಂದಿದ್ದರು, ಹೊಡೆದರು ಅನ್ನೋದು ಸರಿಯಲ್ಲ. ವಿಡಿಯೋ ಮಾಡಬೇಡ ಅಂತಾ ಮೊಬೈಲ್ ತಳ್ಳಿದ್ದು ನಿಜ. ನಾವು ಯಾರೂ ಆಕೆಯ ಮೇಲೆ ಹಲ್ಲೆ ಮಾಡಿಲ್ಲ ಎಂದು ಸ್ಪಷ್ಟನೆ ನೀಡಿದರು.

ಅಧಿಕಾರಿಯನ್ನು ವರ್ಗಾವಣೆ ಮಾಡಿಸುವುದಾಗಿ ಮಹಿಳೆ ಫೋನ್ ಪೇ ಮೂಲಕ 1 ಲಕ್ಷ ರೂ. ದುಡ್ಡು ಪಡೆದಿದ್ದಾಳೆ. ನಾನು ತಪ್ಪು ಮಾಡಿದ್ದರೆ ಶಿಕ್ಷೆ ಆಗಲಿ. ಅಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಿಲ್ಲಿಸುವಂತೆ ಆಕೆಗೆ ಹೇಳಿದ್ದೆ ಎಂದು ರೇವಣ್ಣ ತಿಳಿಸಿದ್ದಾರೆ.

ಆದರೆ ಆಕೆ, ಅನುಚಿತವಾಗಿ ವರ್ತಿಸಿದ್ದೇನೆ ಮತ್ತು ಅನುಚಿತ ಭಾಷೆಯನ್ನು ಬಳಸಿದ್ದೇನೆ ಎಂದು ಈಗ ಸುಳ್ಳು ಆರೋಪ ಮಾಡುತ್ತಿದ್ದಾರೆ. ನನ್ನಿಂದಾಗಿ ತನಗೆ ಜೀವ ಭಯವಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಅವರಿಗೆ ಹಾನಿ ಮಾಡುವುದರಿಂದ ನನಗೇನು ಲಾಭ. ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ, ನಾನು ಎಂದಿಗೂ ಅಂತಹ ಕೃತ್ಯಗಳಲ್ಲಿ ತೊಡಗಿಲ್ಲ ಎಂದು ರೇವಣ್ಣ ಸ್ಪಷ್ಟಪಡಿಸಿದರು.

ನಾನು ಏನಾದರೂ ತಪ್ಪು ಮಾಡಿದ್ದರೆ, ಪಕ್ಷವು ನನ್ನ ವಿರುದ್ಧ ಕ್ರಮ ಕೈಗೊಳ್ಳಲಿ. ಅವರು ರಾಹುಲ್ ಗಾಂಧಿಯವರ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಮತ್ತು ವರ್ಗಾವಣೆಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರಗಳಲ್ಲಿ ಭಾಗಿಯಾಗಿದ್ದಾರೆ. ಈ ಬಗ್ಗೆ ನಾನು ಎಐಸಿಸಿಗೆ ದೂರು ನೀಡುತ್ತೇನೆ. ಈ ಬೆಳವಣಿಗೆಯಿಂದ ನನಗೆ ತುಂಬಾ ನೋವಾಗಿದೆ ಎಂದು ಅವರು ಹೇಳಿದ್ದಾರೆ.

5, 8ನೇ ತರಗತಿ ಪ್ರವೇಶ ಪರೀಕ್ಷೆ

ಮೈಸೂರು,ಮಾ.18–ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿಗೆ ಜನಸೇವಾ ವಿದ್ಯಾಕೇಂದ್ರ, ಮಾಗಡಿ ರಸ್ತೆ ಬೆಂಗಳೂರು ನಗರ ಜಿಲ್ಲೆ ಇಲ್ಲಿ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 5ನೇ ತರಗತಿ ಕನ್ನಡ ಮಾಧ್ಯಮ ಮತ್ತು 8ನೇ ತರಗತಿ ಕನ್ನಡ, ಆಂಗ್ಲ ಮಾಧ್ಯಮಗಳಿಗೆ ಪ್ರವೇಶ ಪಡೆಯಲು ಪ್ರವೇಶ ಪರೀಕ್ಷೆಯ ದಿನಾಂಕ ನಿಗದಿಪಡಿಸಲಾಗಿದೆ. 5ನೇ ಮತ್ತು 8ನೇ ತರಗತಿಗೆ ಪ್ರವೇಶ ಪರೀಕ್ಷೆ ಮಾ.9ರಿಂದ ಏ.6ರವರೆಗೆ ಅರ್ಹ ಮತ್ತು ಆಸಕ್ತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಸದುಪಯೋಗ ಪಡೆಯಬಹುದು. ಮಾಹಿತಿಗೆ 9241216119, 080–64548640 ಸಂಪರ್ಕಿಸಿ.

ಪತ್ರಕರ್ತರ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ; ಆಂದೋಲನ ತಂಡ ಚಾಂಪಿಯನ್



ಪತ್ರಕರ್ತರ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆಂದೋಲನ ತಂಡ.



ರನ್ನರ್ ಅಪ್ ಪ್ರಶಸ್ತಿ ಪಡೆದ ವಿಜಯವಾಣಿ ತಂಡ.

ಮೈಸೂರು, ಮಾ.18(ಎಂಟಿವೈ)– ಪತ್ರಕರ್ತರ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ವಿಜಯವಾಣಿ ತಂಡದ ವಿರುದ್ಧ ಆಂದೋಲನ ತಂಡ ಭರ್ಜರಿ ಗೆಲುವು ಸಾಧಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್ ಮೈದಾನದ ಹಾಕಿ ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿ ಆಂದೋಲನ, ಪ್ರತಿನಿಧಿ, ವಿಜಯವಾಣಿ, ಪ್ರಜಾವಾಣಿ, ವಿಜಯ ಕರ್ನಾಟಕ, ಪ್ಲೇಯಿಂಗ್ 11 ತಂಡಗಳು ಉತ್ತಮ ಪ್ರದರ್ಶನ ನೀಡಿದವು. ಅಂತಿಮ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವಿಜಯವಾಣಿ ತಂಡ 6 ಓವರ್‌ಗಳಿಗೆ 88 ರನ್ ಸವಾಲಿನ ಗುರಿ ನೀಡಿತು. ರೋಹಿತ್, ಆದರ್ಶ, ಅಂಟೋನಿ ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. ಸಿಕ್ಸರ್ ಸಿಡಿಸಿ ಅಬ್ಬರಿಸಿದರು.

10 ವಿಕೆಟ್‌ಗಳ ಜಯ: ಈ ಮೊತ್ತವನ್ನು ಬೆನ್ನತ್ತಿದ ಆಂದೋಲನ ಬಳಗ, ವಿಕೆಟ್ ನಷ್ಟವಿಲ್ಲದೇ 5 ಓವರ್‌ಗಳಿಗೆ 89 ರನ್ ಗಳಿಸಿ ಜಯ ಸಾಧಿಸಿತು. ತಂಡದ ನಾಯಕ ಚಿರಂಜೀವಿ ಮತ್ತು ಸುರೇಶ್ ಜೋಡಿ ವಿಜಯವಾಣಿ ತಂಡದ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿ, ಬೌಂಡರಿಗಳ ಸುರಿಮಳೆಗೈದರು. ಈ ಜೋಡಿ ಸರಣಿ ಶ್ರೇಷ್ಠ ಮತ್ತು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನವಾಯಿತು.

ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಬಹುಮಾನ ವಿತರಿಸಿ ಮಾತನಾಡಿ, ಪತ್ರಕರ್ತರು ಆರೋಗ್ಯದ ಕಾಳಜಿ ವಹಿಸಬೇಕು. ಸದಾ ಬ್ರೇಕಿಂಗ್ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುವಾಗ ಮಾನಸಿಕ ಹಾಗೂ ದೈಹಿಕವಾಗಿ ಅತ್ಯಂತ ಚಟುವಟಿಕೆಯಿಂದ ಇರಲು ಕ್ರೀಡೆ ಸಹಕಾರಿ ಎಂದು ಹೇಳಿದರು.

ಪತ್ರಕರ್ತರು ವೃತ್ತಿ ತ್ಯಜಿಸುವ ತನಕವೂ ಕೆಲಸದ ಒತ್ತಡ ಇರುತ್ತದೆ. ದೀರ್ಘ ಕಾಲ ಕರ್ತವ್ಯ ನಿರ್ವಹಿಸಬೇಕಾದರೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುವುದು ಉತ್ತಮ. ಎಲ್ಲ ಪತ್ರಕರ್ತರು ಒಂದೆಡೆ ಸೇರಿ ಕ್ರೀಡಾಸ್ಫೂರ್ತಿ ಮೆರೆದಿರುವುದು ಪ್ರಶಂಸನೀಯ. ತಿಂಗಳಿಗೊಮ್ಮೆ ಈ ರೀತಿಯ ಕ್ರೀಡಾಕೂಟ ಸಂಘಟಿಸುವಂತೆ ಸಲಹೆ ನೀಡಿದರು.

ಪ್ರಸ್ತುತ ದಿನಮಾನಗಳಲ್ಲಿ ಪತ್ರಕರ್ತರು ತಮ್ಮ ಆರೋಗ್ಯ ರಕ್ಷಣೆಗೆ ಆದ್ಯತೆ ಕೊಡಬೇಕು. ಕುಟುಂಬದ ಸದಸ್ಯರಿಗೂ ಸಮಯ ಕೊಡಬೇಕು ಎಂದು ತಿಳಿಸಿದರು.

ಇಂಡಿಯನ್ ಎಕ್ಸ್‌ಪ್ರೆಸ್ ಟ್ರೋಫಿ: ಮುಂಬರುವ ದಿನಗಳಲ್ಲಿ ಪತ್ರಕರ್ತರಿಗೆ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದರೆ ಇಂಡಿಯನ್ ಎಕ್ಸ್‌ಪ್ರೆಸ್ ಕಪ್, ಪಂದ್ಯ ಶ್ರೇಷ್ಠ ಪ್ರಶಸ್ತಿ ನೀಡುವುದಾಗಿ ಹಿರಿಯ ಪತ್ರಕರ್ತ ಶಿವಕುಮಾರ್ ಘೋಷಿಸಿದರು. ವಿಜೇತ ತಂಡಕ್ಕೆ 3 ಸಾವಿರ ರೂ. ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಬಿ.ಎಸ್.ಪ್ರಭುರಾಜನ್, ಎಸ್.ಟಿ.ರವಿಕುಮಾರ್, ಉಮೇಶ್ ಭಟ್, ಬಿಸ್ಲಹಳ್ಳಿ ವೀರಭದ್ರಪ್ಪ, ಕೂಡ್ಲಿ ಗುರುರಾಜ್, ಕೆ.ನರಸಿಂಹಮೂರ್ತಿ, ಸತ್ಯನಾರಾಯಣ, ಎಂ.ಸುಬ್ರಹ್ಮಣ್ಯ, ಕೆ.ಪಿ.ನಾಗರಾಜ್, ರಾಮು, ಎಂ.ಟಿ.ಯೋಗೇಶ್ ಕುಮಾರ್, ಕೆ.ಬಿ.ರಮೇಶ್‌ನಾಯಕ, ದಿನೇಶ್‌ಕುಮಾರ್, ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯ ಆಯೋಜಕರಾದ ಆರ್.ಕೃಷ್ಣ, ಮೋಹನ್‌ಕುಮಾರ್, ಅವಿನಾಶ್ ಜೈನಳ್ಳಿ, ಭಾಸ್ಕರ್, ಸತೀಶ್ ದೇಪುರ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ದಡಿಘಟ್ಟ ಗ್ರಾಮದೇವತೆ ಲಕ್ಷ್ಮಿದೇವಿ ಅಮ್ಮನವರ ವೈಭವದ ರಥೋತ್ಸವ



ಶ್ರೀಲಕ್ಷ್ಮಿದೇವಿ ಅಮ್ಮನವರ ಮಹಾರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ: ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಗಡಿಗ್ರಾಮ ದಡಿಘಟ್ಟ ಗ್ರಾಮದೇವತೆ ಶ್ರೀ ಲಕ್ಷ್ಮಿದೇವಿ (ದಡಿಘಟ್ಟದಮ್ಮ) ಅಮ್ಮನವರ ಮಹಾರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಗ್ರಾಮದ ಮುಖಂಡರು ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ದೇವಾಲಯದ ಆವರಣದಿಂದ ಆರಂಭವಾದ ರಥೋತ್ಸವವು ನಿರ್ವಿಘ್ನವಾಗಿ ಪ್ರಮುಖ ಬೀದಿಗಳಲ್ಲಿ ಸಾಗಿ ನಂತರ ಸ್ವಸ್ಥಾನ ತಲುಪಿತು.

ಭಕ್ತಾದಿಗಳು ರಥಕ್ಕೆ ಹಣ್ಣು-ಜವನ ಸಮರ್ಪಿಸಿ ಉಘೇ.. ಲಕ್ಷ್ಮೀದೇವಮ್ಮ ಉಘೇ.. ಉಘೇ.. ದಡಿಘಟ್ಟದಮ್ಮ ಉಘೇ.. ಉಘೇ.. ಎಂಬಿತ್ಯಾದಿ ಜಯಘೋಷಗಳನ್ನು ಕೂಗಿ ಸುತ್ತಾ ರಥವನ್ನು ಎಳೆದು ತಮ್ಮ ಭಕ್ತಿ ಭಾವ ಸಮರ್ಪಣೆ ಮಾಡಿದರು. ದೊಡ್ಡಯ್ಯ, ಚಿಕ್ಕಯ್ಯ, ಮೈಲಾರಲಿಂಗೇಶ್ವರ ಮುಂತಾದ ದೇವರ ಜಾನಪದ ಶೈಲಿಯ ಪೂಜಾ ಕುಣಿತವು ರಥೋತ್ಸವದ ರಂಗನ್ನು ಹೆಚ್ಚಿಸಿತ್ತು.

ದಡಿಘಟ್ಟ ಗ್ರಾಮದ ಮುಖಂಡರು ಹಾಗೂ ಶ್ರೀ ಲಕ್ಷ್ಮೀದೇವಿ ಯುವಕರ ಸಂಘದ ಪದಾಧಿಕಾರಿಗಳು ಮಹೋತ್ಸವದ ನೇತೃತ್ವ ವಹಿಸಿಕೊಂಡು ಯಶಸ್ವಿಯಾಗಿ ನಡೆಸಿಕೊಟ್ಟರು.

ಪಿಕಾರ್ಡ್ ಬ್ಯಾಂಕ್ ಚುನಾವಣೆ: ಎಲ್ಲಾ 13 ಸ್ಥಾನಗಳಲ್ಲೂ ಕಾಂಗ್ರೆಸ್ ಗೆಲುವು

ಶ್ರೀರಂಗಪಟ್ಟಣ: ಶ್ರೀರಂಗಪಟ್ಟಣ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಕಾರ್ಡ್) ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ 13 ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿಗರು ಜಯಗಳಿಸಿದ್ದಾರೆ.

ಬ್ಯಾಂಕ್‌ನ ಆಡಳಿತ ಮಂಡಳಿಗೆ ಜ.25 ರಂದು ಚುನಾವಣೆ ನಡೆದಿದ್ದು, ಬಿ.ಜೆ. ನಾಗೇಶಪ್ರಭು, ಬುಡ್ಡೇಗೌಡ, ಕೆ.ಮಹದೇವು, ಪಿ.ಸದಾಶಿವ, ದೇವರಸಯ್ಯ, ಕೆ.ಸಿ. ವೀಣಾ, ಬಿ.ಎಸ್.ವಾಸು, ಬಿ.ಎಸ್.ಮೋಹನ್, ಕಮಲಮ್ಮ ಸೇರಿ 9 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಆದರೆ ಚುನಾವಣೆ ನಡೆದಿದ್ದ ನಾಲ್ಕು ಸ್ಥಾನಗಳ ಮತ ಎಣಿಕೆ ಹೈಕೋರ್ಟ್ ನಿರ್ದೇಶನದಂತೆ ಮಂಗಳವಾರ ನಡೆದಿದ್ದು, ನಾಲ್ಕೂ ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿಗರು ಗೆಲವು ಸಾಧಿಸಿದ್ದಾರೆ.

ಕೆ.ಶೆಟ್ಟಹಳ್ಳಿ (ಕ್ಷೇತ್ರ-4) ಸಾಲಗಾರರ ಕ್ಷೇತ್ರದಿಂದ ಎಚ್.ಡಿ. ಮಹದೇವು (51) ಜಯಗಳಿಸಿದ್ದು, ಎಸ್.ಎಲ್.ದಿವಾಕರ್ (31) ಮತ್ತು ಕೇಶವ (14) ಪರಾಭವಗೊಂಡಿದ್ದಾರೆ. ಬಲ್ಲೇನಹಳ್ಳಿ (ಕ್ಷೇತ್ರ-6) ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಚಲುವೇಗೌಡ (107) ಜಯಗಳಿಸಿದ್ದು, ಶ್ರೀಕಂಠೇಗೌಡ (42) ಮತ್ತು ಸುರೇಶ್ (2) ಪರಾಭವಗೊಂಡಿದ್ದಾರೆ.



ಪಿಕಾರ್ಡ್ ಚುನಾವಣೆಯಲ್ಲಿ ಜಯಗಳಿಸಿದವರನ್ನು ಅಭಿನಂದಿಸಲಾಯಿತು.

ಕಸಬಾ ಹೋಬಳಿ (ಕ್ಷೇತ್ರ-9) 3ನೇ ಸಾಲಗಾರರ ಕ್ಷೇತ್ರದಿಂದ ಚಿಕ್ಕತಾಯಮ್ಮ (18) ಜಯಗಳಿಸಿದ್ದು, ಮಹದೇವು (12) ಸೋಲನ್ನನುಭವಿಸಿದ್ದಾರೆ. ಬೆಳಗೊಳ ಹೋಬಳಿ (ಕ್ಷೇತ್ರ-10) ಪಾಲಹಳ್ಳಿ ಸಾಲಗಾರರ ಕ್ಷೇತ್ರದಿಂದ ಸಿ.ದೇವರಾಜು (24) ಆಯ್ಕೆಯಾಗಿದ್ದು, ಶಂಕರೇಗೌಡ ಪರಾಭವಗೊಂಡಿದ್ದಾರೆ ಎಂದು ಚುನಾವಣಾಧಿಕಾರಿ ವೇಣು ಪ್ರಕಟಿಸಿದರು.

ಪಿಕಾರ್ಡ್ ಬ್ಯಾಂಕ್ ಚುನಾವಣೆಯ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಚುನಾಯಿತ ನಿರ್ದೇಶಕರು ಹಾಗೂ ಅವರ ಬೆಂಬಲಿಗರು ಪಟ್ಟಣದಲ್ಲಿ ಸಂಭ್ರಮ ಆಚರಿಸಿದರು. ಸಾಲು ಸಾಲು ಪಟಾಕಿ ಸಿಡಿಸಿ, ಸಿಹಿ ಹಂಚಿದರು. ಶಾಸಕ ರಮೇಶ ಬಂಡಿಸಿದ್ದೇಗೌಡ ಮತ್ತು ಮನ್‌ಮುಲ್ ಅಧ್ಯಕ್ಷ ಬಿ. ಬೋರೇಗೌಡ ಅವರ ಪರ ಘೋಷಣೆ ಕೂಗಿದರು. ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್. ಚಂದ್ರಶೇಖರ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಿ.ಎಸ್. ಸಂದೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಎಸ್. ಚಂದ್ರಶೇಖರ್ ಇದ್ದರು.

ಗಂಡು-ಹೆಣ್ಣು ಭೇದವಿಲ್ಲದೆ ಸಮಾನ ಅವಕಾಶ ಕೊಟ್ಟರೆ ಅಭಿವೃದ್ಧಿ ಸಾಧ್ಯ



ವಿಜಯ ಮಹಾವಿದ್ಯಾಲಯದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜಿಪಂ ಸಿಇಓ ಕೆ.ಆರ್.ನಂದಿನಿ ಉದ್ಘಾಟಿಸಿದರು.

ಪಾಂಡವಪುರ, ಮಾ.18- ಸಮಾಜದಲ್ಲಿ ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿಕೊಟ್ಟರೆ ಸಮಾಜ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲಿದೆ ಎಂದು ಜಿಪಂ ಸಿಇಓ ಕೆಆರ್‌ನಂದಿನಿ ಹೇಳಿದರು.

ಪಟ್ಟಣದ ವಿಜಯ ಮಹಾವಿದ್ಯಾಲಯದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು-ಗಂಡು ಎಂಬ ತಾರತಮ್ಯ ಇಲ್ಲದೆ ಇಬ್ಬರು ಜತೆಯಾಗಿ ಹೋದರೆ ಅಭಿವೃದ್ಧಿ ಹೊಂದಿ ಜತೆಗೆ ಮುಂದೆ ಹೆಣ್ಣು ಮಕ್ಕಳ ದಿನಾಚರಣೆ ಮಾಡುವ ಅವಶ್ಯಕತೆ ಇರುವುದಿಲ್ಲ. ಹಿಂದೆ ಹೆಣ್ಣುಮಕ್ಕಳು ಮೂಲಭೂತ ಸೌಕರ್ಯಕ್ಕಾಗಿ ಹೋರಾಟ ಮಾಡುವಂತಹ ಸ್ಥಿತಿ ಇತ್ತು ಆದರೀಗ ಹಂತಹಂತವಾಗಿ ಬದಲಾವಣೆಯಾಗುತ್ತಿದೆ, ನಮ್ಮ ತಾಯಿ, ಅಜ್ಜಿ, ಮುತ್ತಜ್ಜಿ ಅವರ ಕಾಲದಲ್ಲಿದ್ದ ವ್ಯವಸ್ಥೆ ಹೀಗಿಲ್ಲ. ಮುಂದೆ ಇನ್ನಷ್ಟು ಬದಲಾವಣೆಯಾಗಲಿದೆ ಎಂದರು.

ಇದೇ ವೇಳೆ ಕೆ.ಆರ್.ನಂದಿನಿ ಅವರನ್ನು ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕೆ.ವಿ.ಬಸವರಾಜು ಲೋಕೇಶ್‌ಮೂರ್ತಿ, ಎನ್.ರಾಮೇಗೌಡ, ಗೋಪಾಲಸ್ವಾಮಿ, ಲಿಂಗರಾಜು, ಸೋಮೇಗೌಡ ಚಿಕ್ಕಮರಳಿ ಚಂದ್ರಶೇಖರ್, ಡಾ.ಎನ್. ಕೆವೆಂಕಟೇಗೌಡ ಸೇರಿದಂತೆ ಮತ್ತಿತರರಿದ್ದರು.

ವಿಜೃಂಭಣೆಯ ಬೆಟ್ಟದ ಅರಸಮ್ಮ ಜಾತ್ರಾ ಮಹೋತ್ಸವ

ಹಲಗೂರು, ಮಾ.18- ಹಲಗೂರು ಹೋಬಳಿಯ ಪ್ರಸಿದ್ಧ ಬೆಟ್ಟದ ಅರಸಮ್ಮನ ಜಾತ್ರಾ ಮಹೋತ್ಸವದಲ್ಲಿ ಗುಂಡಾಪುರ ಮತ್ತು ಸುತ್ತಮುತ್ತಲಿನ ಏಳು ಗ್ರಾಮಗಳ ಭಕ್ತಾದಿಗಳು ಪಾಲ್ಗೊಂಡಿದ್ದರು.

ಬೆಟ್ಟದ ಅರಸಮ್ಮನ ಕರಗ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಕರಗಕ್ಕೆ ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಲಾಗಿದ್ದು, ದೇವರ ಗುಡ್ಡರು ಹೆಬ್ಬಾರೆಯನ್ನು ಬಾರಿಸುತ್ತಾ, ಜೋಡಿ ಬಸವನ ಜೊತೆ ಮೆರವಣಿಗೆಯನ್ನು ಮುನ್ನಡೆಸಿದರು. ಕರಗದ ಸನ್ನಿಧಾನದಲ್ಲಿ ಪೂಜೆ ನಡೆಸಿ, ಭಕ್ತಾದಿಗಳು ಹರಕೆ ಸಲ್ಲಿಸಿದರು.



ಬೆಟ್ಟದ ಅರಸಮ್ಮನ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ಅಪಾರ ಭಕ್ತಾದಿಗಳು.

ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಸಾವಿರಾರು ಭಕ್ತಾದಿಗಳು ಹರಕೆ ಹೊತ್ತು ಬಾಯಿಬೀಗ ಹಾಕಿಕೊಂಡು, ಮಹಿಳೆಯರು ಕಳಸ ಹೊತ್ತುಕೊಂಡು ಮುನ್ನಡೆದರು. ಅಪಾರ ಭಕ್ತರ ಸಂಖ್ಯೆಯನ್ನೂ ಮೀರಿ ಜನಸ್ತೋಮ ನೆರೆದಿತ್ತು. ಭಕ್ತರು ದೇವರ ದರ್ಶನ ಪಡೆದು ಭಕ್ತಿಭಾವದಿಂದ ಆರಾಧನೆ ಸಲ್ಲಿಸಿದರು.

ಪಾನಕ, ಷರಬತ್ತು ವಿತರಣೆ: ಜಾತ್ರೆಗೆ ಆಗಮಿಸಿದ್ದ ಭಕ್ತಾದಿಗಳಿಗೆ ಬಿಸಿಲಿನ ದಾಹ ತಣಿಸಲು ಮಧ್ಯಾಹ್ನದಿಂದ ಸಂಜೆವರೆಗೆ ಪಾನಕ ಮತ್ತು ಷರಬತ್ತು ವಿತರಣೆ ನಡೆಯಿತು. ಹಲವಾರು ಗ್ರಾಮಸ್ಥರು ಹರಕೆ ತೀರಿಸಲು ಟ್ರ್ಯಾಕ್ಟರ್, ಎತ್ತಿನ ಗಾಡಿಗಳಲ್ಲಿ ಬೇವಿನ ಪಾನಕ, ನಿಂಬೆಹಣ್ಣಿನ ಷರಬತ್ತು, ಮಜ್ಜಿಗೆ, ಕೋಸಂಬರಿ, ಬಾಳೆಹಣ್ಣು ವಿತರಿಸಿದರು.

ಪರದೇಶಿ ಕುಣಿತ ಭಕ್ತರ ಮನರಂಜನೆ: ಜಾತ್ರೆಯ ಮತ್ತೊಂದು ಆಕರ್ಷಣೆಯೆಂದರೆ ಪರದೇಶಿ ಕುಣಿತ. ಸಮೀಪದ ಬಾಳೆಹೊನ್ನಿಗ ಗ್ರಾಮದಿಂದ ಬಂದ ನೂರಾರು ಯುವಕರು ಮತ್ತು ಭಕ್ತರು ಚಿತ್ರವಿಚಿತ್ರ ಬಟ್ಟೆ ತೊಟ್ಟು, ಬೇವಿನ ಸೊಪ್ಪನ್ನು ಸೊಂಟಕ್ಕೆ ಕಟ್ಟಿಕೊಂಡು, ತೆಂಗಿನ ಮಟ್ಟೆಯಿಂದ ತಯಾರಿಸಿದ ಕೋವಿ ಹಿಡಿದು, ಗೋಣಿಚೀಲದಿಂದ ವಿವಿಧ ಆಕಾರಗಳ ವಸ್ತ್ರ ಧರಿಸಿ ಭಕ್ತಾದಿಗಳಿಗೆ ಮನರಂಜನೆ ನೀಡಿದರು. ಪರದೇಶಿಗಳು ದೇವರ ಪೂಜೆಗೆ ವಿಶೇಷ ಗೌರವ ನೀಡಿದರು.

ಮಳವಳ್ಳಿಯ ಶಾಸಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ ನರೇಂದ್ರಸ್ವಾಮಿ ಬೆಟ್ಟದ ಅರಸಮ್ಮ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ನಾಡಿನಾದ್ಯಂತ ಉತ್ತಮ ಮಳೆ ಬೆಳೆಯಾಗಿ ಜನರು ಸುಖ ಸಮೃದ್ಧಿ ನೆಲೆಸಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಭದ್ರತಾ ವ್ಯವಸ್ಥೆ ಮತ್ತು ಬಂದೋಬಸ್ತ್: ಭಕ್ತಾದಿಗಳ ಅಪಾರ ಸಂಖ್ಯೆಯನ್ನು ಗಮನಿಸಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಸೂಕ್ತ ಬಂದೋ ಬಸ್ತ್ ಏರ್ಪಡಿಸಿತ್ತು ಜನಸಂದಣಿಯನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಅಂತರಂಗದ ಪ್ರೀತಿ ಕಾಣುವುದೇ ಪುತಿನ ಕಾವ್ಯ ಸಂದೇಶ

ಮೇಲುಕೋಟೆ, ಮಾ.18, ಅಂತರಂಗದ ಪ್ರೀತಿಯನ್ನು ನಾವು ಕಂಡುಕೊಳ್ಳಬೇಕೆಂಬುದೇ ಪುತಿನ ಕಾವ್ಯಸಂದೇಶವಾಗಿದೆ ಎಂದು ಖ್ಯಾತ ರಂಗ ನಟ ನಿರ್ದೇಶಕ ಮಂಡ್ಯ ರಮೇಶ್ ತಿಳಿಸಿದರು. ಮೇಲುಕೋಟೆಯಲ್ಲಿ ಪುತಿನ ಟ್ರಸ್ಟ್ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಕವಿ ಪುತಿನರ 120ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾವು ಅಂತರಂಗವನ್ನು ಶೋಧಿಸಿ ನಿಜವಾದ ಪ್ರೀತಿಯ ಸಾನ್ನಿಧ್ಯವನ್ನು ಪಡೆಯಬೇಕು. ಇದರಿಂದ ಸಮಾಜದಲ್ಲಿ ಸಾಮರಸ್ಯ ಕಾಣಬಹುದು ಎಂಬುದು ಪುತಿನ ಕೃತಿಗಳ ಆಶಯವಾಗಿದ್ದು, ಅವರು ಸಾಹಿತ್ಯ ರಚನೆಯಲ್ಲಿ ಅಂತರಂಗದ ತುಡಿತವನ್ನು ಕಂಡುಕೊಂಡಿದ್ದರು. ಮೇಲುಕೋಟೆಯ ಸೌಂದರ್ಯ ಪುತಿನ ಕಾವ್ಯವಾಗಿ ಹೊರಹೊಮ್ಮಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದೆ ಎಂದರು.

ಪು.ತಿ.ಟ್ರಸ್ಟ್ ಅಧ್ಯಕ್ಷ ಪ್ರೊ.ಕೃಷ್ಣೇಗೌಡ, ಟ್ರಸ್ಟ್ ಸದಸ್ಯರಾದ ಕುಮಾರಕೊಪ್ಪ, ಕೆ.ಜಿ ನಾರಾಯಣ, ಎಸ್‌ಇಟಿ ಆಡಳಿತಾಧಿಕಾರಿ ವೆಂಕಟರಾಮೇಗೌಡ ರಿಜಿಸ್ಟಾರ್ ನಿಂಗೇಗೌಡ ಸಾಹಿತಿ ಹಾರೋಹಳ್ಳಿ ಧನ್ಯಕುಮಾರ್ ಇದ್ದರು.

ವ್ಯಕ್ತಿಯೋರ್ವನಿಂದ ಮೈಸೂರಿನ ಇಬ್ಬರಿಗೆ ಸ್ಕ್ರೂ ಡ್ರೈವರ್‌ನಿಂದ ಇರಿತ

ಶ್ರೀರಂಗಪಟ್ಟಣ ಕೋರ್ಟ್ ಸಮೀಪವೇ ಘಟನೆ

ಶ್ರೀರಂಗಪಟ್ಟಣ, ಮಾ.18- ಕ್ಯಾಂಟಿನ್‌ನಲ್ಲಿ ಟೀ ಕುಡಿಯುತ್ತಿದ್ದ ಮೈಸೂರಿನ ಇಬ್ಬರ ಮೇಲೆ ವ್ಯಕ್ತಿಯೋರ್ವ ಸ್ಕ್ರೂ ಡ್ರೈವರ್‌ನಿಂದ ಇರಿದು ಗಾಯಗೊಳಿಸಿರುವ ಘಟನೆ ಕೋರ್ಟ್ ಪಕ್ಕದಲ್ಲಿರುವ ಕ್ಯಾಂಟಿನ್‌ನಲ್ಲಿ ಸಂಭವಿಸಿದೆ. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಠಾಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣರಾಜಪೇಟೆ ತಾಲೂಕಿನ ಸಾಸಲು ಗ್ರಾಮದ ನಂಜಪ್ಪ (40) ಹಲ್ಲೆ ನಡೆಸಿದ ಆರೋಪಿ. ಮೈಸೂರಿನ ಕುಮಾರಸ್ವಾಮಿ ಮತ್ತು ಮೈಸೂರು ಜಿಲ್ಲೆ ನಂಜನಗೂಡಿನ ಬಿ.ಆರ್.ಉಮೇಶ್ ಹಲ್ಲೆಗೊಳಗಾದವರು. ಗಾಯಾಳುಗಳನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಯತೀಶ್ ಕುಟುಂಬ ಸಮೇತ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರಾಗಿದ್ದು, ಕೋರ್ಟ್ ಕೆಲಸ ಮುಗಿಸಿ ಅವರ ಮಾವನವರಾದ ಮೈಸೂರಿನ ಕುಮಾರಸ್ವಾಮಿ ಮತ್ತು ಸ್ನೇಹಿತರಾದ ಬಿ.ಆರ್. ಉಮೇಶ್ ಅವರು ಟೀ ಕುಡಿಯಲು ನ್ಯಾಯಾಲಯದ ಪಕ್ಕದಲ್ಲಿರುವ ಕ್ಯಾಂಟಿನ್‌ಗೆ ತೆರಳಿದ್ದರು. ಟೀ ಕುಡಿಯುತ್ತಿದ್ದ ವೇಳೆ ನಂಜಪ್ಪ ಎಂಬಾತ ಹಳೇ ದ್ವೇಷದ ಹಿನ್ನೆಲೆಯಲ್ಲಿ ಸ್ಕ್ರೂಡ್ರೈವರ್‌ನಿಂದ ಚುಚ್ಚಿ ಚುಚ್ಚಿ ಗಾಯಗೊಳಿದ್ದಾರೆ. ಈ ಬಗ್ಗೆ ಮೈಸೂರಿನ ಎನ್.ಆರ್.ಮೊಹಲ್ಲಾದ ನಿವಾಸಿ ಎನ್.ಯತೀಶ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಘಟನಾ ಸ್ಥಳಕ್ಕೆ ಶ್ರೀರಂಗಪಟ್ಟಣ ಪೊಲೀಸರು ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ದೇಹದ ಹಲವು ಭಾಗಗಳಿಗೆ ಚುಚ್ಚಿ ರಕ್ತ ಬರುವಂತೆ ಮನಸ್ಸೋ ಇಚ್ಚೆ ಚುಚ್ಚಿದ್ದಾರೆ. ಜೊತೆಗೆ ನಂಜಪ್ಪನವರ ಮಾವ ರಾಜೇಂದ್ರ, ಅತ್ತೆ ಮಂಜುಳಾ, ಪತ್ನಿ ಪಾರ್ವತಿ ಅವರುಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದಾರೆ. ಇವರುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದಾರೆ. ಆರೋಪಿಯನ್ನು ಬಂಧಿಸಿರುವ ಪೊಲೀಸರು, ಮಂಗಳವಾರ ಬೆಳಿಗ್ಗೆ ಘಟನಾ ಸ್ಥಳಕ್ಕೆ ತೆರಳಿ ಸ್ಥಳ ಮಹಜರು ನಡೆಸಿದರು.

ಒಂದನೇ ಪುಟದಿಂದ

ಹೈಟೆನ್ಷನ್ ವೈರ್ ಹಿಡಿದು ಯುವಕ ಆತ್ಮಹತ್ಯೆ

ಕೈ ಮೇಲೆತ್ತಿ ಬಾಯ್ ಎಂದು ಹೇಳಿದ. ಗ್ರಾಮಸ್ಥರು ಆತನ ಮನವೊಲಿಸಲು ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ. ಕಡೆಗೆ ಕಂಬದ ತುದಿಯೇರಿ ತಂತಿಯನ್ನು ಹಿಡಿದುಕೊಂಡ. ಕ್ಷಣಾರ್ಧದಲ್ಲಿ ವಿದ್ಯುತ್ ಪ್ರವಹಿಸಿ, ಸಾವನ್ನಪ್ಪಿದ. ಕಣ್ಮುಂದೆಯೇ ಸಾವನ್ನಪ್ಪಿದ ಮಗನ ಶವ ಕಂಬದಲ್ಲಿ ನೇತಾಡುವುದನ್ನು ಕಂಡ ತಾಯಿಗೆ ಬರಸಿಡಿಲು ಬಡಿದಂತಾಗಿದೆ. ಕರುಳ ಕುಡಿಯನ್ನು ಕಳೆದುಕೊಂಡ ಆಕೆಯ ರೋಧನೆ ಮುಗಿಲು ಮುಟ್ಟಿದೆ. ಗ್ರಾಮಸ್ಥರೂ ಕಂಬನಿ ಮಿಡಿದಿದ್ದಾರೆ. ವಿಷಯ ತಿಳಿದ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಧಾವಿಸಿ, ಕಂಬದಲ್ಲಿ ನೇತಾಡುತ್ತಿದ್ದ ಶವವನ್ನು ಕೆಳಗಿಳಿಸಿ, ತಾಲೂಕು ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿದ್ದಾರೆ. ವೈದ್ಯಕೀಯ ಪರೀಕ್ಷೆ ನಂತರ ಶವವನ್ನು ವಾರಸುದಾರರಿಗೆ ಹಸ್ತಾಂತರಿಸುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬಿಜೆಪಿಯ ಧೂಳೀಪಟ ಮಾಡ್ತೇವೆ!

ಆದರೆ, ಇದೇ ಬಿಜೆಪಿ ಅದಾನಿ, ಅಂಬಾನಿಯ ಸಾಲ ಮನ್ನಾ ಮಾಡಿದರು. ಇದೀಗ ನಮ್ಮ ಸರ್ಕಾರದ ಯೋಜನೆಗಳಿಗೆ ಮತದಾರರು ಸ್ಪಂದಿಸುತ್ತಿದ್ದಂತೆ ಪ್ರತಿಪಕ್ಷಗಳು ಇಲ್ಲದ ಟೀಕೆ ಮಾಡಿ, ಸರ್ಕಾರದ ಅಭಿವೃದ್ಧಿಯನ್ನು ಮರೆಮಾಚುತ್ತಿದ್ದಾರೆ ಎಂದು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳಿಗೆ ಸರಿ ದಾರಿ ತೋರಲು ಟೀಕೆಗಳು ಇರಬೇಕು. ಆದರೆ, ಸತ್ಯವನ್ನು ಮರೆಮಾಚಿ ಟೀಕೆ ಮಾಡಬಾರದು, ಇದು ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಮಾರಕ ಎಂದರು. ವಾಸ್ತವಾಂಶಗಳ ಮೇಲೆ ಬೆಳಕು ಚೆಲ್ಲಬೇಕು, ದಾಖಲಾತಿಗಳನ್ನು ಸದನದ ಮುಂದಿಡಬೇಕು, ಇದನ್ನು ನಾನು ಎಂದಿಗೂ ಸ್ವಾಗತಿಸುತ್ತೇನೆ. ರಾಜ್ಯದ ಜನತೆ ನನ್ನ ಸರ್ಕಾರವನ್ನು ಒಪ್ಪಿಕೊಂಡಿ ದ್ದಾರೆ, ಅವರ ಆಶೋತ್ತರಗಳನ್ನು ಈಡೇರಿಸುವಲ್ಲಿ ನಾವು ಹೆಜ್ಜೆ ಇಟ್ಟಿದ್ದೇವೆ ಎಂದರು.

ಸಂಗ್ರಹಾಲಯವಾಗಿಸುವ ಪ್ರಕ್ರಿಯೆ ಆರಂಭ

ಈವೆಂಟ್ ಗಾರ್ಡನ್, ಫುಡ್ ಕೋರ್ಟ್ ವ್ಯವಸ್ಥೆ ಕಲ್ಪಿಸುವ ಉದ್ದೇಶವಿದೆ ಎಂದು ಅವರು ವಿವರಿಸಿದರು. ಕೃಷ್ಣರಾಜ ಬುಲೇ ವಾರ್ಡ್ ರಸ್ತೆಯನ್ನು ಪಾರಂ ಪರಿಕ ರಸ್ತೆಯಾಗಿ ಹಾಗೂ ಡಿ. ದೇವರಾಜ ಅರಸು- ಜೆಎಲ್‌ಬಿ ರೋಡ್ ಜಂಕ್ಷನ್‌ನಿಂದ ಹಳೇ ಡಿಸಿ ಕಚೇರಿ ಕಟ್ಟಡದವರೆಗಿನ ರಸ್ತೆಯನ್ನು ವಿಸ್ಟಾ ಮಾರ್ಗವನ್ನಾಗಿ ರೂಪಿಸಲಾಗುವುದು ಎಂದು ಡಾ. ರಾಜೇಂದ್ರ ತಿಳಿಸಿದ್ದಾರೆ.

ಹೆರಿಟೇಜ್ ಮ್ಯೂಸಿಯಂ ಸುತ್ತ ವಿಸ್ಟಾ ಸ್ಟ್ರೀಟ್, ಪ್ರವೇಶ ಗೇಟ್‌ವೇ, ಕ್ರಾಸಿಂಗ್ ಪ್ಲಾಜಾ, ಅಟಾರ ಕಚೇರಿ ಪ್ಲಾಜಾ, ಲೇಸರ್ ಲೈಟ್ ಶೋ ಗಾರ್ಡನ್, ವಾರ್ ಮೆಮೋರಿಯಲ್ ಗಾರ್ಡನ್ ಸೇರಿದಂತೆ ವಿವಿಧ ಪ್ರವಾಸಿ ಚಟುವಟಿಕೆಗಳು ಹಳೇ ಜಿಲ್ಲಾಧಿಕಾರಿ ಕಚೇರಿ ಕಟ್ಟಡಕ್ಕೆ ಮೆರಗು ನೀಡಲಿವೆ.

ಹೆರಿಟೇಜ್ ಟಾಂಗಾ ರೈಡ್: ಯೋಜನೆಯಡಿ 2.3 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಹೆರಿಟೇಜ್ ಟಾಂಗಾ ರೈಡ್ ಪಾಯಿಂಟ್ ಅಭಿವೃದ್ಧಿಪಡಿಸಲು ತಯಾರಿ ನಡೆಯುತ್ತಿದೆ. ವಸ್ತುಪ್ರದರ್ಶನ ಪ್ರಾಧಿಕಾರದ ಬಳಿ, ಅರಮನೆ ವರಹಾ ಗೇಟ್, ಕುಕ್ಕರಹಳ್ಳಿಕೆರೆ ಬಳಿ ಹಾಗೂ ಅಗ್ರಹಾರ ಸರ್ಕಲ್ ಅನ್ನು ಟಾಂಗಾ ರೈಡ್ ಪಾಯಿಂಟ್ ಮಾಡಲು ಗುರ್ತಿಸಲಾಗಿದೆ.

ಪ್ರೀಪೇಯ್ಡ್ ಆಟೋ ಮಾದರಿ ಹೆರಿಟೇಜ್ ಚೌಕಿ ನಿರ್ಮಿಸಿ ಅಂತರಕ್ಕನುಗುಣವಾಗಿ ಟಾಂಗಾ ರೈಡ್‌ಗೆ ದರ ನಿಗದಿಪಡಿಸಲಾಗುವುದು. ಟಾಂಗಾ ಚಾಲನೆ ಮಾಡುವವರು ಪಾರಂಪರಿಕ ಸಮವಸ್ತ್ರ, ಸಾಂಪ್ರದಾಯಿಕ ಮೈಸೂರು ಪೇಟ ಧರಿಸುವ ವ್ಯವಸ್ಥೆ ಕಲ್ಪಿಸಲಾಗುವುದು.

ವಿಸ್ಟಾ ಸ್ಟ್ರೀಟ್‌ಗೆ ಡಿಪಿಆರ್

ಜೆಎಲ್‌ಬಿ ರಸ್ತೆ ಜಂಕ್ಷನ್‌ನಿಂದ ಹಳೇ ಜಿಲ್ಲಾಧಿಕಾರಿ ಕಚೇರಿವರೆಗೆ ವಾಹನ ಸಂಚಾರ ಬಂದ್ ಮಾಡಿ ಪ್ರವಾಸಿಗರು ನಡೆದೇ ಓಡಾಡಿ ಅಲ್ಲಿನ ಪಾರಂಪರಿಕ ವಿಶೇಷತೆಗಳನ್ನು ವೀಕ್ಷಿಸುವಂತೆ ಅಭಿವೃದ್ಧಿಪಡಿಸಲಾಗುವುದು. ಫುಡ್‌ಕೋರ್ಟ್‌ನಲ್ಲಿ ಪ್ರವಾಸಿಗರು ಮೈಸೂರಿನ ಸಾಂಪ್ರದಾಯಿಕ ತಿನಿಸು, ಫಿಲ್ಟರ್ ಕಾಫಿಯನ್ನು ಓಪನ್ ಸ್ಪೇಸ್‌ನಲ್ಲಿ ಸವಿಯಬಹುದಾಗಿದೆ. ವಿಸ್ಟಾ ಸ್ಟ್ರೀಟ್‌ನಲ್ಲಿ ನಡೆಯುತ್ತಾ ಹೋದರೆ ಸಾಂಸ್ಕೃತಿಕ ನಗರಿಯ ಹಿನ್ನೆಲೆ ಇತಿಹಾಸ ಹಾಗೂ ಗತವೈಭವದ ಮಾಹಿತಿಯೊಂದಿಗೆ ಅನನ್ಯ ಅನುಭವಗಳನ್ನು ತಮ್ಮದಾಗಿಸುವ ಅವಕಾಶ ಕಲ್ಪಿಸಲಾಗುವುದು. ಕರ್ನಾಟಕ ವಸ್ತುಪ್ರದರ್ಶನ ಮೈದಾನದಲ್ಲಿ ಆರ್ಟಿಫ್ಯಾಕ್ಟ್ ಗಾರ್ಡನ್ ನಿರ್ಮಿಸಿ ಇಲ್ಲಿನ ಸಾಂಸ್ಕೃತಿಕ ಮತ್ತು ಸಮುದಾಯದ ಹಬ್ ಆಗಿ ಪರಿವರ್ತಿಸಲು ಡಿಪಿಆರ್ ಸಿದ್ಧಪಡಿಸಲಾಗಿದೆ. ಆಧುನಿಕ ಸೌಲಭ್ಯಗಳೊಂದಿಗೆ ಮೈಸೂರಿನ ಪರಂಪರೆ ಮತ್ತು ಹೊಸ ಅನ್ವೇಷಣೆಗಳ ಆಕರ್ಷಣೆಯೊಂದಿಗೆ ಕಂಗೊಳಿಸಲಿರುವ ಪ್ರವಾಸಿಗರಿಗೆ ಐತಿಹಾಸಿಕ ಕಥೆ ಹೇಳುವ, ಮನರಂಜನೆ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಲಾಗುವುದು

ರಾಜ್ಯ ಗೂಂಡಾ ರಾಜ್ಯದ ಅಪರಾವತಾರ

- ವಿಧಾನಸಭೆಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಗಂಭೀರ ಆರೋಪ
- ಪಾಕಿಸ್ತಾನ ಪರ ಘೋಷಣೆ; ಗೋಡೆಬರಹ ಬರೆದವರಿಗೆ ಶಿಕ್ಷೆ ಇಲ್ಲ
- ಲವ್ ಜಿಹಾದ್‌ಗೆ ಬಲಿಯಾದ ಹೆಣ್ಣು ಮಕ್ಕಳಿಗೆ ನ್ಯಾಯವೇ ಸಿಕ್ಕಿಲ್ಲ

ಬೆಂಗಳೂರು, ಮಾ.18(ಕೆಎಂಶಿ)- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಗೂಂಡಾ ರಾಜ್ಯದ ಅಪರಾವತಾರವಾಗಿದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ್ ವಿಧಾನಸಭೆಯಲ್ಲಿ ಮಂಗಳವಾರ ಆರೋಪಿಸಿದರು.

ನಿಯಮ 69ರಡಿ ಕಾನೂನು ಸುವ್ಯವಸ್ಥೆ ಕುರಿತು ವಿಷಯ ಪ್ರಸ್ತಾಪಿಸಿದ ಅವರು, ರಾಜ್ಯದಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲದಂತಾಗಿದೆ. ಲಂಗುಲಗಾಮಿಲ್ಲ, ಬಿಡದಿ ಬಳಿ ಗೋಡೆ ಮೇಲೆ ಪಾಕಿಸ್ತಾನ ಜಿಂದಾಬಾದ್ ಎಂಬುದಾಗಿ ಕಿಡಿಗೇಡಿಗಳು ಬರೆದಿದ್ದಾರೆ. ಅಲ್ಲದೆ ಶೌಚಾಲಯದಲ್ಲಿ ಕನ್ನಡಿಗರನ್ನು ಅವಾಚ್ಯ ಶಬ್ದ ಬಳಸಿ ನಿಂದಿಸಲಾಗಿದೆ, ಇದು ಎಲ್ಲರೂ ತಲೆ ತಗ್ಗಿಸುವಂತಹ ವಿಚಾರ ಎಂದರು.

ಸರ್ಕಾರ ಹಾಗೂ ಕಾನೂನು-ಸುವ್ಯವಸ್ಥೆಗೆ ಅಜಗಜಾಂತರ ವ್ಯತ್ಯಾಸವಿದೆ, ತಾಳ ಮೇಳ ಇಲ್ಲದಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಗೃಹ ಇಲಾಖೆ ನಿರ್ವಹಣೆ ಮಾಡುವಂತಾಗಿದೆ. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ್ದರು. ಆದರೂ ಸರ್ಕಾರ ಏನೂ ಕ್ರಮ ಕೈಗೊಂಡಿಲ್ಲ. ಸಿಸಿಟಿವಿ ಪರಿಶೀಲಿಸಿ ಕಿಡಿಗೇಡಿಗಳನ್ನು ಸೆರೆ ಹಿಡಿಯಬಹುದಿತ್ತು. ಆದರೂ ಸರ್ಕಾರ ಮೌನವಾಗಿದೆ. ಕನ್ನಡಿಗರಿಗೆ ಅಪಮಾನ ಮಾಡಿದ ಪಾಕಿಸ್ತಾನ ಪರ ಬರಹ ಬರೆದಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು,

ಹೋರಿ ಬೆದರಿಸುವ ಹಬ್ಬದ ಸ್ನೇಹ ಲವ್ ಜಿಹಾದ್‌ನಲ್ಲಿ ಅಂತ್ಯವಾಗಿದೆ. ಸ್ವಾತಿ ಎಂಬಾಕೆಯನ್ನು ಪುಸಲಾಯಿಸಿ ಕಾರಿನಲ್ಲಿ ಕರೆದೊಯ್ದು ಪಾಳು ಬಿದ್ದ ಶಾಲೆಯಲ್ಲಿ ಆಕೆಯ ಕುತ್ತಿಗೆ ಬಿಗಿದು ಕೊಲೆ ಮಾಡಿ ಮೃತದೇಹವನ್ನು ತುಂಗಾ ನದಿಗೆ ಬಿಸಾಕಿದ್ದಾರೆ.



ವಿರೋಧಪಕ್ಷದ ನಾಯಕ ಆರ್.ಅಶೋಕ್ ವಿಧಾನಸಭೆಯಲ್ಲಿ ಮಂಗಳವಾರ ಮಾತನಾಡಿದರು.

ಮೂರು ದಿನದ ನಂತರ ದೇಹ ಪತ್ತೆಯಾಗಿದೆ, ಮರಣೋತ್ತರ ಪರೀಕ್ಷೆಯಲ್ಲಿ ಕೊಲೆ ಎಂಬುದು ತಿಳಿದುಬಂದಿದೆ ಪೊಲೀಸರು ಮೃತಳ ತಾಯಿಗೆ ವಿಷಯ ತಿಳಿಸದೆ ದೇಹವನ್ನು ಸುಟ್ಟುಹಾಕಿದ್ದಾರೆ. ಇದರಲ್ಲಿ ಪೊಲೀಸರ ವೈಫಲ್ಯ ಎದ್ದು ಕಾಣುತ್ತಿದೆ.

ನೇಹಾ ಎಂಬಾಕೆ ಹತ್ಯೆಯಾದಾಗ ಪೊಲೀಸರು ಎಚ್ಚರಿಕೆ ವಹಿಸಿ ಗಂಭೀರ ಕ್ರಮ ಕೈಗೊಂಡಿದ್ದರೆ ಇಂತಹ ಘಟನೆ ಮರುಕಳಿಸುತ್ತಿರಲಿಲ್ಲ. ಹಂಪಿ ಬಳಿ ಹೋಂ ಸ್ಟೇ ಮಾಲೀಕರು ಹಾಗೂ ವಿದೇಶಿ ಮಹಿಳೆ ಮೇಲೆ ಅತ್ಯಾಚಾರ ಎಸಗಲಾಗಿದೆ. ಒರಿಸ್ಸಾ ಮೂಲದ ಬಿಪಾಶ್ ಎಂಬುವರನ್ನು ಕೊಂದು ನದಿಗೆ ಎಸೆಯಲಾಗಿದೆ ಎಂದರು.

ಸುನೀಲ್‌ಕುಮಾರ್ ಮಧ್ಯಪ್ರವೇಶಿಸಿ, ಸರ್ಕಾರದ ಯೋಜನೆಗಳನ್ನು ವಿದೇಶಿಯರು ಮೆಚ್ಚಿದ್ದಾರೆಂದು ಮುಖ್ಯಮಂತ್ರಿ ಸದನಕ್ಕೆ ತಿಳಿಸಿದರು. ಆದರೆ, ವಿದೇಶಿಯರ ಮೇಲೆ ಹಲ್ಲೆ, ದೌರ್ಜನ್ಯ, ಹತ್ಯೆ, ಅತ್ಯಾಚಾರ ಎಸಗಲಾಗಿದೆ, ಕಾನೂನು-ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಇದು ಕನ್ನಡಿಯಾಗಿದೆ ಎಂದರು. ಚರ್ಚೆ ಮುಂದುವರೆಸಿದ ಅಶೋಕ್, ವಿಶ್ವ ಖ್ಯಾತಿಯ ಹಂಪಿಯಲ್ಲೇ ಹೀಗಾ ದರೆ ಹೇಗೆ. ಶೇ.60ರಷ್ಟು ಇಸ್ರೇಲ್ ಪ್ರವಾ ಸಿಗರು ಬರುತ್ತಾರೆ. ಇತ್ತೀಚೆಗೆ ಇಸ್ರೇಲ್ ಮಹಿಳೆ ಮೇಲೆ ಅತ್ಯಾಚಾರ ನಂತರ ಪ್ರವಾಸಿ ಗರು ಹೋಂ ಸ್ಟೇಗಳನ್ನು ಖಾಲಿ ಮಾಡುತ್ತಿದ್ದಾರೆ. ಹಂಪಿಗೆ ಕೆಟ್ಟ ಹೆಸರು ಬಂದಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರೂ ಮುಖ್ಯಮಂತ್ರಿ ಸದನದ ಹಾದಿ ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದರು.

ವಿಶ್ವಸಂಸ್ಥೆ ಅಧ್ಯಕ್ಷರು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಹೊಗಳಲು ಬೆಂಗಳೂರಿಗೆ ಬಂದಿರಲಿಲ್ಲ. ದೆಹಲಿಗೆ ಭೇಟಿ ನೀಡಿದ್ದ ಅವರು ಸಿಲಿಕಾನ್ ವ್ಯಾಲಿ ಬೆಂಗಳೂರಿನ ಚೈತನ್ಯ ಅನುಭವಿಸಲು, ತಂತ್ರಜ್ಞಾನ ನೋಡಲು ಬಂದಿದ್ದರು. ಮುಖ್ಯಮಂತ್ರಿಯವರು ಗ್ಯಾರಂಟಿ ಹೊಗಳಲು ಬಂದಿದ್ದರು ಎಂದು ಹೇಳಿರುವುದು ಸರಿಯಲ್ಲ. ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಸರ್ಕಾರ ಮೌನವಾಗಿದೆ. ಚಿನ್ನ ಕಳ್ಳಸಾಗಾಣಿಕೆ ವಿಚಾರದಲ್ಲಿ ಮಂತ್ರಿಗಳ ಹೆಸರು ಕೇಳಿಬಂದರೂ ಚಕಾರ ಎತ್ತುತ್ತಿಲ್ಲ. ಈ ಬಗ್ಗೆ ಹೆಚ್ಚಿನ ಚರ್ಚೆಗೆ ಅವಕಾಶ ನೀಡಬೇಕು ಎಂದರು.

ಸಾವಿನ ಸಂಖ್ಯೆ 2ಕ್ಕೇರಿಕೆ

ಸೇವಿಸಿದ ಬಳಿಕ ಫುಡ್ ಪಾಯ್ಸನ್ ಆಗಿ ಮಲ್ಟಿ ಆರ್ಗನ್ಸ್ ಫೇಲ್ಯೂರ್ ಆಗಿದ್ದರಿಂದ ನ್ಯಾಮೋ ಬಂಟಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಘಟನೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿದ್ದು, ಉಳಿದ 29 ಮಂದಿ ಚೇತರಿಸಿಕೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಅವರು ತಿಳಿಸಿದರು. ಈ ನಡುವೆ ಆಹಾರ ತಯಾರಿಸಿ ಸರಬರಾಜು ಮಾಡಿದ್ದ ಮಳವಳ್ಳಿಯ ಹೋಟೆಲ್ ಅನ್ನು ಮಂಡ್ಯ ಜಿಲ್ಲಾಡಳಿತವು ಬಂದ್ ಮಾಡಿದೆ. ಪ್ರಕರಣ ದಾಖಲಿಸಿಕೊಂಡಿರುವ ಮಳವಳ್ಳಿ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಇಬ್ಬರು ಅಧಿಕಾರಿಗಳ ನಿಯೋಜನೆ: ಮಳವಳ್ಳಿ ಹೊರವಲಯದ ವಿದ್ಯಾಸಂಸ್ಥೆ ಹಾಸ್ಟೆಲ್‌ನಲ್ಲಿ ಕಳೆದ ಶುಕ್ರವಾರ ಹೋಳಿ ಹಬ್ಬದ ಊಟ ಸೇವಿಸಿ ವಿದ್ಯಾರ್ಥಿಗಳಿಬ್ಬರು ಸಾವನ್ನಪ್ಪಿದ ಪ್ರಕರಣ ಸಂಬಂಧ ಸಮಗ್ರ ಮಾಹಿತಿ ಸಂಗ್ರಹಿಸಲು ಮೇಘಾಲಯ ಸರ್ಕಾರವು ಇಬ್ಬರು ಅಧಿಕಾರಿಗಳನ್ನು ನಿಯೋಜಿಸಿದೆ. ಘಟನೆಯಲ್ಲಿ ಮೇಘಾಲಯ ಮೂಲದ ಕಿರ್ಶನ್ ಲ್ಯಾಂಗ್ ಮತ್ತು ನ್ಯಾಮೋ ಬಂಟಿ ಎಂಬ 13 ವರ್ಷದ ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಮೇಘಾಲಯ ಸರ್ಕಾರವು ಇಬ್ಬರು ಅಧಿಕಾರಿಗಳನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿದೆ.

ನಿಯೋಜಿತ ಅಧಿಕಾರಿಗಳು ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕಿನ ಟಿ. ಕಾಗೇಪುರದ ಗೋಕುಲ್ ವಿದ್ಯಾಸಂಸ್ಥೆ ಹಾಸ್ಟೆಲ್‌ಗೆ ನಾಳೆ (ಮಾ. 19) ಭೇಟಿ ನೀಡಲಿದ್ದು, ಮೇಘಾಲಯ ವಿದ್ಯಾರ್ಥಿಗಳ ಸಾವಿನ ಸಂಬಂಧ ಮಾಹಿತಿ ಕಲೆ ಹಾಕಿ ಅಲ್ಲಿನ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಅವರ ಸಂಬಂಧಿಕರಿಂದ ಒತ್ತುವರಿಯಾದ ಭೂಮಿ ತೆರವು

- ರಾಮನಗರ ಜಿಲ್ಲಾಡಳಿತದಿಂದ ಕೇತುಗಾನಹಳ್ಳಿಯಲ್ಲಿ ಒತ್ತುವರಿಯಾದ ವಿವಿಧ ಸರ್ವೆ ನಂ. 14 ರಿಂದ 18 ಎಕರೆ ಭೂಮಿ ವಶಕ್ಕೆ
- ಕಾನೂನು ವ್ಯಾಪ್ತಿಯಲ್ಲೇ ಹೋರಾಟ; ಕೇಂದ್ರ ಸಚಿವ ಕುಮಾರಸ್ವಾಮಿ ಪ್ರತಿಕ್ರಿಯೆ


ಬೆಂಗಳೂರು, ಮಾ.18(ಕೆಎಂಶಿ)- ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಅವರ ಸಂಬಂಧಿಕರು ಸೇರಿದಂತೆ ಇತರರು ರಾಮನಗರ ಜಿಲ್ಲೆ ಕೇತಗಾನಹಳ್ಳಿಯಲ್ಲಿ ಒತ್ತುವರಿ ಮಾಡಿದ್ದರೆನ್ನಲಾದ ಸರ್ಕಾರಿ ಭೂಮಿಯನ್ನು ಜಿಲ್ಲಾಡಳಿತ ತೆರವುಗೊಳಿಸಿದೆ.

ಜಿಲ್ಲಾಧಿಕಾರಿ ಸೇರಿದಂತೆ ಇಡೀ ಜಿಲ್ಲಾಡಳಿತವೇ ಇಂದು ಕುಮಾರಸ್ವಾಮಿ ಮತ್ತು ಇತರರ ಭೂಮಿಯನ್ನು ಮುಂಜಾನೆಯಿಂದಲೇ ಸರ್ವೆ ನಡೆಸಿ, ಸುಮಾರು 14ರಿಂದ 18 ಎಕರೆ ಭೂಮಿ ವಶಕ್ಕೆ ಪಡೆದು, ಬೇಲಿ ಹಾಕಿದೆ.

ಬೇಲಿ ಹಾಕುವುದು ಮುಗಿಯುತ್ತಿದ್ದಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ನನ್ನ ಜೀವನದಲ್ಲಿ ಯಾವುದೇ ಅಕ್ರಮ ಎಸಗಿಲ್ಲ, 40 ವರ್ಷಗಳ ಹಿಂದೆ ಖರೀದಿಸಿದ ಭೂಮಿ ಇದಾಗಿದೆ. ಸರ್ಕಾರದ ಷಡ್ಯಂತ್ರದ ವಿರುದ್ಧ ಕಾನೂನು ವ್ಯಾಪ್ತಿಯಲ್ಲೇ ಹೋರಾಟ ನಡೆಸುತ್ತೇನೆ ಎಂದಿದ್ದಾರೆ. ಕುಮಾರಸ್ವಾಮಿ ಹೇಳಿಕೆಯನ್ನು ಸರ್ಕಾರದ ಪರವಾಗಿ ಸಚಿವ ಎನ್.ಚಲುವರಾಯಸ್ವಾಮಿ ಅಲ್ಲಗಳೆದಿದ್ದು, ಸರ್ಕಾರಿ ಭೂಮಿ ಒತ್ತುವರಿ ಆಗಿರುವುದು ಖಚಿತಗೊಂಡಿದೆ. ಈಗ ಅವರೇ ತೀರ್ಮಾನ ಕೈಗೊಳ್ಳಬೇಕು.

ಎಲ್ಲದಕ್ಕೂ ರಾಜೀನಾಮೆ ಕೇಳುವ ಕುಮಾರಸ್ವಾಮಿ ಒತ್ತುವರಿ ಪ್ರಕರಣದ ನಂತರವೂ ಯಾವ ತೀರ್ಮಾನ ಕೈಗೊಳ್ಳುತ್ತಾರೋ ಅವರಿಗೇ ಬಿಡುತ್ತೇವೆ. ನಾವು ರಾಜೀನಾಮೆ ಕೇಳುವುದಿಲ್ಲ ಎಂದರು.

ಮುಂದುವರೆದು ಮಾತನಾಡಿದ ಕುಮಾರಸ್ವಾಮಿ,



ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಭೂಮಿ ಒತ್ತುವರಿ ಸೇರಿದಂತೆ ನಾನು ಯಾವ ಅಕ್ರಮವನ್ನೂ ಮಾಡಿಲ್ಲ, ಮಾಡುವುದೂ ಇಲ್ಲ.

ನಲವತ್ತು ವರ್ಷಗಳ ಹಿಂದೆ ಖರೀದಿಸಿರುವ ಜಮೀನು ಅದು, ಒಬ್ಬ ಸಾಮಾನ್ಯ ಪ್ರಜೆಗೆ ಯಾವುದೇ ತೆರವು ಮಾಡಬೇಕೆಂದಾದರೂ ಕಾನೂನು ಪ್ರಕಾರ 15 ದಿನಗಳ ಮೊದಲೇ ನೋಟಿಸ್ ನೀಡಬೇಕು. ಆದರೆ, ನನಗೆ ಈವರೆಗೆ ಯಾವುದೇ ಮಾಹಿತಿ ಅಥವಾ ನೋಟಿಸ್ ನೀಡಿಲ್ಲ ಎಂದು ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ನಡೆಸುತ್ತಿರುವ ದಬ್ಬಾಳಿಕೆ ಏನು ಎಂಬುದು ಎಲ್ಲರಿಗೂ ಗೊತ್ತಿದೆ, ಇವರು ಬೆಂಗಳೂರು ನಗರವನ್ನೇ ಲೂಟಿ ಮಾಡುತ್ತಿದ್ದಾರೆ. ದೇಶದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಈ ರೀತಿಯ ಪ್ರಕರಣಕ್ಕೆ ಎಸ್‌ಐಟಿ ರಚನೆ ಮಾಡಿದ್ದಾರೆ, ಇಂತಹ ನಡವಳಿಕೆಗಳಿಗೆ ಒಂದಲ್ಲಾ ಒಂದು ದಿನ ಬೇರೆ ರೀತಿ ಉತ್ತರ ಬರುತ್ತದೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಸರ್ಕಾರಕ್ಕೆ ನಾನೇ ಟಾರ್ಗೆಟ್ ಆಗಿದ್ದೇನೆ. ನನ್ನ ಬಿಟ್ಟರೆ ಅವರಿಗೆ ಯಾರೂ ಇಲ್ಲ. ಸದ್ಯ ನಡೆಯುತ್ತಿರುವ ಎಲ್ಲಾ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ನಾಲ್ಕು ದಶಕಗಳ ಹಿಂದೆ ಖರೀದಿ ಮಾಡಿದ ಈ ಭೂಮಿಗೆ ಮೂರು ಬಾರಿ ತನಿಖೆ ಯಾಗಿದೆ. 40 ವರ್ಷದಿಂದಲೂ ತನಿಖೆ ನಡೆಯುತ್ತಲೇ ಇದೆ, ನನ್ನ ಪರಿಸ್ಥಿತಿಯೇ ಹೀಗಾದ'ರೆ, ಜನ'ಸಾಮ'ಾನ್ಯ'ರ ಪ'ರಿಸ್ಥಿತಿ ಹೇಗಿರಬಹುದು ಎಂದು ಕಳವಳ ವ್ಯಕ್ತಪಡಿ ಸಿದರು. ಇದರ ಬಗ್ಗೆ ಯಾರೂ ಗಾಬರಿಯಾಗಬೇಕಿಲ್ಲ ಎಂದರು. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ರಾಮನಗರ ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್, ಹೈಕೋರ್ಟ್ ಆದೇಶದಂತೆ ತೆರವು ಕಾರ್ಯಾಚರಣೆ ಕೈಗೆತ್ತಿಕೊಳ್ಳಲಾಗಿದೆ. ಕೇತಗಾನಹಳ್ಳಿ ಸರ್ವೆ ನಂಬರ್ 7, 8, 9, 10, 16, 17 ಹಾಗೂ 79ರಲ್ಲಿ ಭೂ ಒತ್ತುವರಿ ಆಗಿದೆ ಎಂಬ ಆರೋಪ ಕೇಳಿಬಂದಿತ್ತು. ಇದರ ಹಿನ್ನೆಲೆಯಲ್ಲಿ ಸರ್ವೆ ನಡೆಸಿ, ಒತ್ತುವರಿ ತೆರವುಗೊಳಿಸಿ ಭೂಮಿ ವಶಕ್ಕೆ ಪಡೆದಿದ್ದೇವೆ. ಇದು ವಿವಿಧ ಮಾಲೀಕರ ಹೆಸರಿನಲ್ಲಿ ಇರುವ ಭೂಮಿಗಳು ಎಂದರು.

ಬ್ಯಾಂಕ್‌ನಿಂದ ಸಾಲ ವಸೂಲಾತಿ ನೋಟಿಸ್; ರೈತರ ಆಕ್ರೋಶ

ಮೈಸೂರು, ಮಾ.18(ಬಿಎಲ್‌ಯು)– ಸಾಲ ವಸೂಲಾತಿಗಾಗಿ ನ್ಯಾಯಾಲಯದಲ್ಲಿ ದಾವೆ ಹೂಡಲು ಕಾವೇರಿ ಗ್ರಾಮೀಣ ಬ್ಯಾಂಕ್ ರೈತರಿಗೆ ನೋಟಿಸ್ ನೀಡುತ್ತಿದ್ದು, ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ನೋಟಿಸ್ ನೀಡದಂತೆ ಸರ್ಕಾರ ಬ್ಯಾಂಕ್‌ಗೆ ನಿರ್ದೇಶನ ನೀಡಬೇಕೆಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಆಗ್ರಹಿಸಿದೆ.


ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದವರು ಸಭೆ ನಡೆಸಿ ಹಲವು ಬೇಡಿಕೆ ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ರೈತ ಸಂಘದ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಬೆಳೆ ನಷ್ಟ ಹಾಗೂ ಬೆಳೆಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದೆ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಾಲ ಪಾವತಿ ಮಾಡುವಂತೆ ಬ್ಯಾಂಕ್ ನೋಟಿಸ್ ನೀಡಿದರೆ ರೈತರಿಗೆ ಸಾಲ ಮರುಪಾವತಿ ಹೇಗೆ ಸಾಧ್ಯವಾಗುತ್ತದೆ ಎಂದು ಪ್ರಶ್ನಿಸಿದರು.

ಸಕ್ಕರೆ ಕಾರ್ಖಾನೆಗಳಿಂದ ಕಳೆದ ವರ್ಷ ರೈತರಿಗೆ 950 ಕೋಟಿ ರೂಪಾಯಿ ಕಬ್ಬಿನ ಬಾಕಿ ನೀಡಬೇಕಿದ್ದು, ಸರ್ಕಾರ ಕೂಡಲೇ ಅದನ್ನು ಕೊಡಿಸಬೇಕು. ಪ್ರಸಕ್ತ ಸಾಲಿನ ಕಬ್ಬಿನ ಕಟಾವು ಹಂಗಾಮು ಮುಗಿದಿದ್ದು, ಪ್ರತಿ ಟನ್‌ಗೆ 5000 ರೂಪಾಯಿ ನಿಗದಿ ಮಾಡಬೇಕು. ಕಬ್ಬಿನ ತೂಕದಲ್ಲಿ ಮೋಸ ಆಗದಂತೆ ಕಾರ್ಖಾನೆ ಮುಂದೆ ಯಂತ್ರ ಅಳವಡಿಸಬೇಕು ಎಂದು ಒತ್ತಾಯಿಸಿದರು.

ನದಿ ಮೂಲದಿಂದ ಕೆರೆ ಕಟ್ಟೆಗಳಿಗೆ ನೀರು ಹರಿಸಬೇಕು. ಹಾಲಿನ ದರದ ಹೆಚ್ಚಳದ ಹಣವನ್ನು ನೇರವಾಗಿ ರೈತರಿಗೆ ನೀಡಬೇಕು ಎಂದು ಮನವಿ ಮಾಡಿದರು. ರೈತ ಸಂಘದ ಖಜಾಂಚಿ ಕೆರೆಹುಂಡಿ ರಾಜಣ್ಣ, ಸಂಘಟನಾ ಕಾರ್ಯದರ್ಶಿ ಹತ್ತಹಳ್ಳಿ ಸ್ವಾಮಿರಾಜ್, ಚಾಮರಾಜನಗರ ಜಿಲ್ಲಾಧ್ಯಕ್ಷ ನಾಗರಾಜ್, ಮೈಸೂರು ನಗರಾಧ್ಯಕ್ಷ ದೇವೇಂದ್ರ ಕುಮಾರ್ ಮಲೆಯೂರು, ಮಹೇಂದ್ರ, ಪ್ರಕಾಶ್ ಗಾಂಧಿ, ಬನ್ನೂರು ಕೃಷ್ಣಪ್ಪ, ಪ್ರೊ.ಶಿವರಾಜಪ್ಪ, ಮಹದೇವಯ್ಯ, ಶಿವರುದ್ರಪ್ಪ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ಡಿಸಿ ಕಚೇರಿ, ಪೊಲೀಸ್ ಠಾಣೆ ಮುಂದೆ ಜೂಜಾಟ ಚಳವಳಿ ನಡೆಸುತ್ತೇವೆ

ಯುವಕರ ಬದುಕನ್ನು ಹಾಳು ಮಾಡುತ್ತಿರುವ ಆನ್‌ಲೈನ್ ಗೇಮ್‌ಗಳನ್ನು ತಕ್ಷಣ ನಿಷೇಧ ಮಾಡದಿದ್ದರೆ ಡಿಸಿ ಕಚೇರಿ ಮತ್ತು ಪೊಲೀಸ್ ಠಾಣೆ ಮುಂದೆ ಜೂಜಾಟ ಚಳವಳಿ ನಡೆಸುತ್ತೇವೆ ಎಂದು ಹಳ್ಳಿಕೆರೆಹುಂಡಿ ಭಾಗ್ಯರಾಜ್ ಎಚ್ಚರಿಕೆ ನೀಡಿದರು.

ಐಪಿಎಲ್ ಸೇರಿದಂತೆ ಹಲವು ರೀತಿಯ ಆನ್‌ಲೈನ್ ಬೆಟ್ಟಿಂಗ್ ದಂಧೆಗೆ ದಾಸರಾಗುತ್ತಿರುವ ಯುವಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಟ್ಟಿಂಗ್ ದಂಧೆಗೆ ಸಾಲ ಮಾಡಿಕೊಂಡು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆ ಆನ್‌ಲೈನ್ ಗೇಮ್‌ಗಳನ್ನು ಸರ್ಕಾರ ನಿಷೇಧ ಮಾಡಬೇಕು. ಇಲ್ಲದಿದ್ದರೆ ಡಿಸಿ ಕಚೇರಿ ಹಾಗೂ ಪೊಲೀಸ್ ಠಾಣೆಗಳ ಮುಂದೆ ಸಾಂಕೇತಿಕವಾಗಿ ಒಂದು ರೂಪಾಯಿಗೆ ಜೂಜಾಡಿ ಹೋರಾಟ ತೀವ್ರಗೊಳಿಸುತ್ತೇವೆ ಎಂದು ಭಾಗ್ಯರಾಜ್ ಎಚ್ಚರಿಸಿದರು.

ಪುನೀತ್ ರಾಜಕುಮಾರ್ ಹುಟ್ಟುಹಬ್ಬ ಗೀ–ರೈಸ್, ಚಿಕನ್ ಚಾಪ್ಸ್ ವಿತರಣೆ


ಪುನೀತ್ ರಾಜ್‌ಕುಮಾರ್ ಜನ್ಮದಿನವನ್ನು ಸ್ಫೂರ್ತಿದಿನವಾಗಿ ಆಚರಿಸಿ, ನೆರೆದವರಿಗೆ ಶಾಸಕ ಕೆ.ಹರೀಶ್‌ಗೌಡ, ಗೀ ರೈಸ್, ಚಿಕನ್ ಚಾಪ್ಸ್ ವಿತರಿಸಿದರು.

ಮೈಸೂರು,ಮಾ.18– ದೇವರಾಜ ಅರಸು ರಸ್ತೆಯಲ್ಲಿ ಪುನೀತ್ ರಾಜಕುಮಾರ್ 50ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ದೇವರಾಜ ಮೊಹಲ್ಲಾ ಯುವಕರ ಬಳಗದ ವತಿಯಿಂದ ಸಾರ್ವಜನಿಕರಿಗೆ ಗೀ ರೈಸ್ ಹಾಗೂ ಚಿಕನ್ ಚಾಪ್ಸ್‌ನ್ನು ಶಾಸಕ ಕೆ.ಹರೀಶ್‌ಗೌಡರು ಸಾರ್ವಜನಿಕರಿಗೆ ವಿತರಿಸಿದರು.

ಇದಕ್ಕೂ ಮುನ್ನ ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಪುನೀತ್ ರಾಜ್ಯದ ಬಹಳಷ್ಟು ಜನತೆಗೆ ಅವರು ಮಾಡಿದ್ದ ಸಾಮಾಜಿಕ ಸೇವೆ ಗೊತ್ತಿರಲಿಲ್ಲ. ಬಲಗೈಯಲ್ಲಿ ಮಾಡಿದ ದಾನ ಎಡಗೈಗೆ ತಿಳಿಯಬಾರದು ಎಂಬ ರೀತಿಯಲ್ಲಿ ಅಸಹಾಯಕರ ನೆರವಿಗೆ ನಿಂತಿದ್ದರು. ನಟನೆ ಹಾಗೂ ಸಾಮಾಜಿಕ ಸೇವೆ ಬಹಳ ಎತ್ತರಕ್ಕೆ ಬೆಳೆದು ನಿಂತಿದ್ದರು. ಪುನೀತ್ ಜನ್ಮದಿನವನ್ನು ಸ್ಫೂರ್ತಿದಿನವಾಗಿ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು.

ಈ ಸಂದರ್ಭದಲ್ಲಿ ಡಿವೈಎಸ್ಪಿ ಮಲ್ಲೇಶ್, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷರಾದ ವಿನಯ್‌ಕುಮಾರ್, ವೀರಭದ್ರಪ್ಪ, ನಿತಿನ್ ಗುರುರಾಜ್, ಪ್ರಮೋದ ರವಿಚಂದ್ರನ್, ಹರ್ಷ, ನವೀನ್, ನಂಜುಂಡಿ, ಮಂಜುನಾಥ್, ರಾಜು, ರಾಹುಲ್, ಕುಮಾರ್ ಶ್ರೀನಿವಾಸ್ ಮುಂತಾದರು ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನ ವಿತರಣೆ...


ಮೈಸೂರಿನ ಬೂದುಗುಂಟೆ ಚಾರಿಟೆಬಲ್ ಟ್ರಸ್ಟ್‌ನ ಅಂಗವಿಕಲ ಮತ್ತು ಅನಾಥಾಶ್ರಮದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಚಿತ್ರದಲ್ಲಿ ಮ್ಯಾನೇಜಿಂಗ್ ಟ್ರಸ್ಟಿಗಳಾದ ಬಿ.ಆರ್.ವಿಶ್ವನಾಥ್, ಬಿ.ಎಸ್.ಡಿ.ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ವಿನೋದಮ್ಮಗೆ ಸನ್ಮಾನ...


ಆಲನಹಳ್ಳಿ ಯುರೋ ಕಿಡ್ಸ್‌ನಲ್ಲಿ ನಡೆದ ವಾರ್ಷಿಕೋತ್ಸವ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ, ಲೇಖಕಿ ಡಾ.ವಿನೋದಮ್ಮ ಅವರನ್ನು ಸನ್ಮಾನಿಸಲಾಯಿತು. ಯುರೋ ಕಿಡ್ಸ್‌ನ ಮಾಲೀಕ ಹೆಚ್.ಸಿ.ಕೃಷ್ಣೇಗೌಡ, ಶಿಲ್ಪಾ ಕೃಷ್ಣೇಗೌಡ, ಮುಖ್ಯ ಶಿಕ್ಷಕಿ ಚೈತ್ರಾ ಚಿತ್ರದಲ್ಲಿದ್ದಾರೆ.

ಉದ್ಯೋಗ ಮೇಳದಲ್ಲಿ ಪ್ರತಿಷ್ಠಿತ ಕಂಪನಿಗಳು ಭಾಗಿ



ಡಾ.ಎಂ.ಪುಟ್ಟೇಗೌಡ ಮತ್ತು ಆಶಾಲತಾ ಪ್ರತಿಷ್ಠಾನದ ವತಿಯಿಂದ ಮೈಸೂರು ಪರಿವರ್ತನ ಬಿಸಿನೆಸ್ ಸ್ಕೂಲ್‌ನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು.

ಮೈಸೂರು, ಮಾ.18–ಡಾ.ಎಮ್.ಪುಟ್ಟೇಗೌಡ ಮತ್ತು ಆಶಾಲತಾ ಪ್ರತಿಷ್ಠಾನದ ವತಿಯಿಂದ ಮೈಸೂರು ಪರಿವರ್ತನ ಬಿಸಿನೆಸ್ ಸ್ಕೂಲ್‌ನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು.

ಸ್ನಾತಕರು, ಸ್ನಾತಕೋತ್ತರರು ಮತ್ತು ಹೊಸದಾಗಿ ಪದವಿ ಪಡೆದ ಅಭ್ಯರ್ಥಿಗಳು ಭಾಗವಹಿಸಿದ್ದು, 33 ಪ್ರತಿಷ್ಠಿತ ಕಂಪನಿಗಳು ವಿವಿಧ ಉದ್ಯೋಗಾವಕಾಶಗಳನ್ನು ಒದಗಿಸಿದ್ದವು ಹಾಗೂ 300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಡಾ.ಎಂ.ಪುಟ್ಟೇಗೌಡ, ಸಿದ್ದರಾಮಪ್ಪ, ಪುಟ್ಟಮಾದಯ್ಯ, ಎನ್.ಎಮ್.ತಿಮ್ಮೇಗೌಡ, ಹಾಗೂ ಪರಿವರ್ತನ ಬಿಸಿನೆಸ್ ಸ್ಕೂಲ್ ಪ್ರಾಂಶುಪಾಲ ಡಾ.ಎಂ.ಎಂ.ಕೃಷ್ಣ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ರುಕ್ಮಾಂಗದ ಡಿ.ಬಿ., ಪೃಥ್ವಿರಾಜ್, ಶ್ರೀಮತಿ ರೇಖಾ ಮತ್ತು ಯಶಿನ್ ನಾನಯ್ಯ, ಧನಂಜಯ್, ಮಂಜುರಾಮ್, ಶ್ರೀಮತಿ ಮನುಶ್ರೀ, ಶ್ರೀಮತಿ ಸಂಕ್ರಾಂತಿ ಮಂಜುರಾಮ್, ಸೋಮಾಚಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಕಲಾಪ ವೀಕ್ಷಣೆ...


ಮೈಸೂರಿನ ವಿದ್ಯಾವರ್ಧಕ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಐವತ್ತು ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರ ಕೋರಿಕೆ ಮೇರೆಗೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ವಿಧಾನಸೌಧಕ್ಕೆ ಮಂಗಳವಾರ ಪ್ರವೇಶ ಕಲ್ಪಿಸಿ, ವಿಧಾನಸಭೆ, ವಿಧಾನ ಪರಿಷತ್ ಕಲಾಪ ವೀಕ್ಷಿಸಲು ಅವಕಾಶ ಕಲ್ಪಿಸಿಕೊಟ್ಟರು.

ಜಿಲ್ಲಾಧಿಕಾರಿಗೂ ತಲೆ ಇಲ್ಲ...! ನಿಮಗೂ ತಲೆ ಇಲ್ಲ ಹೋಗಿ...!!

- ಶಾಸಕ ರಾಜುಕಾಗೆಗೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ ಅಪಮಾನ
- ಶಾಸಕ ಬಸವರಾಜ ಮತ್ತಿಮೋಡ್ ಅವರಿಗೂ ಕಲಬುರಗಿ ಅಪರ ವರಿಷ್ಠಾಧಿಕಾರಿ ಮಹೇಶ್ ಮೇಘಣ್ಣನವರ್ ಅಪಮಾನವನ್ನು ಗಂಭೀರವಾಗಿ ಪರಿಗಣಿಸಿದ ಸ್ಪೀಕರ್
- ಈ ಎರಡೂ ಪ್ರಕರಣ ಹಕ್ಕುಬಾಧ್ಯತಾ ಸಮಿತಿಗೆ ವರ್ಗಾವಣೆ

ಬೆಂಗಳೂರು, ಮಾ.18(ಕೆಎಂಶಿ)–ಶಾಸಕರಾದ ರಾಜುಕಾಗೆ ಮತ್ತು ಬಸವರಾಜ ಮತ್ತಿಮೋಡ್ ಅವರಿಗೆ ಅಧಿಕಾರಿಗಳಿಂದ ಆದ ಅಪಮಾನ ವಿಚಾರವನ್ನು ಹಕ್ಕು ಬಾಧ್ಯತಾ ಸಮಿತಿಗೆ ವರ್ಗಾಯಿಸಿ ಸಭಾಧ್ಯಕ್ಷ ಯು.ಟಿ.ಖಾದರ್ ಆದೇಶ ಮಾಡಿದರು.

ವಿಧಾನಸಭೆಯಲ್ಲಿಂದು ಇಬ್ಬರು ಶಾಸಕರು ತಮಗಾದ ಅಪಮಾನ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದಾಗ ಪಕ್ಷಭೇದ ಮರೆತು ಬಹುತೇಕ ಶಾಸಕರು, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿಷಯ ಪ್ರಸ್ತಾಪಿಸಿದ ರಾಜುಕಾಗೆ, ಫೆ.11ರಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸಭೆ ನಂತರ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಬಳಿ ತೆರಳಿ ತಮ್ಮ ಕ್ಷೇತ್ರದಲ್ಲಿನ ಭವನವೊಂದರ ನಿರ್ಮಾಣ ಕೆಲಸ ವಿಚಾರವಾಗಿ ಪ್ರಸ್ತಾಪಿಸಿದಾಗ, ಜಿಲ್ಲಾಧಿಕಾರಿಗಳಿಗೂ ತಲೆಯಿಲ್ಲ, ನಿಮಗೂ ತಲೆಯಿಲ್ಲ ಎಂದು ಅಪಮಾನ ಮಾಡಿದರು.

ನನ್ನ ಮಾತಿಗೂ ಬೆಲೆ ಕೊಡದೆ ಉದ್ಧಟತನದ ಮಾತನಾಡಿದ್ದಾರೆ. 25 ವರ್ಷದಿಂದ ನಾನು ಶಾಸಕನಾಗಿದ್ದು, ಇಂತಹ ಉದ್ಧಟತನವನ್ನು ಯಾವ ಅಧಿಕಾರಿಯೂ ತೋರಿರಲಿಲ್ಲ. ಸರ್ವಾಧಿಕಾರಿ ಧೋರಣೆ ಸರಿಯಲ್ಲ, ಸಾರ್ವಜನಿಕರ ಕೆಲಸ ಮಾಡುವುದು ಅಧಿಕಾರಿ ಹೊಣೆಗಾರಿಕೆ. ನಾವು ಜನ ಪ್ರತಿನಿಧಿ, ನಮಗೆ ಘೋರ ಅಪಮಾನ ಮಾಡಿದ ಅಧಿಕಾರಿಗೆ ಶಿಕ್ಷೆಯಾಗಬೇಕು. ಅಧಿಕಾರಿಯನ್ನು ವರ್ಗ ಮಾಡಬೇಕು. 50ರಿಂದ 60 ಶಾಸಕರು ಸಹಿ ಹಾಕಿ ಪತ್ರ ಕೊಟ್ಟಿದ್ದಾರೆ. ಇದನ್ನು ಹಕ್ಕುಚ್ಯುತಿ ಸಮಿತಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಎಂ.ಟಿ.ಕೃಷ್ಣಪ್ಪ ದನಿಗೂಡಿಸಿ, ಇದು ಸದನದ 224 ಶಾಸಕರಿಗೆ ಮಾಡಿರುವ ಅಪಮಾನ, ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಸಿ.ಸಿ.ಪಾಟೀಲ್ ಮಾತನಾಡಿ, ತಮ್ಮ ಕ್ಷೇತ್ರದ ಅಭಿವೃದ್ಧಿ ಕೆಲಸದ ಬಗ್ಗೆ ಅಧಿಕಾರಿ ಬಳಿ ಮಾತನಾಡಲು ರಾಜುಕಾಗೆ ಹೋದಾಗ ದುರ್ವರ್ತನೆ ತೋರಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.



ಬಸವರಾಜ್ ಮತ್ತಿಮೋಡ್ ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯ ಮರ ಸಭೆ ಚುನಾವಣೆ ವೇಳೆ ಹೆಚ್ಚುವರಿ ಎಸ್ಪಿ ಮಹೇಶ್ ಮೇಘಣ್ಣನವರ್ ತಮ್ಮನ್ನು ನೂಕಿದ್ದಾರೆ. ಇಬ್ಬರು ಸದಸ್ಯರ ಅಪಹರಣಕ್ಕೆ ಸಹಕರಿಸಿದ್ದಾರೆ. ಶಾಸಕರಿಗೆ ಗೌರವವೇ ಇಲ್ಲದಂತಾಗಿದೆ ನನ್ನ ಎದೆ ಮೇಲೆ ಕೈ ಹಾಕಿ ನೂಕಿದ್ದಾರೆ, ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಆಡಳಿತ ಪಕ್ಷದವರಿಗೆ ಒಂದು ಪೆಟ್ಟಾದರೆ, ವಿರೋಧಪಕ್ಷದವರಿಗೆ ಎರಡು ಪೆಟ್ಟು ಎನ್ನುಮಂತಾಗಿದೆ ಅಧಿಕಾರಿಗಳೇ ಗೌರವ ಕೊಡಲ್ಲ ಎಂದರೆ ಹೇಗೆ, ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗೆ ಪ್ರಶ್ನೆ ಮಾಡುವ ಅಧಿಕಾರವಿದೆ. ಅಧಿಕಾರಿಗಳು ಬೆಲೆ ಕೊಡುವುದಿಲ್ಲ ಎಂದಾದರೆ ಸಮಿತಿಯನ್ನು ಮುಚ್ಚಿಬಿಡಿ, ಅಧಿಕಾರಿಗಳೇ ರಾಜ್ಯಭಾರ ಮಾಡಲಿ, ನಾವು ಸದನಕ್ಕೆ ಏಕೆ ಬರಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಬೆಳಗಾವಿಯಲ್ಲಿ ಲಿಂಗಾಯಿತರ ಸಮಾವೇಶ ವೇಳೆ ಎಡಿಜಿಪಿ ಕಾನೂನು ಮೀರಿ ವರ್ತಿಸಿದ್ದಾರೆ. ಇಂತಹ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಸೂಕ್ತ ನಿರ್ದೇಶನ ನೀಡಬೇಕು ಎಂದು ಸಭಾಧ್ಯಕ್ಷರಿಗೆ ಮನವಿ ಮಾಡಿದರು.

ವಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ್ ಮಾತನಾಡಿ, ಉತ್ತರಪ್ರದೇಶ ದಲ್ಲಿ ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ನಡೆದ ವಿಚಾರ ಪ್ರಸ್ತಾಪಿಸಿ, ಶಾಸಕಾಂಗಕ್ಕೆ ಅಗೌರವ ಸಲ್ಲಿಸಿದರೆ ಸಭಾಧ್ಯಕ್ಷರು ಕೈಗೊಳ್ಳುವ ಕ್ರಮ ಪ್ರಶ್ನಿಸಲು ಸುಪ್ರೀಂಕೋರ್ಟ್‌ಗೂ ಅಧಿಕಾರವಿಲ್ಲ. ತಪ್ಪಿತಸ್ಥ ಅಧಿಕಾರಿಗಳನ್ನು ವರ್ಗ ಮಾಡಿ ಕ್ರಮ ಕೈಗೊಳ್ಳಬೇಕು ಎಂದರು.

ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಅಧಿಕಾರಿಗಳ ರಕ್ಷಣೆ ಮಾಡುವುದಾಗಲೀ, ತಪ್ಪು ಮಾಡಿದವರ ಬಗ್ಗೆ ಸಬೂಬು ಹೇಳುವುದಾಗಲೀ ಮಾಡುವುದಿಲ್ಲ. ಶಾಸಕರಿಬ್ಬರು ಸದನದಲ್ಲಿ ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಶಾಸಕರು, ಸಂಬಂಧಿಸಿದ ಅಧಿಕಾರಿಗಳು, ಕಂದಾಯ ಸಚಿವರು, ಸಮಿತಿ ಅಧ್ಯಕ್ಷ ಸಿ.ಸಿ.ಪಾಟೀಲ್ ಅವರನ್ನು ತಮ್ಮ ಕಚೇರಿಗೆ ಕರೆಸಿ ಚರ್ಚಿಸಿ ಮುಂದಿನ ನಿರ್ಣಯ ಕೈಗೊಳ್ಳಬೇಕು ಎಂಬ ಸಲಹೆ ನೀಡಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅಶೋಕ್, ಇದು ಕಾಜಿ ನ್ಯಾಯ, ಇದು ಬೇಡ, ತಪ್ಪು ಮಾಡಿದ ಅಧಿಕಾರಿಗಳಿಗೆ ಛೀಮಾರಿ ಹಾಕಿ ಎಂದಾಗ ಹಲವು ಸದಸ್ಯರು ದನಿಗೂಡಿಸಿದರು. ಸಭಾಧ್ಯಕ್ಷರು ಮಾತನಾಡಿ, ಶಾಸಕರಾದ ರಾಜುಕಾಗೆ ಹಾಗೂ ಮತ್ತಿಮೋಡ್ ತಮಗಾದ ಅಪಮಾನದ ಬಗ್ಗೆ ಲಿಖಿತ ದೂರು ನೀಡಿದ್ದಾರೆ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ, ಕಲಬುರಗಿ ಹೆಚ್ಚುವರಿ ಎಸ್ಪಿ ಮಹೇಶ್ ಮೇಘಣ್ಣನವರ್ ಅವರಿಂದ ಆದ ಅಪಮಾನ ಪ್ರಸ್ತಾಪಿಸಿದ್ದಾರೆ. ಸೌಜನ್ಯ ತೋರದ ಅಧಿಕಾರಿಗಳ ವರ್ತನೆ ಸಹಿಸುವುದಿಲ್ಲ, ಜನಪ್ರತಿನಿಧಿಗಳಿಗೆ ಗೌರವ ಕೊಡಬೇಕು, ಇದು ಸದನಕ್ಕೆ ಮಾಡಿರುವ ಅಪಮಾನ. ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು, ಬೇರೆಯವರಿಗೂ ಎಚ್ಚರಿಕೆ ಗಂಟೆಯಾಗಬೇಕು, ನಾವೇಕೆ ಅಧಿಕಾರಿಗಳಿಗೆ ಸಮಯ ಕೊಡಬೇಕು, ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸುತ್ತೇನೆ ಎಂದರು.

ಎಚ್.ಕೆ.ಪಾಟೀಲ್ ಮಾತನಾಡಿ, ಸಾಮಾಜಿಕ ನ್ಯಾಯ ಅಧಿಕಾರಿಗಳಿಗೂ ಕೊಡಬೇಕು. ನಿಮ್ಮ ನಿರ್ಣಯ ಪುನರ್ ಪರಿಶೀಲಿಸಿ ಎಲ್ಲರನ್ನೂ ಕರೆದು ಮಾತನಾಡಿ ಎಂದರು.

ಕಾನೂನು ಸಚಿವರ ಸಲಹೆ ಒಪ್ಪದ ಸಭಾಧ್ಯಕ್ಷರು, ನನ್ನ ಆತ್ಮಸಾಕ್ಷಿ ಪ್ರಕಾರ ಇಂತಹ ಅಧಿಕಾರಿಗಳಿಗೆ ಯಾವುದೇ ಅವಕಾಶ ಕೊಡಬಾರದು. ಹಕ್ಕುಚ್ಯುತಿ ಸಮಿತಿ ಮುಂದೆ ಹೋಗಲಿ, ನಮಗೆ ಅಧಿಕಾರಿ ಮುಖ್ಯವಲ್ಲ, ಶಾಸಕರು ಮುಖ್ಯ, ಶಾಸಕರಿಗೆ ಅಗೌರವ ತೋರುವುದನ್ನು ಸಹಿಸುವುದಿಲ್ಲ, ಅಧಿಕಾರಿಗಳು ಸರ್ಕಾರದ ಸೇವಕರು, ಶಾಸಕರ ಅಪಮಾನ ಸಹಿಸುವುದಿಲ್ಲ ಎಂದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಯದುವೀರ್ ಒಡೆಯರ್ ಶುಭ ಹಾರೈಕೆ



ಮೈಸೂರು, ಮಾ.18(ಬಿಎಲ್‌ಯು)–ಎಸ್‌ಎಸ್‌ಎಲ್‌ಸಿ ಪರೀಕ್ಷಾರ್ಥಿಗಳಿಗೆ ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಶುಭ ಹಾರೈಸಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಈ ವಿಚಾರ ತಿಳಿಸಿರುವ ಯದುವೀರ್, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 21ರಿಂದ ಏಪ್ರಿಲ್ 4ರವರೆಗೆ ನಡೆಯಲಿದ್ದು, ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಿರಿ. ಯಶಸ್ಸು ನಿಮ್ಮದಾಗಲಿ ಎಂದು ವಿದ್ಯಾರ್ಥಿಗಳಿಗೆ ಹೇಳಿದ್ದಾರೆ. ಉತ್ತಮ ಫಲಿತಾಂಶ ಬರುತ್ತದೆ ಎಂಬ ನಿರೀಕ್ಷೆ ಇದೆ. ಎಲ್ಲಾ ವಿದ್ಯಾರ್ಥಿಗಳಿಗೆ ಶ್ರೀ ಚಾಮುಂಡೇಶ್ವರಿ ಸನ್ಮಂಗಳ ಉಂಟು ಮಾಡಲಿ ಎಂದು ಯದುವೀರ್ ಒಡೆಯರ್ ಶುಭಾಶಯ ತಿಳಿಸಿದ್ದಾರೆ.

ಸುನೀತಾ ವಿಲಿಯಮ್ಸ್ ಸುರಕ್ಷಿತವಾಗಿ ಮರಳಲು ಕುಟುಂಬದಿಂದ ಯಜ್ಞ


ಸುನೀತಾ ವಿಲಿಯಮ್ಸ್ ಸುರಕ್ಷಿತ ವಾಪಸಾತಿಗಾಗಿ ಯಜ್ಞದ ಮೊರೆ ಹೋದ ಕುಟುಂಬ.

ಗಾಂಧಿನಗರ: ನಾಸಾ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಸುರಕ್ಷಿತ ವಾಪಸಾತಿಗಾಗಿ ಭಾರತದಲ್ಲಿಯೂ ಯಜ್ಞ, ಹೋಮ, ಹವನಗಳು ನಡೆದವು. ಗುಜರಾತ್‌ನಲ್ಲಿರುವ ಅವರ ಕುಟುಂಬದಲ್ಲಿ ಸಂತಸ ಮನೆ ಮಾಡಿದ್ದು, ಆಕೆಯ ಮರಳುವಿಕೆಯನ್ನು ಕಾತುರದಿಂದ ಎದುರು ನೋಡುತ್ತಿದೆ. ಸುನೀತಾ ವಿಲಿಯಮ್ಸ್ ತಾಯಿ, ಸಹೋದರ, ಮತ್ತು ಸಹೋದರಿ ಸೇರಿದಂತೆ ಎಲ್ಲರೂ ಖುಷಿಯಾಗಿದ್ದು, ಆಕೆಯ ಸುರಕ್ಷತೆಗಾಗಿ ದೇವಾಲಯಗಳಿಗೆ ಭೇಟಿ ನೀಡಿ, ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದ್ದರು.

ಗುಜರಾತ್‌ನಲ್ಲಿರುವ ಅವರ ಸೋದರ ಸಂಬಂಧಿ ದಿನೇಶ್ ರಾವಲ್, ಸುನೀತಾ ವಿಲಿಯಮ್ಸ್ ರಾಷ್ಟ್ರದ ಹೆಮ್ಮೆ ಎಂದು ಹೇಳುವ ಮೂಲಕ ಸಂತಸ ವ್ಯಕ್ತಪಡಿಸಿದ್ದಾರೆ.

ಇದು ನಮಗೆ ಒಂದು ದೊಡ್ಡ ದಿನವಾಗಿದೆ. ವಿಲಿಯಮ್ಸ್ ರಾಷ್ಟ್ರದ ಹೆಮ್ಮೆ. ಆಕೆಯ ಮರಳುವಿಕೆಗಾಗಿ ಯಜ್ಞವನ್ನು ಮಾಡುತ್ತಿದ್ದೇವೆ ಮತ್ತು ಹಿಂದಿರುಗಿದ ನಂತರ ಸಿಹಿ ವಿತರಿಸುತ್ತೇವೆ ಎಂದು ಹೇಳಿದರು. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ನಾಲ್ಕು ಗಗನಯಾತ್ರಿಗಳನ್ನು ಭೂಮಿಗೆ ಕರೆತರುವ ಸ್ಪೇಸ್‌ಎಕ್ಸ್ ಕ್ರ್ಯೂ–9 'ಡ್ರ್ಯಾಗನ್ ಫ್ರೀಡಮ್' ಬಾಹ್ಯಾಕಾಶ ನೌಕೆಯ ನೇರ ಪ್ರಸಾರವನ್ನು ನಾಸಾ ಒದಗಿಸಿತು.

288 ದಿನಗಳ ಬಳಿಕ ಭೂಮಿಗೆ ವಾಪಸ್ಸಾದ ಭಾರತೀಯ ಮೂಲದ ವಿಲಿಯಮ್ಸ್ ಮತ್ತು ವಿಲ್ಮೋರ್ ಜೊತೆಗೆ ಗಗನಯಾತ್ರಿಗಳಾದ ನಿಕ್ ಹೇಗ್ ಮತ್ತು ರಷ್ಯಾದ ಗಗನಯಾತ್ರಿ ಅಲೆಕ್ಸಾಂಡರ್ ಗೊರ್ಬುನೊವ್ ಇದ್ದಾರೆ.

ಟೇಕ್‌ಆಫ್ ಬೆನ್ನಲ್ಲೇ ಸಮುದ್ರದಲ್ಲಿ ವಿಮಾನ ಪತನ; ಆರು ಮಂದಿ ಸಾವು



ಟೆಗುಸಿಗಲ್ಪಾ: ಲ್ಯಾಟಿನ್ ಅಮೆರಿಕದ ಹೊಂಡುರಾಸ್ ಕರಾವಳಿಯ ಸಮೀಪವಿರುವ ರೋಟನ್ ದ್ವೀಪದಿಂದ ವಿಮಾನವೊಂದು ಟೇಕ್‌ಆಫ್ ಆದ ಬೆನ್ನಲ್ಲೇ ಪತನವಾಗಿ 6 ಮಂದಿ ಮೃತಪಟ್ಟಿದ್ದಾರೆ ಎಂದು ಅಲ್ಲಿನ ಅಗ್ನಿಶಾಮಕದಳದ ಮುಖ್ಯಸ್ಥರು ತಿಳಿಸಿದ್ದಾರೆ. ಎಂಟು ಪ್ರಯಾಣಿಕರು ಇನ್ನೂ ವಿಮಾನದೊಳಗೆ ಇರುವ ಸಾಧ್ಯತೆ ಇದೆ ಎನ್ನಲಾಗಿದೆ. ವಿಮಾನ ಟೇಕ್‌ಆಫ್ ಆದ ಸ್ವಲ್ಪ ಸಮಯದ ನಂತರ ಸಮುದ್ರಕ್ಕೆ ಬಿದ್ದು ಪತನಗೊಂಡಿದೆ. ವಿಮಾನ ಸಮುದ್ರಕ್ಕೆ ಬಿದ್ದ ಕಾರಣ ರಕ್ಷಣಾ ಕಾರ್ಯಾಚರಣೆಗೆ ತೊಂದರೆ ಯಾಗಿದೆ ಎಂದು ದ್ವೀಪದ ಪೊಲೀಸ್ ಮುಖ್ಯಸ್ಥ ಲಿಸಾಂಡ್ರೊ ಹೇಳಿ ದ್ದಾರೆ. ಹೊಂಡುರಾಸ್‌ನ ಲನ್ಸಾ ನಿರ್ವಹಿಸುತ್ತಿದ್ದ ಜೆಟ್‌ಸ್ಟ್ರೀಮ್ ವಿಮಾನವು ಮೂವರು ಸಿಬ್ಬಂದಿ ಸೇರಿದಂತೆ 17 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿತ್ತು ಎಂದು ದೇಶದ ಸಾರಿಗೆ ಸಚಿವರು ತಿಳಿಸಿದ್ದಾರೆ. ವಿಮಾನವು ಹೊಂಡುರಾಸ್‌ನ ಮುಖ್ಯ ಭೂಭಾಗದಲ್ಲಿರುವ ಲಾ ಸೀಬಾ ವಿಮಾನ ನಿಲ್ದಾಣಕ್ಕೆ ತೆರಳುತ್ತಿತ್ತು. ಪ್ರಯಾಣಿಕರಲ್ಲಿ ಒಬ್ಬ ಅಮೆರಿಕದ ಪ್ರಜೆ, ಒಬ್ಬ ಫ್ರೆಂಚ್ ಪ್ರಜೆ ಮತ್ತು ಇಬ್ಬರು ಅಪ್ರಾಪ್ತ ವಯಸ್ಕರು ಸೇರಿದ್ದಾರೆ ಎಂದು ತಿಳಿದುಬಂದಿದೆ.

ದೇಶ - ವಿದೇಶ

ಗಾಜಾ ಮೇಲೆ ಇಸ್ರೇಲ್ ವೈಮಾನಿಕ ದಾಳಿ: 413ಕ್ಕೂ ಅಧಿಕ ಮಂದಿ ಸಾವು



ಟೆಲ್ ಅವಿವ್: ಗಾಜಾ ಪಟ್ಟಿಯಾದ್ಯಂತ ಇಸ್ರೇಲ್ ಸೇನೆಯು ನಡೆಸಿರುವ ವೈಮಾನಿಕ ದಾಳಿಯಲ್ಲಿ 413ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಜನವರಿಯಲ್ಲಿ ಕದನ ವಿರಾಮ ಜಾರಿಗೆ ಬಂದ ಬಳಿಕ ಹಮಾಸ್ ಗುರಿಯಾಗಿಸಿ ಇಸ್ರೇಲ್ ನಡೆಸಿರುವ ಅತಿ ದೊಡ್ಡ ದಾಳಿ ಇದಾಗಿದೆ. ಇಸ್ರೇಲ್ ನಡೆಸಿರುವ ದಾಳಿಯಲ್ಲಿ 413ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾದ ಸಚಿವಾಲಯ ತಿಳಿಸಿದೆ. ಕದನ ವಿರಾಮ ವಿಸ್ತರಣೆಯ ಮಾತುಕತೆಯಲ್ಲಿ ಉಂಟಾದ ಪ್ರಗತಿಯ ಹಿನ್ನಡೆಯಿಂದಾಗಿ ದಾಳಿಗೆ ಆದೇಶ ನೀಡಿರುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಾರಣ ನೀಡಿದ್ದಾರೆ. ಕದನ ವಿರಾಮ ಉಲ್ಲಂಘನೆ ಮಾಡಿರುವ ಇಸ್ರೇಲ್‌ಗೆ ತಕ್ಕ ಉತ್ತರ ನೀಡಲಿದ್ದೇವೆ. ಒತ್ತೆಯಾಳುಗಳ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸಿವೆ ಎಂದು ಹಮಾಸ್ ಎಚ್ಚರಿಸಿದೆ. ಗಾಜಾದ ಮೇಲೆ ಇಸ್ರೇಲ್ ನಡೆಸಿರುವ ದಾಳಿಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಆಘಾತ ವ್ಯಕ್ತಪಡಿಸಿದ್ದು, ಕದನ ವಿರಾಮವನ್ನು ಎಲ್ಲರೂ ಗೌರವಿಸಬೇಕು ಎಂದು ಹೇಳಿದ್ದಾರೆ.

ನೀರಿನ ಟ್ಯಾಂಕ್ ಕುಸಿದು ಕಾರ್ಮಿಕ ಸಾವು: ಇಬ್ಬರಿಗೆ ಗಂಭೀರ ಗಾಯ



ಅಯೋಧ್ಯೆ: ಉತ್ತರಪ್ರದೇಶದ ಪುರಕಲಂದರ್ ಪ್ರದೇಶದ ಕೆಎಂ ಸಕ್ಕರೆ ಕಾರ್ಖಾನೆಯಲ್ಲಿ ಮಂಗಳವಾರ ಓವರ್ ಹೆಡ್ ನೀರಿನ ಟ್ಯಾಂಕ್ ಕುಸಿದು ಓರ್ವ ಕಾರ್ಮಿಕ ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 40,000 ಲೀಟರ್ ನೀರಿನ ಟ್ಯಾಂಕ್ ಹಠಾತ್ತನೆ ಕುಸಿದು ಬಿದ್ದಿದ್ದು, ಅಲ್ಲಿ ಕೆಲಸ ಮಾಡುತ್ತಿದ್ದ ಮೂವರು ಕಾರ್ಮಿಕರು ಸಿಲುಕಿಕೊಂಡಿದ್ದರು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಧುವನ್ ಸಿಂಗ್ ಹೇಳಿದ್ದಾರೆ.

ಘಟನೆಯಲ್ಲಿ ಪ್ರವೇಶ್ ರಾವತ್ (40) ಎಂಬ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ನಂದ ಕುಮಾರ್ ಪಾಂಡೆ (46) ಮತ್ತು ವಿನೋದ್ ಕುಮಾರ್ (30) ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ವಿಕಾಸ್ ದುಬೆ ತಿಳಿಸಿದ್ದಾರೆ.

ಉಕ್ಕು, ಅಲ್ಯೂಮಿನಿಯಂ ಸುಂಕ ಇಳಿಕೆ ಇಲ್ಲ: ಟ್ರಂಪ್




ವಾಷಿಂಗ್ಟನ್: ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ಸುಂಕದಲ್ಲಿ ವಿನಾಯಿತಿ ನೀಡುವ ಯಾವುದೇ ಯೋಚನೆಯನ್ನು ಹೊಂದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಮುಖ ಪಾಲುದಾರರಿಂದ ವ್ಯಾಪಾರ ವಹಿವಾಟಿನಲ್ಲಿ ಪ್ರತಿರೋಧ ಎದುರಾಗುವ ಸಾಧ್ಯತೆ ಇದ್ದರೂ ಉಕ್ಕು ಹಾಗೂ ಅಲ್ಯೂಮಿನಿಯಂ ಮೇಲಿನ ಆಮದು ಸುಂಕವನ್ನು ಇಳಿಸದೇ ಇರಲು ನಿರ್ಧರಿಸಲಾಗಿದೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದರು.

ಏಪ್ರಿಲ್ 2, ನಮ್ಮ ದೇಶಕ್ಕೆ ವಿಮೋಚನಾ ದಿನವಾಗಿದೆ. ಈಗಾಗಲೇ ನಮ್ಮ ದೇಶಕ್ಕೆ ಶತಕೋಟಿಗಟ್ಟಲೆ ಡಾಲರ್‌ನಷ್ಟು ಆರ್ಥಿಕ ಸಂಪತ್ತು ಹರಿದುಬಂದಿದೆ. ಏ.2ರಿಂದ ಇನ್ನೂ ದೊಡ್ಡ ಪ್ರಮಾಣದಲ್ಲಿ ಹಣ ಹರಿದುಬರಲಿದೆ' ಎಂದರು. ಉಕ್ಕು, ಅಲ್ಯೂಮಿನಿಯಂ ಮೇಲೆ ಟ್ರಂಪ್ ಜನವರಿಯಿಂದ ಶೇ 25ರಷ್ಟು ಆಮದು ಸುಂಕ ವಿಧಿಸಿದ್ದಾರೆ. ಈ ಬೆಳವಣಿಗೆಯು ಜಾಗತಿಕ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ.

ಕಳ್ಳ ಸಾಗಣೆ ಮಾಡಲಾಗಿದ್ದ 90 ಕೆಜಿ ಚಿನ್ನ ವಶ



ಅಹ್ಮದಾಬಾದ್: ಸೋಮವಾರ ರಾತ್ರಿ ಗುಜರಾತ್ ಪೊಲೀಸ್‌ನ ಭಯೋತ್ಪಾದನೆ ನಿಗ್ರಹ ದಳವು ಕಂದಾಯ ಗುಪ್ತಚರ ನಿರ್ದೇಶನಾಲಯದ ಸಹಯೋಗದೊಂದಿಗೆ ನಡೆಸಿದ ದಾಳಿ ಕಾರ್ಯಾಚರಣೆಯಲ್ಲಿ ಕಳ್ಳ ಸಾಗಾಣಿಕೆ ಮಾಡಲಾಗಿತ್ತು ಎಂದು ಶಂಕಿಸಲಾದ 90 ಕೆಜಿ ಚಿನ್ನವನ್ನು ವಶಪಡಿಸಿಕೊಂಡಿದೆ. ಅಹ್ಮದಾಬಾದ್‌ನ ಪಾಲ್ಡಿ ಪ್ರದೇಶದಲ್ಲಿರುವ ಸ್ಟಾಕ್ ಬ್ರೋಕರ್ ಮಹೇಂದ್ರ ಶಾ ಅವರ ಪುತ್ರ ಮೇಘ ಶಾಗೆ ಸೇರಿದ ಫ್ಲ್ಯಾಟ್‌ನಿಂದ ಈ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಳ್ಳಲಾಗಿರುವ ಚಿನ್ನದ ನಿಖರ ಮೌಲ್ಯವನ್ನು ತಿಳಿಸಲು ಅಧಿಕಾರಿಗಳು ನಿರಾಕರಿಸಿದ್ದರೂ, ಅದು 80 ಕೋಟಿ ರೂ.ಗೂ ಅಧಿಕ ಎಂದು ಅಂದಾಜಿಸಲಾಗಿದೆ. ಎಟಿಎಸ್ ಡಿಎಸ್‌ಪಿ ಎಸ್.ಎಲ್.ಚೌಧರಿಯವರಿಗೆ ಲಭಿಸಿದ ಗುಪ್ತಚರ ಮಾಹಿತಿ ಮೇರೆಗೆ ಸೋಮವಾರ ಬೆಳಗ್ಗೆ ಸ್ಥಳವನ್ನು ಗುರುತಿಸಿದ ಬಳಿಕ ಕಾರ್ಯಾಚರಣೆ ಆರಂಭಿಸಿದ್ದು, ನಂತರ ಡಿಆರ್‌ಐನ ಅಹ್ಮದಾಬಾದ್ ವಲಯ ಘಟಕವು ಸೇರಿಕೊಂಡಿತ್ತು. ಡಿಆರ್‌ಐ ಹೆಚ್ಚಿನ ಪ್ರಮಾಣದ ಚಿನ್ನ ಕಳ್ಳಸಾಗಣೆ ಅಪರಾಧಗಳನ್ನು ತನ್ನ ಅಧಿಕಾರ ವ್ಯಾಪ್ತಿ ಯಲ್ಲಿ ಹೊಂದಿರುವುದರಿಂದ ಅದನ್ನು ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳಲಾಗಿತ್ತು. ಕಾರ್ಯಾಚರಣೆ ಸಂಜೆಯವರೆಗೂ ಮುಂದುವರಿದಿತ್ತು ಎಂದು ಎಟಿಎಸ್ ಅಧಿಕಾರಿ ತಿಳಿಸಿದರು.

ಸೇನೆ ಬಿಟ್ಟು ಓಡಿಹೋದ 2500ಕ್ಕೂ ಹೆಚ್ಚು ಪಾಕ್ ಯೋಧರು!

ಇಸ್ಲಮಾಬಾದ್: ಬಲೂಚ್ ಆರ್ಮಿ ಮಾ.11ರಂದು ಜಾಫರ್ ಎಕ್ಸ್‌ಪ್ರೆಸ್ ಅನ್ನು ಅಪಹರಿಸಿ 214ಕ್ಕೂ ಹೆಚ್ಚು ಪಾಕಿಸ್ತಾನಿ ಸೇನಾ ಸಿಬ್ಬಂದಿಯನ್ನು ಕೊಂದು ಹಾಕಿತ್ತು. ನಂತರ ಕಳೆದ ಭಾನುವಾರ ಪಾಕಿಸ್ತಾನ ಸೇನಾ ಬೆಂಗಾವಲು ಪಡೆಯ ಮೇಲೆ ದಾಳಿ ನಡೆಸಿ 90 ಸೈನಿಕರನ್ನು ಕೊಂದಿದ್ದಾಗಿ ಬಲೂಚ್ ಆರ್ಮಿ ಹೇಳಿಕೊಂಡಿತ್ತು.

ಈ ಮಧ್ಯೆ, ಪಾಕಿಸ್ತಾನಿ ಸೈನಿಕರು ಸೇನೆಯನ್ನು ಬಿಟ್ಟು ಓಡಿಹೋಗುತ್ತಿದ್ದಾರೆ ಎಂಬ ಸುದ್ದಿ ಬಂದಿದೆ. ಇಲ್ಲಿವರೆಗೆ, 2500 ಸೈನಿಕರು ಪಲಾಯನ ಮಾಡಿರುವ ವರದಿಗಳಿವೆ. ವಾಸ್ತವವಾಗಿ, ಬಿಎಲ್‌ಎ ನಡೆಸಿದ ಈ ದಾಳಿಗಳಲ್ಲಿ ಹೆಚ್ಚಿನ ಸಂಖ್ಯೆಯ ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದರು. ಅದಕ್ಕಾಗಿಯೇ ಅಲ್ಲಿನ ಸೈನಿಕರು ತಮ್ಮ ಪ್ರಾಣವನ್ನು ಅಪಾಯಕ್ಕೆ ಸಿಲುಕಿಸಲು ಬಯಸದೇ ಸೈನ್ಯವನ್ನು ತೊರೆದು ಬೇರೆ ದೇಶಗಳಲ್ಲಿ ಕೆಲಸ ಮಾಡಲು ಹೋಗುತ್ತಿದ್ದಾರೆ. ಆದಾಗ್ಯೂ, ಪಾಕಿಸ್ತಾನ ಸೇನೆಯಾಗಲಿ ಅಥವಾ ಅದರ ಮಾಧ್ಯಮವಾಗಲಿ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ಬಿಡುಗಡೆ ಮಾಡಿಲ್ಲ.

ಇತ್ತೀಚೆಗೆ, ಪಾಕಿಸ್ತಾನದ ಬಲೂಚಿಸ್ತಾನ್ ಮತ್ತು ಖೈಬರ್ ಪಖ್ತುಂಖ್ವಾದಲ್ಲಿ ಸೇನೆ ಮತ್ತು ಭದ್ರತಾ ಪಡೆಗಳ ದಾಳಿಗಳು ಹೆಚ್ಚಿವೆ. ಈ ದಾಳಿಗಳಲ್ಲಿ ಹೆಚ್ಚಿನ ಸಂಖ್ಯೆಯ ಸೇನಾ ಸಿಬ್ಬಂದಿಯೂ ಸಾವನ್ನಪ್ಪಿದರು. ಏತನ್ಮಧ್ಯೆ, ಹೆಚ್ಚಿನ ಸಂಖ್ಯೆಯ ಪಾಕಿಸ್ತಾನಿ ಸೇನಾ ಸೈನಿಕರು ತಮ್ಮ ಕೆಲಸಗಳನ್ನು ತೊರೆದು ದೇಶದಿಂದ ಓಡಿಹೋಗುತ್ತಿರುವುದು ಬೆಳಕಿಗೆ ಬಂದಿದೆ.

ಮೈಸೂರು ಮಿತ್ರ ಬುಧವಾರ 19 ಮಾರ್ಚ್ 2025

ರಾಷ್ಟ್ರೀಯ ಹೆದ್ದಾರಿ 275 ಬದಿಯ ಅನಧಿಕೃತ ಅಂಗಡಿಗಳಿಗೆ ಬಿಸಿ ಮುಟ್ಟಿಸಿದ ಅಧಿಕಾರಿಗಳು

ಮಾಲೀಕರಿಗೆ ನೋಟೀಸ್ ನೀಡಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು



ಅಂಗಡಿಗೆ ಬೀಗ ಹಾಕುತ್ತಿರುವ ಅಧಿಕಾರಿಗಳು.

ಮಡಿಕೇರಿ, ಮಾ.18– ಕುಶಾಲನಗರ–ಸಂಪಾಜೆ ರಾಷ್ಟ್ರೀಯ ಹೆದ್ದಾರಿ 275ರ ರಸ್ತೆ ಬದಿಯಲ್ಲಿ ಅಕ್ರಮವಾಗಿ ತಲೆ ಎತ್ತಿದ್ದ ಅಂಗಡಿ ಮಳಿಗೆಗಳಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಬಿಸಿ ಮುಟ್ಟಿಸಿದರು. ಸುಂಟಿಕೊಪ್ಪದಿಂದ ಸಂಪಾಜೆವರೆಗೆ ತೆರಳುವ ಹೆದ್ದಾರಿಯ ತಿರುವು ರಸ್ತೆ ಬದಿಯಲ್ಲೇ ಹಣ್ಣಿನ ಮಳಿಗೆಗಳು, ಕ್ಯಾಂಟೀನ್, ಕಬ್ಬು ಜ್ಯೂಸ್ ಅಂಗಡಿಗಳನ್ನು ಇಡಲಾಗಿದ್ದು, ಅಪಘಾತಗಳಿಗೆ ಎಡೆಮಾಡಿಕೊಡುತ್ತಿದ್ದವು.. ಈಗಾಗಲೇ ಇಂತಹ ಕಡೆಗಳಲ್ಲಿ ಅಳವಡಿಸಲಾಗಿದ್ದ ಬೃಹತ್ ಜಾಹೀರಾತು ಫಲಕಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತೆರವು ಮಾಡಿದ್ದು, ಇದೀಗ ರಸ್ತೆ ಬದಿಯ ಅಂಗಡಿಗಳ ತೆರವು ಕಾರ್ಯಾಚರಣೆ ಆರಂಭಿಸಿದೆ. ತಿರುವು ರಸ್ತೆಗಳ ಬದಿಯಲ್ಲಿ ಅಂಗಡಿಗಳನ್ನು ಹಾಕಿರುವ ವ್ಯಕ್ತಿಗಳಿಗೆ ನೋಟೀಸ್ ಕೂಡ ನೀಡಲಾಗಿದ್ದು, ಬೇರೆಡೆಗಳಲ್ಲಿ ವ್ಯಾಪಾರ ವಹಿವಾಟು ನಡೆಸುವಂತೆ ಸೂಚಿಸಲಾಗಿದೆ.

ಅಧಿಕಾರಿಗಳಿಂದ ಪರಿಶೀಲನೆ: ಸಾರ್ವಜನಿಕರ ದೂರುಗಳನ್ನು ಆಧರಿಸಿ ಮಂಗಳವಾರ ಹೆದ್ದಾರಿ ಪರಿಶೀಲನೆ ನಡೆಸಿದ ಅಧಿಕಾರಿಗಳು ಕೆಲವು ಅಂಗಡಿ ಮಳಿಗೆಗಳನ್ನು ಬಂದ್ ಮಾಡಿಸಿದರು. ಹೈವೇ ಪ್ರಾಧಿಕಾರದ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿರುವುದುನ್ನು ಅರಿತ ಕೆಲವು ವರ್ತಕರು ಅಂಗಡಿ ಮಳಿಗೆಗಳನ್ನು ಖಾಲಿ ಮಾಡಿದ್ದರೆ, ಮತ್ತೆ ಕೆಲವರು ತಾತ್ಕಾಲಿಕವಾಗಿ ಬಾಗಿಲು ಮುಚ್ಚಿ ಸ್ಥಳದಿಂದ ಪಲಾಯನ ಮಾಡಿರುವುದು ಕಂಡು ಬಂತು. ಇನ್ನು ಕೆಲವು ವರ್ತಕರು ಹೈವೇ ಅಧಿಕಾರಿಗಳ ಜೊತೆಯಲ್ಲಿ ನಾವು ಯಾವುದೇ ತಪ್ಪು ಮಾಡುತ್ತಿಲ್ಲ. ರಸ್ತೆ ಬದಿಯಲ್ಲಿ ತೊಂದರೆ ಆಗದಂತೆ ವ್ಯಾಪಾರ ನಡೆಸುತ್ತಿದ್ದೇವೆ. ಕೇವಲ ನಮ್ಮ ಅಂಗಡಿಯನ್ನು ಮಾತ್ರವೇ ಟಾರ್ಗೆಟ್ ಮಾಡಲಾಗುತ್ತಿದೆ. ಸಾಧ್ಯವಾದರೆ ಹೆದ್ದಾರಿ ಬದಿಯಲ್ಲಿರುವ ಎಲ್ಲಾ ಅಂಗಡಿಗಳನ್ನು ತೆರವುಗೊಳಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದುದು ಕಂಡು ಬಂದಿತು.

ಅಪಘಾತ ನಿರಂತರ: ಮಡಿಕೇರಿ ಮಾರ್ಗವಾಗಿ ಸಂಪಾಜೆ ಕಡೆಗೆ ತೆರಳುವ ಹೆದ್ದಾರಿ ಬದಿಯಲ್ಲಿ ಇಂತಹ 25ಕ್ಕೂ ಹೆಚ್ಚು ಮಳಿಗೆಗಳಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಯಾವುದೇ ಅನುಮತಿ ಪಡೆದಿಲ್ಲ. ಈ ಹೆದ್ದಾರಿಯ ತಿರುವು ರಸ್ತೆಗಳಲ್ಲಿ ಹಣ್ಣು ಮತ್ತಿತರ ವಸ್ತುಗಳನ್ನು ಖರೀದಿಸುವ ಸಲುವಾಗಿ ಗ್ರಾಹಕರು ರಸ್ತೆಯಲ್ಲೇ ವಾಹನ ನಿಲ್ಲಿಸಿ ತೆರಳುತ್ತಿರುವುದು ವಾಹನ ಅಪಘಾತಗಳಿಗೆ ಕಾರಣವಾಗುತ್ತಿದೆ. ಈ ಹೆದ್ದಾರಿಯಲ್ಲಿ ಹಲವಾರು ಅಪಘಾತ ಆಗುತ್ತಿರುವ ಕುರಿತು ಸಾರ್ವಜನಿಕರಿಂದ ದೂರುಗಳು ಕೇಳಿ ಬರುತ್ತಿದ್ದು, ಕೆಲವು ಅಪಘಾತ ಸ್ಥಳದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆ ಮತ್ತು ಆಕ್ಷೇಪಗಳಿಗೆ ವೇದಿಕೆ ಒದಗಿಸಿದೆ. ಸ್ಥಳೀಯಾಡಳಿತ ಮತ್ತು ಹೆದ್ದಾರಿ ಪ್ರಾಧಿಕಾರದ ವಿರುದ್ಧ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ನಿರಂತರ ಕಾರ್ಯಾಚರಣೆ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಹಾಯಕ ಕಾರ್ಯಪಾಲಕ ಅಭಿಯಂತರ ಗಿರೀಶ್ ಸುದ್ದಿಗಾರರೊಂದಿಗೆ ಮಾತನಾಡಿ, ಸುಂಟಿಕೊಪ್ಪದಿಂದ ಸಂಪಾಜೆವರೆಗಿನ ಹೆದ್ದಾರಿ ತೀರಾ ಕಡಿದಾದ ತಿರುವುಗಳಿಂದ ಕೂಡಿದೆ. ಪ್ರವಾಸಿಗರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಮಡಿಕೇರಿ ಕಡೆಗೆ ಆಗಮಿಸುತ್ತಾರೆ. ಇಂತಹ ತಿರುವು ರಸ್ತೆ ಬದಿಯಲ್ಲಿ ಹೆದ್ದಾರಿ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಅನಧಿಕೃತವಾಗಿ ಮಳಿಗೆಗಳನ್ನು ತೆರೆದು ವ್ಯಾಪಾರ ನಡೆಸಲಾಗುತ್ತಿದ್ದು, ಹಲವು ಅಪಘಾತಗಳು ಕೂಡ ನಡೆದಿವೆ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿ ಬರುತ್ತಿದ್ದು, ಹೈವೇ ಪ್ರಾಧಿಕಾರದಿಂದ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಹೇಳಿದರು. ಕೆಆರ್‌ಡಿಸಿಎಲ್ ನಿಯಮದಂತೆ ರಸ್ತೆ ಮಧ್ಯದಿಂದ 12 ಮೀಟರ್ ಒಳಗೆ ಯಾವುದೇ ಶೆಡ್ ಹಾಕುವಂತಿಲ್ಲ ಎಂಬ ನಿಯಮವಿದೆ. ಈ ನಿಯಮ ಪಾಲಿಸದಿರುವುದು ಕಂಡು ಬರುತ್ತಿದ್ದು, ಮುಂದಿನ ದಿನಗಳಲ್ಲಿ ಕಾನೂನು ಕ್ರಮ ಜರುಗಿಸಲು ಸಿದ್ಧತೆ ನಡೆಸಲಾಗಿದೆ ಎಂದು ಹೇಳಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯಕ ಇಂಜಿನಿಯರ್ ಹನುಮಂತು, ಮಡಿಕೇರಿ ಗ್ರಾಮಾಂತರ ಠಾಣಾ ಸಿಬ್ಬಂದಿ ಮಹೇಶ್ ಮೊದಲಾದವರು ಉಪಸ್ಥಿತರಿದ್ದರು.

ಸಿದ್ದಾಪುರ ಸೆಸ್ಕ್ ಕಚೇರಿ ಮುಂದೆ ಸಿಪಿಐ(ಎಂ) ಪ್ರತಿಭಟನೆ



ಸಿದ್ದಾಪುರ ಸೆಸ್ಕ್ ಕಚೇರಿ ಮುಂದೆ ಸಿಪಿಐ(ಎಂ) ಪ್ರತಿಭಟನೆ ನಡೆಸಿತು.

ಸಿದ್ದಾಪುರ ಮಾ.18– ಹಲವು ದಿನಗಳಿಂದ ಸಿದ್ದಾಪುರ ವ್ಯಾಪ್ತಿಯಲ್ಲಿ ನಿರಂತರವಾಗಿ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ ಎಂದು ಆರೋಪಿಸಿ ಸಿ.ಪಿ.ಐ(ಎಂ) ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ಸೆಸ್ಕ್ ಕಚೇರಿ ಮುಂದೆ ಜಮಾಯಿಸಿದ ಕಾರ್ಯಕರ್ತರು ಅಧಿಕಾರಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಸಿಪಿಐ(ಎಂ) ಪಕ್ಷದ ಸಿದ್ದಾಪುರ ಸಮಿತಿಯ ಸಂಚಾಲಕ ಎನ್.ಡಿ. ಕುಟ್ಟಪ್ಪ ಮಾತನಾಡಿ ನಿರಂತರವಾಗಿ ಈ ಭಾಗದಲ್ಲಿ ಲೋಡ್ ಶೆಡ್ಡಿಂಗ್ ಮಾಡುತ್ತಿದ್ದು, ಇದರಿಂದ ವಿದ್ಯಾರ್ಥಿಗಳು, ಸಾರ್ವಜನಿಕರು ವರ್ತಕರು ನಿರಂತರ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ವಿದ್ಯಾರ್ಥಿಗಳ ಅಂತಿಮ ಪರೀಕ್ಷೆ ನಡೆಯುತ್ತಿದ್ದು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ತಕ್ಷಣದಲ್ಲಿ ಈ ಸಮಸ್ಯೆ ಬಗ್ಗೆ ಗಮನಹರಿಸಬೇಕು ಮತ್ತು ಈ ಸಮಸ್ಯೆಯನ್ನು ತಕ್ಷಣ ಪರಿಹಾರ ಮಾಡಲು ಪ್ರಯತ್ನಿಸಬೇಕು ಮತ್ತು ಸಿದ್ದಾಪುರ ವ್ಯಾಪ್ತಿಯಲ್ಲಿ ಈಗಾಗಲೇ ಉಪಕೇಂದ್ರ ತೆರೆಯುವ ಬಗ್ಗೆ ಪ್ರಸ್ತಾಪವಿದ್ದು, ಅನುಮೋದನೆಯಾಗಿದೆ. ತಕ್ಷಣದಲ್ಲಿ ಈ ಉಪಕೇಂದ್ರದ ಕೆಲಸ ಆರಂಭಿಸಿ ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾಗಿ ಒತ್ತಾಯಿಸಿದ್ದಾರೆ.

ಸೆಸ್ಕ್ ಕಚೇರಿಯ ಅಧಿಕಾರಿ ಸ್ವರೂಪ ಅವರಿಗೆ ಇದೆ ಸಂದರ್ಭ ಮನವಿ ಪತ್ರ ಸಲ್ಲಿಸಿದರು ಇದೇ ಸಂದರ್ಭ ಸಿಪಿಐಎಂ ಪಕ್ಷದ ಸಮಿತಿ ಸದಸ್ಯ ಮುಸ್ತಫ, ಹಂಸ, ಎಸ್.ಬೈಜು, ತಂಗಚ್ಚನ್, ಅನಿಲ್ ಮುಂತಾದವರು ಹಾಜರಿದ್ದರು.

ಜನರ ಪ್ರಾರ್ಥನೆಗೆ ಒಲಿದ ವರುಣ



ಮಡಿಕೇರಿ, ಮಾ.18– ನಾಪೋಕ್ಲು ವ್ಯಾಪ್ತಿಯಲ್ಲಿ ಗುಡುಗು ಸಹಿತ ಉತ್ತಮ ಮಳೆ ಸುರಿದ ಬಗ್ಗೆ ವರದಿಯಾಗಿದೆ. ನಾಪೋಕ್ಲು ಸುತ್ತಮುತ್ತಲಿನ ಬೇತು, ಹಳೇ ತಾಲೂಕು, ಚೆರಿಯಪರಂಬು, ಚೋನಾಕೆರೆ, ಕೊಟ್ಟಮುಡಿ, ಕೊಳಕೇರಿ ಗ್ರಾಮ ವ್ಯಾಪ್ತಿಯಲ್ಲಿ ಮಂಗಳವಾರ 1 ಇಂಚಿಗೂ ಅಧಿಕ ಮಳೆಯಾಗಿದ್ದು, ಕಾದ ಭೂವಿಗೆ ತಂಪೆರೆದಿದೆ.

ಬಿಸಿಲ ಬೇಗೆಗೆ ಬಸವಳಿದಿದ್ದ ಜನರ ಪ್ರಾರ್ಥನೆಗೆ ಮಣಿದ ವರುಣ ಕೃಪೆ ತೋರಿದ್ದಾನೆ. ಏಕಾಏಕಿ ಮಳೆ ಸುರಿದ ಹಿನ್ನೆಲೆಯಲ್ಲಿ ಜನರು ಮಳೆಯಿಂದ ಅಂಗಡಿ ಮಳಿಗೆಗಳ ಮುಂದೆ ಆಶ್ರಯ ಪಡೆದಿದ್ದು ಕಂಡು ಬಂತು. ನಾಪೋಕ್ಲು ಸುತ್ತಮುತ್ತಲಿನ ಗ್ರಾಮಗಳಿಗೆ ಕಳೆದ ಎರಡು ದಿನಗಳಿಂದ ಮಳೆಯಾಗುತ್ತಿದ್ದು, ಸೆಕೆಯ ವಾತಾವರಣಕ್ಕೆ ಕೊಂಚ ಬ್ರೇಕ್ ಬಿದ್ದಿದೆ. ಕಾಫಿ ಕುಯ್ಲು ಕಾರ್ಯ ಮುಕ್ತಾಯವಾಗಿದ್ದು ಇದೀಗ ಸುರಿಯುತ್ತಿರುವ ಮಳೆಯಿಂದ ಗಿಡದಲ್ಲಿ ಕಾಫಿ ಮೊಗ್ಗುಗಳು ಅರಳಲು ಸಹಕಾರಿಯಾಗಲಿವೆ.

ತಲಕಾವೇರಿಗೆ ಉಪಮುಖ್ಯಮಂತ್ರಿ



ಮಡಿಕೇರಿ, ಮಾ.18– ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ ಶಿವಕುಮಾರ್ ಅವರ ಇದೇ ಮಾ.27ರಂದು ತಲಕಾವೇರಿ ಸನ್ನಿಧಿಗೆ ಆಗಮಿಸಲಿದ್ದಾರೆ. ಬೆಳಗ್ಗೆ 8 ಗಂಟೆಗೆ ಹೆಲಿಕಾಪ್ಟರ್ ಮೂಲಕ ಭಾಗಮಂಡಲದ ಕಾವೇರಿ ಪದವಿ ಪೂರ್ವ ಕಾಲೇಜಿನ ಹೆಲಿಪ್ಯಾಡ್‌ಗೆ ಆಗಮಿಸಲಿರುವ ಉಪ ಮುಖ್ಯಮಂತ್ರಿಗಳೊಂದಿಗೆ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮತ್ತು ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್‌ಗೌಡ ಪಾಲ್ಗೊಳ್ಳಲಿದ್ದಾರೆ. ಕಾವೇರಿ ಮಾತೆಯ ಸನ್ನಿಧಿಯಲ್ಲಿ ಕಾವೇರಿ ಆರತಿ ಕಾರ್ಯಕ್ರಮದ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿ ಕಾವೇರಿಯ ಪವಿತ್ರ ತೀರ್ಥದೊಂದಿಗೆ ಬೆಂಗಳೂರಿಗೆ ಹಿಂದಿರುಗುವರು.

ಬಿಟ್ಟಂಗಾಲ ಗ್ರಾಪಂ ವ್ಯಾಪ್ತಿಯಲ್ಲಿ ಕಾಡಾನೆ ಉಪಟಳ



ಮಡಿಕೇರಿ, ಮಾ.18– ವಿರಾಜಪೇಟೆ ತಾಲೂಕು ಬಿಟ್ಟಂಗಾಲ ಗ್ರಾಪಂ ವ್ಯಾಪ್ತಿಯ ವಿ.ಬಾಡಗ ಪೊದುಕೇರಿ ಪಂದ್ಯನ್‌ಪಾಡ್ ಎಂಬಲ್ಲಿ ಎರಡು ದಿನಗಳಿಂದ ಕಾಡಾನೆಗಳು ಕಾಫಿ ತೋಟಗಳಲ್ಲೇ ಬೀಡು ಬಿಟ್ಟು ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿ ಬೆಳೆದಿರುವ ಬೆಳೆಗಳನ್ನು ನಾಶಪಡಿಸಿವೆ. ಕಾಡಾನೆಗಳ ಉಪಟಳಕ್ಕೆ ಕಾಫಿ ಗಿಡಗಳು, ಅಡಿಕೆ ಮರಗಳು, ಬಾಳೆ ತೆಂಗು ಹಾಗೂ ಇನ್ನಿತರ ಫಸಲು ನೀಡುತ್ತಿರುವ ಗಿಡಗಳನ್ನು ಹಾನಿಗೊಳಿಸಿವೆ. ಇದೀಗ ಕಾಫಿ ತೋಟಗಳಿಗೆ ನೀರು ಹಾಯಿಸಲಾಗುತ್ತಿದ್ದು, ಸ್ಪ್ರಿಂಕ್ಲರ್ ಪೈಪ್‌ಗಳನ್ನು ಕಾಡಾನೆಗಳು ತುಳಿದು ಜಖಂಗೊಳಿಸಿವೆ.

ಕಾಡಾನೆಯ ಉಪಟಳದಿಂದ ಬೇಸತ್ತ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಘಟನಾ ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಆಗಮಿಸುವಂತೆ ಪಟ್ಟು ಹಿಡಿದರು. ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸಂತ್ರಸ್ತ ಗ್ರಾಮಸ್ಥರೊಂದಿಗೆ ಘಟನೆಯ ಬಗ್ಗೆ ಚರ್ಚಿಸಿದರು. ಹಲವಾರು ಬಾರಿ ಕಾಡಾನೆ ಹಾವಳಿ ಕುರಿತು ಅರಣ್ಯ ಇಲಾಖೆಗೆ ಮನವಿ ಮಾಡಿದರೂ ಯಾವುದೇ ರೀತಿಯಲ್ಲೂ ಸ್ಪಂದಿಸಿಲ್ಲ . ಕಾಫಿ ತೋಟಕ್ಕೆ ನೀರು ಹಾಯಿಸಲು ಅಳವಡಿಸಲಾಗಿರುವ ಪೈಪ್‌ಗಳನ್ನು ಕಾಡಾನೆಗಳು ತುಳಿದು ಜಖಂಗೊಳಿಸಿವೆ. ಕಾಫಿ ಸಹಿತ ಇತರ ಫಸಲು ಅಪಾರ ಪ್ರಮಾಣದಲ್ಲಿ ನಾಶವಾಗಿದ್ದು, ನಷ್ಟ ಸಂಭವಿಸಿದೆ. ಕಾರ್ಮಿಕರು ಕಾಡಾನೆಗಳ ಮತ್ತು ವನ್ಯ ಮೃಗಗಳ ದಾಳಿಯ ಹೆದರಿಕೆಯಿಂದ ತೋಟಗಳಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಇದಕ್ಕೆಲ್ಲ ಅರಣ್ಯ ಇಲಾಖೆ ನೀತಿಯೇ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭ ಪ್ರತಿಕ್ರಿಯಿಸಿದ ಅರಣ್ಯ ಅಧಿಕಾರಿ ಸಂತೋಷ್ ಹೂಗಾರ್, ಅರಣ್ಯ ಅಂಚಿನಲ್ಲಿ ಕಂದಕ ನಿರ್ಮಾಣ ಅಪೂರ್ಣಗೊಂಡಿರುವುದು ಮತ್ತು ಸೋಲಾರ್ ಬೇಲಿ ನಿರ್ವಹಣೆ ಬಗ್ಗೆ ದೂರು ಬಂದಿರುವ ಹಿನ್ನೆಲೆಯಲ್ಲಿ ಮೇಲಾಧಿಕಾರಿಗಳಿಗೆ ಸ್ಥಿತಿಯ ಬಗ್ಗೆ ಪತ್ರ ಬರೆಯಲಾಗುತ್ತದೆ. ಕಂದಕ ನಿರ್ಮಾಣ ಕಾರ್ಯ ಮುಂದುವರೆಸಲಾಗುತ್ತದೆ ಎಂದು ಹೇಳಿದರು. ಸೋಲಾರ್ ಬೇಲಿಯಲ್ಲಿ ತಾಂತ್ರಿಕ ದೋಷಗಳು ಕಂಡು ಬಂದಿದ್ದು, ಶೀಘ್ರದಲ್ಲಿ ನ್ಯೂನತೆ ಸರಿಪಡಿಸಲಾಗುವುದು. ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು ಎಂದು ಹೇಳಿದರು.

ಈ ಸಂದರ್ಭ ಗ್ರಾಮಸ್ಥರಾದ ಕಂಜಿತಂಡ ಪೂವಣ್ಣ, ಧರ್ಮಜಾ ಚೆಂಗಪ್ಪ ಚರಣ್, ಚೇಮಿರ ಕಾಶಿ, ಪ್ರಕಾಶ್ ಪೂವಯ್ಯ, ಮಳವಂಡ ಗಿರೀಶ್, ಅನೂಪ್ ಗಣಪತಿ, ತಮ್ಮಯ್ಯ, ಕಲನ್, ಬೋಪಯ್ಯ ಮತ್ತಿತರರು ಹಾಜರಿದ್ದರು.

ಮೀಟರ್ ಬಡ್ಡಿ ದಂಧೆ: ಮಾಂಸ ಮಾರಾಟಗಾರನ ಬಂಧನ

18 ಖಾಲಿ ಚೆಕ್, 10 ವಾಹನಗಳ ದಾಖಲೆ, 3 ಆಸ್ತಿ ಪತ್ರ, ಡೈರಿಗಳ ವಶ



ಮಾರಿಪುಟ್ಟ

ಕೊಳ್ಳೇಗಾಲ, ಮಾ.18– ಮೀಟರ್ ಬಡ್ಡಿ ದಂಧೆ ನಡೆಸುತ್ತಿದ್ದ ವ್ಯಕ್ತಿಯೋರ್ವನನ್ನು ಬಂಧಿಸಿರುವ ಪಟ್ಟಣ ಠಾಣಾ ಪೊಲೀಸರು ಬಂಧಿತನಿಂದ 18 ಖಾಲಿ ಚೆಕ್, 10 ವಾಹನಗಳ ಮೂಲ ದಾಖಲಾತಿ ಪತ್ರ, 3 ನಿವೇಶನ ದಾಖಲಾತಿಗಳು, 5 ಗ್ರಾಂ ಚಿನ್ನ, ಸಾಲ ಹಾಗೂ ಅಧಿಕ ಬಡ್ಡಿಯ ಬಗ್ಗೆ ನಮೂದಿರುವ 7 ರಿಜಿಸ್ಟರ್ ಪ್ರತಿ, 3 ಡೈರಿ ಸೇರಿದಂತೆ ಇನ್ನಿತರ ದಾಖಲೆಗಳನ್ನು ವಶಪಡಿ ಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮಾರಿಪುಟ್ಟ ಬಿನ್ ಲೇಟ್ ಮೂಗೂರು ಮಹದೇವ (51 ವರ್ಷ) ಎಂಬಾತ ಅಧಿಕ ಬಡ್ಡಿ ದಂಧೆ ನಡೆಸುತ್ತಿದ್ದು, ದಾಖಲೆ ಸಮೇತ ಪೊಲೀಸರಿಗೆ ಸಿಕ್ಕಿಬಿದ್ದ ಆರೋಪಿ. ಈತ ದೊಡ್ಡ ನಾಯಕರ ಬೀದಿವಾಸಿಯಾಗಿದ್ದು, ಪೂಜಾ ಎಂಬ ಹೆಸರಿನ ಮಾಂಸದ ಅಂಗಡಿ ನಡೆಸುತ್ತಿದ್ದ ಎನ್ನಲಾಗಿದೆ.

ಈತ ಬಡ್ಡಿಗಾಗಿ ಸಾರ್ವಜನಿಕರಿಗೆ ಸಾಲ ನೀಡಿ ದುಪ್ಪಟ್ಟು ಬಡ್ಡಿಗಾಗಿ ಕಿರುಕುಳ ನೀಡುತ್ತಿದ್ದನೆನ್ನಲಾಗಿದ್ದು, ಸಾರ್ವಜನಿಕರಿಂದ ಬಂದ ದೂರಿನ ಹಿನ್ನೆಲೆಯಲ್ಲಿ ಆತನನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವೀರೇಂದ್ರ ನೇತೃತ್ವದಲ್ಲಿ ಸಬ್ ಇನ್ಸ್‌ಪೆಕ್ಟರ್ ವರ್ಷ, ಇನ್ನಿತರರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಬಂಧಿತನ ವಿರುದ್ಧ ನೊಂದ ಆಟೋ ಚಾಲಕರು, ಕೂಲಿ ಕಾರ್ಮಿಕರು ಪಟ್ಟಣ ಪೊಲೀಸರಿಗೆ ದೂರು ನೀಡಿದ್ದ ಹಿನ್ನೆಲೆ ಪೊಲೀಸರು ಕ್ರಮಕೈಗೊಂಡಿದ್ದಾರೆ. ಬಂಧಿತ ಆರೋಪಿ 26 ಜನರಿಗೆ ಹಣವನ್ನು ಸಾಲದ ರೂಪದಲ್ಲಿ ನೀಡಿ ಅವರಿಂದ ಸಹಿ ಇರುವ ಖಾಲಿ ಚೆಕ್‌ಗಳನ್ನು ಪಡೆದುಕೊಂಡು ಆಗಿಂದಾಗ್ಗೆ ಕಿರುಕುಳ ನೀಡುತ್ತಿದ್ದ ಎನ್ನಲಾಗಿದೆ. ಅಲ್ಲದೆ 35 ಸಾವಿರ ಮೌಲ್ಯದ 5 ಗ್ರಾಂ ತೂಕದ ಚಿನ್ನವನ್ನು ಸಹಾ ವ್ಯಕ್ತಿಯೋರ್ವರಿಂದ ಗಿರವಿ ಇಟ್ಟುಕೊಂಡಿದ್ದ, 10ಮಂದಿಯಿಂದ ಫಾರಂ ನಮೂನೆ 29 ಇದಕ್ಕೆ ಸಹಿ ಪಡೆದಿರುವ ಅಸಲು ಆರ್ ಸಿ ಕಾರ್ಡ್ ಹಾಗೂ ವಾಹನ ದಾಖಲಾತಿಗಳು ಮತ್ತು 3 ಜನರಿಂದ ನಿವೇಶನ ದಾಖಲಾತಿಗಳನ್ನು ಆಧಾರವಾಗಿಟ್ಟುಕೊಂಡಿರುವ ಆಧಾರಪತ್ರ ಹಾಗೂ ಇವುಗಳನ್ನು ಪಡೆದು ಸಾಲ ವಾಪಸ್ಸು ನೀಡದ ಪಕ್ಷದಲ್ಲಿ ಅವುಗಳನ್ನು ತನ್ನ ಹೆಸರಿಗೆ ಮಾಡಿಸಿಕೊಳ್ಳುವ ದಾಖಲಾತಿಗಳನ್ನು ಹೊಂದಿದ್ದ ಎನ್ನಲಾಗಿದೆ.

ಅಲ್ಲದೆ ಜನರಿಗೆ ಸಾಲ ನೀಡಿ ಬಡ್ಡಿ ಸಂಗ್ರಹಿಸಿರುವ ಬಗ್ಗೆ ನಮೂದಿರುವ 7 ರಿಜಿಸ್ಟರ್‌ಗಳು ಮತ್ತು 3 ಡೈರಿಗಳು ಇದ್ದು ಅವುಗಳಲ್ಲಿ ಕಂತುಗಳ ರೂಪದಲ್ಲಿ ಬಡ್ಡಿ– ಅಸಲು ಸಂಗ್ರಹಿರುವ ಬಗ್ಗೆ ನಮೂದಾಗಿರುವುದು ಅವುಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಂಡಿದ್ದಾರೆ.

ವೈ.ಕೆ.ಮೋಳೆ ಗ್ರಾಮದಲ್ಲಿ ವಿಜೃಂಭಣೆಯ ಶ್ರೀ ಚಾಮುಂಡೇಶ್ವರಿ ಕೊಂಡೋತ್ಸವ



ಯಳಂದೂರು, ಮಾ.18– ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಉಪ್ಪಾರ ಬಡಾವಣೆಯಲ್ಲಿ ಶ್ರೀದೊಡ್ಡಮ್ಮತಾಯಿ, ಶ್ರೀಚಿಕ್ಕಮ್ಮತಾಯಿ, ಶ್ರೀಚಾಮುಂಡೇಶ್ವರಿ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಇತ್ತೀಚೆಗೆ ವಿಜೃಂಭಣೆಯಿಂದ ಜರುಗಿತು.

ಕೊಂಡೋತ್ಸವ ಹಿನ್ನೆಲೆಯಲ್ಲಿ ಗುರುವಾರವೇ ಕೊಂಡಕ್ಕೆ ಬೇಕಾದ ಸೌದೆಯನ್ನು ಮೆರವಣಿಗೆ ಮೂಲಕ ಗ್ರಾಮಕ್ಕೆ ತರಲಾಗಿತ್ತು. ಭಾನುವಾರ ಸಂಜೆ ದೇವಸ್ಥಾನದ ಮುಂಭಾಗ ಸೌದೆಯನ್ನು ರಾಶಿ ಹಾಕಲಾಗಿತ್ತು. ಮಧ್ಯರಾತ್ರಿ ಕೊಂಡದ ಸೌದೆಯ ರಾಶಿಗೆ ಪೂಜೆ ಸಲ್ಲಿಸಿ ಬೆಂಕಿ ಹಾಕಲಾಗಿತ್ತು. ಸೋಮವಾರ ಮಧ್ಯಾಹ್ನ ದೇವರ ಉತ್ಸವಮೂರ್ತಿಯನ್ನು ಅಂಬಳೆ ಕೆರೆಗೆ ಕೊಂಡೊಯ್ದು ವಿವಿಧ ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಅಂಬಳೆ ಕೆರೆಯಿಂದ ಮೆರವಣಿಗೆ ಮೂಲಕ ಗ್ರಾಮಕ್ಕೆ ಬಂದು ದೇವಸ್ಥಾನದ ಮುಂಭಾಗ ಮೂವರು ತಮ್ಮಡಿಗಳು ಕೊಂಡವನ್ನು ಹಾಯ್ದರು.

ಕೊಂಡೋತ್ಸವದ ಬಳಿಕ ದೇವಸ್ಥಾನದ ಮುಂಭಾಗ ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಹಬ್ಬದ ಹಿನ್ನೆಲೆಯಲ್ಲಿ ದೇವಸ್ಥಾನ ಹಾಗೂ ಪ್ರಮುಖ ಬೀದಿಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಿತು.

ಬಿಳಿಗಿರಿರಂಗನಬೆಟ್ಟದ ವಿವಿಧ ಪೋಡುಗಳಿಂದ ಸೋಲಿಗರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಆಗಮಿಸಿ ಕೊಂಡೋತ್ಸವವನ್ನು ಕಣ್ತುಂಬಿ ಕೊಂಡರು. ಮಂಗಳವಾರ ಬೆಳಗ್ಗೆ ದೇವರ ಉತ್ಸವಮೂರ್ತಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಮಂಟೇಸ್ವಾಮಿ ಕೊಂಡೋತ್ಸವ: ವೈ.ಕೆ.ಮೋಳೆ ಗ್ರಾಮದ ಪರಿಶಿಷ್ಟ ಜನಾಂಗದ ಬಡಾವಣೆಯಲ್ಲಿ ಸೋಮವಾರ ಬೆಳಗ್ಗೆ ಶ್ರೀಮಂಟೇಸ್ವಾಮಿ ಕೊಂಡೋತ್ಸವ ಜರುಗಿತು. ಗ್ರಾಮದ ಹೊರವಲಯಕ್ಕೆ ಉತ್ಸವ ಮೂರ್ತಿಯನ್ನು ಕೊಂಡೊಯ್ದು ವಿವಿಧ ಹೂವುಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. ಬಳಿಕ ಮೆರವಣಿಗೆಯಲ್ಲಿ ತೆರಳಿ ದೇವಸ್ಥಾನದ ಮುಂಭಾಗ ಹಾಕಿದ್ದ ಕೊಂಡವನ್ನು ಹಾಯುವ ಮೂಲಕ ಕೊಂಡೋತ್ಸವ ಜರುಗಿತು. ಒಂದೇ ದಿನ ಎರಡು ಸಮುದಾಯಗಳಲ್ಲಿ ಕೊಂಡೋತ್ಸವ ನಡೆಯುವುದು ಇಲ್ಲಿನ ವಿಶೇಷ.

ಅಪ್ಪು ಚೆನ್ನಾಗಿದಿಯಾ ಮಗನೇ? ಒಂದ್ ಸಾರಿ ಬಂದ್ ನೋಡ್ಕೊಂಡು ಹೋಗು ಕಂದಾ...

ಸೋದರತ್ತೆ ನಾಗಮ್ಮರಿಗೆ ಅಪ್ಪುವಿನ ಸಾವಿನ ಸುದ್ದಿ ಇನ್ನೂ ತಿಳಿದಿಲ್ಲ



ಚಾಮರಾಜನಗರ, ಮಾ.18– ಕನ್ನಡಿಗರ ಅಚ್ಚುಮೆಚ್ಚಿನ ನಟ ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿ 3 ವರ್ಷ ಕಳೆದಿದ್ದರೂ, ಅವರ ಸೋದರತ್ತೆ (ಡಾ. ರಾಜ್‌ಕುಮಾರ್ ತಂಗಿ) ನಾಗಮ್ಮ ಅವರಿಗೆ ಆ ವಿಷಯವನ್ನು ತಿಳಿಸಿಲ್ಲದ ಕಾರಣ ಅವರು ಅಪ್ಪು ಚೆನ್ನಾಗಿದಿಯಾ ಮಗನೇ? ಒಂದ್ ಸಾರಿ ಬಂದ್ ಹೋಗು ಕಂದ ಎಂದು ಅಕ್ಕರೆಯಿಂದ ಹೇಳುವ ವಿಡಿಯೋ ಇದೀಗ ವೈರಲ್ ಆಗಿದೆ.

ಡಾ. ರಾಜ್‌ಕುಮಾರ್ ಅವರ ಹುಟ್ಟೂರು ಗಾಜನೂರಿನಲ್ಲಿ ತಮ್ಮ ಪುತ್ರ ಗೋಪಾಲ್ ಅವರೊಂದಿಗೆ ನಾಗಮ್ಮ ವಾಸಿಸುತ್ತಿದ್ದಾರೆ. ನಾಗಮ್ಮ ಅವರು ವಯೋವೃದ್ಧರಾಗಿದ್ದು, ಪುನೀತ್ ಮೃತರಾದ ಸಂದರ್ಭದಲ್ಲಿ ಅನಾರೋಗ್ಯಕ್ಕೀಡಾಗಿದ್ದರು. ಹಾಗಾಗಿ ಮನೆಯವರು ಅವರಿಗೆ ಪುನೀತ್ ಸಾವಿನ ಸುದ್ದಿ ತಿಳಿಸಿರಲಿಲ್ಲ. ಅದಾದ ಬಳಿಕವೂ ಅಪ್ಪು ಸಾವಿನ ಸುದ್ದಿಯಿಂದ ಆಘಾತಕ್ಕೊಳಗಾಗಬಹುದೆಂದು ಅವರಿಗೆ ಈವರೆಗೂ ಮನೆಯವರು ವಿಷಯ ತಿಳಿಸಿಲ್ಲ. ಹೀಗಾಗಿ ನಾಗಮ್ಮ ಅವರು ಅಪ್ಪು ಇನ್ನೂ ಬದುಕಿದ್ದಾರೆಂದು ನಂಬಿದ್ದಾರೆ. ಪುನೀತ್ ಅವರು ತಮ್ಮ ಸಾಕ್ಷ್ಯ ಚಿತ್ರ ಗಂಧದಗುಡಿ ಚಿತ್ರೀಕರಣ ಸಂದರ್ಭದಲ್ಲಿ ಕೊನೆಯ ಬಾರಿ ಗಾಜನೂರಿಗೆ ಬಂದು ಆಗ ತಮ್ಮ ಸೋದರತ್ತೆಯನ್ನು ಮಾತನಾಡಿಸಿಕೊಂಡು ಹೋಗಿದ್ದರು.

ಸೋಮವಾರ ಪುನೀತ್ ಅವರ 50ನೇ ಹುಟ್ಟುಹಬ್ಬವಾಗಿದ್ದು, ವಿಡಿಯೋ ಒಂದರಲ್ಲಿ ನಾಗಮ್ಮ ಪುನೀತ್‌ಗೆ ಶುಭ ಹಾರೈಸಿದ್ದಾರೆ. ಅದರಲ್ಲಿ, ಅಪ್ಪು 50 ವರ್ಷ ಆಗೋಯ್ತು ನಿನಗೆ. ಅಪ್ಪಪ್ಪ ಚೆನ್ನಾಗಿದಿಯಾ ಮಗನೇ? ಇನ್ನೂ ಮಗು ಅನ್ಕೊಂಡಿದೀನಿ ನಾನು. ಒಂದ್ ಸಾರಿ ಬಂದ್ ನೋಡ್ಕೊಂಡು ಹೋಗು ಕಂದ ನನ್ನ. ನಿನ್ನ ನೋಡ್‌ಬುಡ್ತೀನಿ, ಇಷ್ಟುದ್ದನೇ ಇದಿಯಾ, ದೊಡ್ಡೋನಾಗಿದಿಯಾ ನೋಡ್‌ಬುಡ್ತೀನಿ ಎಂದು ಹೇಳಿದ್ದಾರೆ.

ಭೂಮಿಗೆ ಬಂದ ಭಗವಂತ ಶೂಟಿಂಗ್‌ನಲ್ಲಿ ಫಾರಿನರ್ಸ್ ಬಂದು ತುಂಬಿಕೊಂಡರು. ನಿನ್ನ ಫೋಟೋಗಳನ್ನು ತೆಗೆದುಕೊಂಡರು. ನಮಸ್ಕಾರ ಮಾಡಿದರು. ಬರಿ ಮೈನಲ್ಲಿ ದಾನಲ್ಲಪ್ಪ ಅಂತ ಆಶ್ಚರ್ಯಪಟ್ರು ಫೋಟೋ ತೆಗೆದ್ರು ತೆಗೆದ್ರೂ, ಗಾಡ್ ಗಾಡ್ ಅಂದರು. ಅವತ್ತು ಶೂಟಿಂಗೇ ಮಾಡಲಿಲ್ಲ ಎಂದು ನಾಗಮ್ಮ ನೆನೆಸಿಕೊಂಡಿದ್ದಾರೆ.

ಈ ವಿಡಿಯೋ ತುಣುಕಿನಲ್ಲಿ ನಾಗಮ್ಮ ಅವರು ತಮ್ಮ ಅಣ್ಣನ ಮಗನನ್ನು ಬಹಳ ಪ್ರೀತಿಯಿಂದ ಕಕ್ಕುಲಾತಿಯಿಂದ ಕಂದ ಬಂದು ನನ್ನ ನೋಡಿಕೊಂಡು ಹೋಗು ಎಂದು ಹೇಳುವ ಸಂದರ್ಭವನ್ನು ನೋಡಿದವರ ಮನಸ್ಸು ಮಿಡಿಯುತ್ತದೆ. ಕಣ್ಣು ತುಂಬಿ ಬರುತ್ತದೆ. ಹೀಗಾಗಿ ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ನಾಳೆ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ

ಚಾಮರಾಜನಗರ, ಮಾ.18– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಾ.20 ರಂದು ನಗರದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದವರೆಗೆ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಭಾವಚಿತ್ರ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 12.30 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ

ಅಧ್ಯಯನಶೀಲತೆ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಋಗ್ವೇದಿ ಕರೆ



ಜೆಎಸ್‌ಎಸ್ ಮಹಾವಿದ್ಯಾಪೀಠ ಜೆಎಸ್‌ಎಸ್ ಕಾಲೇಜು ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ ಉದ್ಘಾಟಿಸಿದರು.

ಚಾಮರಾಜನಗರ, ಮಾ.18– ವಿದ್ಯಾರ್ಥಿಗಳು ಅಧ್ಯಯನಶೀಲತೆಯ ಜೊತೆಗೆ ಕ್ರಿಯಾಶೀಲ ಬರವಣಿಗೆ ಹಾಗೂ ಸಂವಹನ ಪ್ರಕ್ರಿಯೆಯನ್ನು ಉತ್ತಮಪಡಿಸಿಕೊಂಡಾಗ ಮಾತ್ರ ಜೀವನದಲ್ಲಿ ಗುರಿಯನ್ನು ಸಾಧಿಸಬಹುದು. ವೃತ್ತಿಯಲ್ಲಿ ಶ್ರೇಷ್ಠ ಗೌರವಕ್ಕೆ ಪಾತ್ರವಾಗಬಹುದೆಂದು ಎಂದು ಸಂಸ್ಕೃತಿ ಚಿಂತಕ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ ತಿಳಿಸಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠ ಜೆಎಸ್‌ಎಸ್ ಕಾಲೇಜು ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಕ್ರಿಯಾಶೀಲ ಬರವಣಿಗೆ ಹಾಗೂ ಸಮನ್ವಯ ಮಾಧ್ಯಮ ಕಾರ್ಯಾಗಾರವನ್ನು ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ಅಂಕಗಳಷ್ಟೇ ಪ್ರಮುಖವಾದ ಪಾತ್ರವನ್ನು ಸಂವಹನ ಮತ್ತು ಬರವಣಿಗೆ ವೃತ್ತಿಪರತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉತ್ತಮ ಬರವಣಿಗೆ ಹಾಗೂ ಸಂವಹನ ಕಲೆ ವ್ಯಕ್ತಿಯನ್ನು ಪರಿಣಾಮಕಾರಿಯಾಗಿ ರೂಪಿಸುತ್ತದೆ. ಬರವಣಿಗೆಯು ಸಂಸ್ಕೃತಿ, ಪರಂಪರೆ ಹಾಗೂ ಚಿಂತನೆಗೆ ಸ್ಫೂರ್ತಿಯನ್ನು ನೀಡಿ ಸೃಜನಶೀಲ ಬರವಣಿಗೆಗೆ ಅವಕಾಶ ಮಾಡಿಕೊಡುತ್ತದೆ ಎಂದರು.

ಸಂವಹನ ಪ್ರಕ್ರಿಯೆ ಇಂದು ತುಂಬಾ ಅಗತ್ಯವಿದೆ. ಮೊಬೈಲ್‌ನ ಪ್ರಭಾವಕ್ಕೆ ಒಳಗಾಗದೆ ಅಧ್ಯಯನ ಹಾಗೂ ಬರವಣಿಗೆ ಮತ್ತು ಪ್ರತಿಯೊಬ್ಬರಲ್ಲಿಯೂ ಉತ್ತಮ ಮಾತುಗಳನ್ನು ಆಡುವ ಮೂಲಕ ಮನುಷ್ಯ ಜೀವನವನ್ನು ಉತ್ತಮಪಡಿಸಿಕೊಳ್ಳಲು, ಆನಂದದಿಂದ ಬದುಕಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿದ್ದ ಮೈಸೂರಿನ ಎ ಎಸ್ ರಘುರಾಮ್ ಮಾತನಾಡಿ, ಬದುಕು ಕಟ್ಟಿಕೊಳ್ಳಲು ಕ್ರಿಯಾಶೀಲ ಬರವಣಿಗೆ ಬೇಕಾಗುತ್ತದೆ ಒಳ್ಳೆಯ ಮಾತು ಕೆಟ್ಟ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ನಮ್ಮ ವಿವೇಚನೆಗೆ ಬಿಟ್ಟಿದ್ದು. ಮನಸು ಕೆಟ್ಟದ್ದನ್ನು ಬೇಗ ಬಯಸುತ್ತದೆ. ಆದರೆ ನಮ್ಮ ಇಂದ್ರಿಯ ನಿಗ್ರಹದ ಮೂಲಕ ಉತ್ತಮವಾದ ವಾತಾವರಣವನ್ನು, ಉತ್ತಮ ಪ್ರಕ್ರಿಯೆಗಳನ್ನು, ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕು ಎಂದರು. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಅರಿತು ಶಿಕ್ಷಣದ ಹಂತದಲ್ಲಿಯೇ ಉದ್ಯೋಗದ ಮೂಲಕ ಗಳಿಕೆಯ ಕಡೆಗೂ ಗಮನಹರಿಸಬೇಕು. ಓದುವ ಹವ್ಯಾಸವು ಬರವಣಿಗೆಗೂ ದಾರಿಯನ್ನು ತೋರಿಸುತ್ತದೆ. ಸಂವಹನ ಮಾಧ್ಯಮ ಶೈಕ್ಷಣಿಕ ಹಂತದಲ್ಲಿ, ವೃತ್ತಿಪರತೆಯಲ್ಲಿ ಕಾರ್ಯ ವ್ಯಾಪ್ತಿಯಲ್ಲಿ ಬಹಳ ಪ್ರಭಾವ ಬೀರುತ್ತದೆ ಎಂದು ತಿಳಿಸಿದರು.

ಮಾ.25, ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಬ್ರಹ್ಮ ರಥೋತ್ಸವ, ಜಾತ್ರೆ

ಚಾಮರಾಜನಗರ, ಮಾ.18– ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಾ.25ರಂದು ಬ್ರಹ್ಮ ರಥೋತ್ಸವ ಹಾಗೂ ಜಾತ್ರೆ ನಡೆಯಲಿದೆ ರಥೋತ್ಸವ ಅಂಗವಾಗಿ 22ರಿಂದ 28ರವರೆಗೆ ದೇವಸ್ಥಾನದಲ್ಲಿ ವಿಶೇಷ ಕಾರ್ಯಕ್ರಮ ನಡೆಯಲಿವೆ.

ಮಾ.22 ರಂದು ಬೆಳಗ್ಗೆ ಶ್ರೀಯವರಿಗೆ ಫಲ ಪಂಚಾಮೃತಾಭಿಷೇಕ, ಸಂಜೆ ಆದಿವಾಸರ, ಅಂಕುರಾರ್ಪಣ ಗರುಡ ಪ್ರತಿಷ್ಠಾ ರಕ್ಷಾಬಂಧನ. ಮಾ.23 ರಂದು ಬೆಳಿಗ್ಗೆ ಉತ್ಸವ, ಪುಷ್ಪಬಲಿ, ಧ್ವಜಾರೋಹಣ, ಸಂಜೆ ಭೇರಿತಾಡನ ಯಾಗಶಾಲಾ ಪ್ರವೇಶ. ಮಾ.24 ರಂದು ಬೆಳಗ್ಗೆ ಶ್ರೀಯವರ ಉತ್ಸವ, ಸಂಜೆ 4 ಗಂಟೆಗೆ ಕಾಶಿಯಾತ್ರಾ ಉತ್ಸವ ಸಂಬಂಧ ಮಾಲಾ ಪೂರ್ವಕ ಶ್ರೀ ರುಕ್ಮಿಣಿ ಸತ್ಯಭಾಮ ಸಹಿತ ಶ್ರೀ ಹಿಮವದ್ ಗೋಪಾಲಸ್ವಾಮಿ ಯವರ 'ದಿವ್ಯಕಲ್ಯಾಣೋತ್ಸವ'. ಮಾ.25 ರಂದು ಬೆಳಿಗ್ಗೆ 'ಶ್ರೀಯವರ ದಿವ್ಯ ಬ್ರಹ್ಮ ರಥೋತ್ಸವ, ಸಂಜೆ ಶಾಂತ್ಯುತ್ಸವ. ಮಾ.26 ರಂದು ಬೆಳಗ್ಗೆ ಉತ್ಸವ ಕೈಂಕರ್ಯ ಮತ್ತು ಬೆಳ್ಳಿ ಗರುಡೋತ್ಸವ ಸಂಜೆ ಡೋಲೋತ್ಸವ ಶಯನೋತ್ಸವ. ಮಾ.27ರಂದು ಸಂಧಾನ ಲೀಲೋತ್ಸವ, ಅವಭೃತ ಸ್ನಾನ, ಸಂಜೆ ಉತ್ಸವ, ಫಣಿಮಾಲಾ ಪ್ರಬಂಧಸೇವೆ. ಪೂರ್ಣಾಹುತಿ. ಮಾ.28 ರಂದು ಬೆಳಗ್ಗೆ ಮಹಾಭಿಷೇಕ, ಮಹಾಮಂಗಳಾರತಿ, ದ್ವಾದಶಾರಾಧನಾ, ಪುಷ್ಪಯಾಗ ಧ್ವಜಾವರೋಹಣ, ಉಧ್ವಾಸನ ಪ್ರಬಂಧ ಸೇವೆ ಸೇತೂ ಸೇವೆ ಮೂಕಬಲಿ ವಿಶೇಷ ಉತ್ಸವ ಕಾರ್ಯಕ್ರಮಗಳು ನಡೆಯಲಿದೆ. ದೇವರ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳು ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಹೊರತುಪಡಿಸಿ ಇತರೆ ವಾಹನಗಳಲ್ಲಿ ಬರುವ ಭಕ್ತಾದಿಗಳು, ಸಾರ್ವಜನಿಕರು ತಮ್ಮ ವಾಹನಗಳನ್ನು ಅರಣ್ಯ ಇಲಾಖೆ ಚೆಕ್‌ಪೋಸ್ಟ್ ಮೈದಾನದಲ್ಲಿ ಪಾರ್ಕಿಂಗ್ ಮಾಡಬೇಕು. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ನಿಗದಿತ ದರ ಪಾವತಿಸಿ ದೇವರ ದರ್ಶನಕ್ಕೆ ಹೋಗಿ ಬರುವ ವ್ಯವಸ್ಥೆ ಮಾಡಲಾಗಿದೆ ಎಂದು ಗುಂಡ್ಲುಪೇಟೆ ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ತಡರಾತ್ರಿ ನಡುರಸ್ತೆಯಲ್ಲಿ ಲಾಂಗ್ ಹಿಡಿದು ಅಟ್ಟಹಾಸ

ಇಬ್ಬರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮಾ.18(ಎಸ್‌ಬಿಡಿ)– ರೌಡಿಶೀಟರ್‌ವೊಬ್ಬ ತಡರಾತ್ರಿ ನಡುರಸ್ತೆಯಲ್ಲೇ ಲಾಂಗ್ ಹಿಡಿದು ಸಹಚರನೊಂದಿಗೆ ಜಗಳವಾಡಿರುವ ಘಟನೆ ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಕೆ.ಜಿ.ಕೊಪ್ಪಲು ಸಿದ್ದಪ್ಪಾಜಿ ದೇವಸ್ಥಾನದ ಬಳಿ ನಡುರಸ್ತೆಯಲ್ಲೇ ಲಾಂಗ್ ಹಿಡಿದು ಪ್ರದರ್ಶಿಸಿ, ಭಯದ ವಾತಾವರಣ ಸೃಷ್ಟಿಸಿದ ಆರೋಪದಡಿ ಮೋಹನ್ ಅಲಿಯಾಸ್ ಚಿಂಟು(21) ಹಾಗೂ ಆತನ ಸಹಚರ ರಕ್ಷಿತ್ ಅಲಿಯಾಸ್ ಕೇಕು(21) ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ಯುವಕನೊಬ್ಬ ಲಾಂಗ್ ಹಿಡಿದು ಮತ್ತೊಬ್ಬನೊಂದಿಗೆ ಜಗಳವಾಡುತ್ತಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಗಮನಿಸಿದ ಸರಸ್ವತಿಪುರಂ ಠಾಣೆ ಸಿಬ್ಬಂದಿ ಬಸವರಾಜ್ ಅರಸ್, ಈ ಬಗ್ಗೆ ಸ್ಥಳಕ್ಕೆ ತೆರಳಿ ವಿಚಾರಿಸಿ, ವಿಡಿಯೋದಲ್ಲಿರುವವರ ಮಾಹಿತಿ ಕಲೆಹಾಕಿದ ನಂತರ ದೂರು ನೀಡಿದ್ದಾರೆ. ಮಾ.11ರಂದು ತಡರಾತ್ರಿ 11 ಗಂಟೆ ವೇಳೆಯಲ್ಲಿ ಸಿದ್ದಪ್ಪಾಜಿ ದೇವಸ್ಥಾನದ ಬಳಿ ರೌಡಿಶೀಟರ್ ಮೋಹನ್, ಕೈಯ್ಯಲ್ಲಿ ಲಾಂಗ್ ಹಿಡಿದು ಸಾರ್ವಜನಿಕವಾಗಿ ಪ್ರದರ್ಶಿಸಿ ಭಯದ ವಾತಾವರಣ ಸೃಷ್ಟಿಸಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ವೈರಲ್ ಆಗಿರುವ ವಿಡಿಯೋದಲ್ಲಿ ಲಾಂಗ್ ಹಿಡಿದಿರುವ ಯುವಕನನ್ನು ಮತ್ತೊಬ್ಬ ಸಮಾಧಾನಪಡಿಸುವಂತೆ ಕಂಡು ಬಂದಿದೆ. ಕೆಲ ಹೊತ್ತಿನ ಬಳಿಕ ಮೂರ್ನಾಲ್ಕು ಮಂದಿ ಬಂದು ದೂರದಿಂದಲೇ ಜಗಳ ನೋಡುತ್ತಿರುತ್ತಾರೆ. ರೈಲ್ವೆ ಗೇಟ್ ಬಂದ್ ಮಾಡಿದ್ದರಿಂದ ಒಂದು ಕಾರು, ಬೈಕ್ ಅಲ್ಲಿಯೇ ನಿಂತಿರುತ್ತವೆ. ಅನೇಕ ವಾಹನಗಳು ಇಲ್ಲೇ ಹಾದುಹೋಗುತ್ತವೆ ಆದರೆ ಯಾರಿಗೂ ಲಾಂಗ್ ತೋರಿಸಿ, ಹೆದರಿಸಿದಂತೆ ಕಾಣಿಸುವುದಿಲ್ಲ.

ಸದ್ಯ ಈ ಸಂಬಂಧ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಸಾರ್ವಜನಿಕವಾಗಿ ಲಾಂಗ್ ಝಳಪಿಸಿ ಭಯದ ವಾತಾವರಣ ಸೃಷ್ಟಿಸಿದವರ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

ಲಾರಿ ಡಿಕ್ಕಿ: ವೃದ್ಧ ಸಾವು



ಮೈಸೂರು, ಮಾ.18(ಎಸ್‌ಬಿಡಿ)– ಲಾರಿ ಡಿಕ್ಕಿ ಹೊಡೆದ ಪರಿಣಾಮ ವೃದ್ಧರೊಬ್ಬರು ಸಾವನ್ನಪ್ಪಿರುವ ಘಟನೆ ವರುಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ಸಂಭವಿಸಿದೆ. ಮೈಸೂರು ತಾಲೂಕು ಹಾರೋಹಳ್ಳಿ ಗ್ರಾಮದ ನಿವಾಸಿ ವೆಂಕಟಶೆಟ್ಟಿ(90) ಅಪಘಾತದಿಂದ ಮೃತಪಟ್ಟವರು. ಇಂದು ಬೆಳಗ್ಗೆ 8.45ರ ವೇಳೆಯಲ್ಲಿ ಮನೆ ಮುಂದೆ ರಸ್ತೆ ದಾಟುವಾಗ ಮೈಸೂರಿನಿಂದ ಮಳವಳ್ಳಿ ಕಡೆಗೆ ಸಾಗುತ್ತಿದ್ದ ಲಾರಿ(ಕೆಎ–25, ಎಎ–5238) ಡಿಕ್ಕಿ ಹೊಡೆದಿದೆ.

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಅವರನ್ನು ಕೂಡಲೇ ಆಂಬುಲೆನ್ಸ್ ಮೂಲಕ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಮಧ್ಯಾಹ್ನ ಅವರು ಸಾವನ್ನಪ್ಪಿದರು. ಈ ಸಂಬಂಧ ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿಜಯ ವಿಠಲ ಶಾಲೆಯಲ್ಲಿ ಡಿವಿಜಿ ಜನ್ಮ ದಿನಾಚರಣೆ



ವಿಜಯ ವಿಠಲ ಶಾಲಾ ಸಭಾಂಗಣದಲ್ಲಿ ಡಾ.ಡಿ.ವಿ.ಜಿಯವರ ಜನ್ಮದಿನವನ್ನು ಆಚರಿಸಲಾಯಿತು.

ಮೈಸೂರು, ಮಾ.18(ಎಸ್‌ಬಿಡಿ)– ಮೈಸೂರಿನ ವಿಜಯ ವಿಠಲ ವಿದ್ಯಾಸಂಸ್ಥೆಯಲ್ಲಿ ಪ್ರಸಿದ್ಧ ಕವಿ ಹಾಗೂ ಚಿಂತಕ ಡಾ.ಡಿ.ವಿ.ಗುಂಡಪ್ಪ(ಡಿವಿಜಿ) ಅವರ ಜನ್ಮ ದಿನವನ್ನು ಆಚರಿಸಲಾಯಿತು.

ಈ ವೇಳೆ ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್ ಮಾತನಾಡಿ, ಡಿವಿಜಿ ಅವರು ಅತ್ಯುತ್ತಮ ಅನುವಾದಕ, ಶ್ರೇಷ್ಠ ವಿಮರ್ಶಕ, ಕ್ರಿಯಾಶೀಲ ಪತ್ರಕರ್ತರಾಗಿದ್ದರು. ಅವರ 'ಮಂಕುತಿಮ್ಮನ ಕಗ್ಗ' ಕೃತಿಯನ್ನು 'ಕನ್ನಡದ ಭಗವದ್ಗೀತೆ' ಎಂದು ಪರಿಗಣಿಸಲಾಗಿದೆ ಎಂದು ಬಣ್ಣಿಸಿದರು.

ಪ್ರಯೋಗ ಪರಿಣಿತ ಪ್ರತಿಭೆಯಾಗಿದ್ದ ಡಿವಿಜಿ ಅವರು, ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮಕ್ಕೆ ಡಿವಿಜಿ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ. ಇವರಿಗೆ ಭಾರತ ಸರ್ಕಾರವು 'ಪದ್ಮ ವಿಭೂಷಣ' ಪ್ರಶಸ್ತಿ ನೀಡಿ, ಗೌರವಿಸಿತು. ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ಶಿಕ್ಷಕರು ನಿಗದಿತ ಪಠ್ಯಕ್ರಮದ ಹೊರತಾಗಿ ಇಂತಹ ಮಹಾನ್ ಸಾಧಕರ ಕೃತಿಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು. ವಿದ್ಯಾರ್ಥಿಗಳು ಅವರ ಕಾಲಾತೀತ ಸಾಹಿತ್ಯಿಕ ಮೇರುಕೃತಿಗಳನ್ನು ಪರಾಮರ್ಶಿಸುವಂತೆ ಮಾರ್ಗದರ್ಶನ ನೀಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲೆ ಎಸ್.ಎ.ವೀಣಾ, ಮುಖ್ಯ ಶಿಕ್ಷಕಿಯರಾದ ಬಿ.ಆರ್.ಸೌಮ್ಯ, ಆರ್.ಎಸ್.ಶೀಲಾ ಇನ್ನಿತರ ಶಿಕ್ಷಕರು ಪಾಲ್ಗೊಂಡಿದ್ದರು.

ಬೆಳವಾಡಿ ಗ್ರಾಮದ ನೀರಿನ ಬವಣೆ ನೀಗಲು ಹೂಟಗಳ್ಳಿ ಪೌರಾಯುಕ್ತರಿಗೆ ಗ್ರಾಮದ ಮುಖಂಡ ಶಿವಮೂರ್ತಿ ಮನವಿ



ಮೈಸೂರು, ಮಾ.18– ಮೈಸೂರು ತಾಲೂಕು, ಬೆಳವಾಡಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಸಾರ್ವಜನಿಕರು ಕಂಗಾಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳವಾಡಿ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರೂ, ಗ್ರಾಮದ ಮುಖಂಡರೂ ಹಾಗೂ ಜೆಡಿಎಸ್ ನಾಯಕರಾದ ಶಿವಮೂರ್ತಿ, ಹೂಟಗಳ್ಳಿ ನಗರಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿ, ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಒತ್ತಾಯಿಸಿದ್ದಾರೆ.

ಬೆಳವಾಡಿ, ಅಧಿಕ ಜನಸಂಖ್ಯೆಯುಳ್ಳ ಗ್ರಾಮವಾಗಿದೆ. ಸುತ್ತಮುತ್ತ ಹಲವು ಬಡಾವಣೆಗಳಿವೆ. ಬೇಸಿಗೆ ಆರಂಭದಲ್ಲೇ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ. ಈ ಬಗ್ಗೆ ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ. ವಾಟರ್ ಮನ್‌ಗಳು ಹಾಗೂ ಇಂಜಿನಿಯರ್‌ಗಳು ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ. ಪರಿಣಾಮ ಬೆಳವಾಡಿ ಗ್ರಾಮ ಹಾಗೂ ಇದಕ್ಕೆ ಹೊಂದಿಕೊಂಡಿರುವ ಬಡಾವಣೆ ನಿವಾಸಿಗಳಿಗೆ ಅತೀವ ತೊಂದರೆಯಾಗಿದೆ. ಈಗಲಾದರೂ ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದರ ಜೊತೆಗೆ ನೀರಿನ ಅಭಾವ ಹೆಚ್ಚಿರುವ ಕಡೆಗೆ ತುರ್ತಾಗಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವಂತೆ ಆಗ್ರಹಿಸಿದ್ದಾರೆ.

ಇಂದು ಮೈಸೂರಲ್ಲಿ ಮಹಿಳಾ ದಿನಾಚರಣೆ, ಕರೋಕೆ ಗಾಯನೋತ್ಸವ

ಮೈಸೂರು, ಮಾ.18(ಜಿಎ)–ಮೈಸೂರಿನ ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜ ಹಾಗೂ ಗಾನಲೀಲ ಎಜುಕೇಷನ್ ಹಾಗೂ ಕಲ್ಚರಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಮಾ.19ರಂದು ಮಹಿಳಾ ದಿನಾಚರಣೆ ಹಾಗೂ ಕರೋಕೆ ಗಾಯನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷೆ ಲೀಲಾವತಿ ಈ ವಿಷಯ ತಿಳಿಸಿ, ಅಂದು ಸಂಜೆ 4 ಗಂಟೆಗೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆಯುವ ಕಾರ್ಯಕ್ರಮವನ್ನು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಉದ್ಘಾಟಿಸಲಿದ್ದು, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜು ಭೈರಿ ಅಧ್ಯಕ್ಷತೆ ವಹಿಸಲಿದ್ದಾರೆ. ಗಾಯಕ ಅಮ್ಮ ರಾಮಚಂದ್ರ, ಮನೋವೈದ್ಯೆ ಡಾ.ರೇಖಾ ಮನಶಾಂತಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಸಮಾಜ ಸೇವಕರಾದ ಶೋಭಾ ಹಾಗೂ ಕರಾಟೆ ಪಟು ಕು.ಜೆ.ಬಿ.ಶ್ರದ್ಧಾ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಜೆ.ಭಾರತಿ, ಗಾಯಕರಾದ ರಾಜಣ್ಣ, ಎಸ್.ನವೀನ್‌ಕುಮಾರ್, ವಿಷ್ಣು ಪ್ರಸಾದ್ ಉಪಸ್ಥಿತರಿದ್ದರು.

ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಮೈಸೂರಿನ ಯುವತಿ ದೃಷ್ಟಿ



ಫ್ಲೋರಿಡಾದ ಪಾಮ್ ಬೀಚ್ ಕೌಂಟಿಯಲ್ಲಿರುವ ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ ಕ್ಲಬ್‌ನಲ್ಲಿ ಪುರುಷರ ಚಾಂಪಿಯನ್‌ಶಿಪ್ ಗೆದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಮಹಿಳಾ ಗಾಲ್ಫ್ ಚಾಂಪಿಯನ್ ಆಗಿ ಹೊರಹೊಮ್ಮಿದ 24 ವರ್ಷದ ಮೈಸೂರಿನ ದೃಷ್ಟಿ ಕರುಂಬಯ್ಯ ಅವರನ್ನು ಪ್ರಶಸ್ತಿಯೊಂದಿಗೆ ಕಾಣಬಹುದು.

ಮೈಸೂರು,ಮಾ.18(ಪಿಎಂ)– ಅಮೆರಿಕದ ಫ್ಲೋರಿಡಾದ ಪಾಮ್ ಬೀಚ್ ಕೌಂಟಿಯಲ್ಲಿರುವ ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ ಕ್ಲಬ್‌ನಲ್ಲಿ ಮಹಿಳಾ ಗಾಲ್ಫ್ ಚಾಂಪಿಯನ್ ಆಗಿ ಹೊರಹೊಮ್ಮಿದ 24 ವರ್ಷದ ಮೈಸೂರಿನ ದೃಷ್ಟಿ ಕರುಂಬಯ್ಯ, ಪುರುಷರ ಗಾಲ್ಫ್ ಚಾಂಪಿಯನ್‌ಶಿಪ್ ಗೆದ್ದ 78 ವರ್ಷದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ತಮ್ಮ ಜಯವನ್ನು ಆಚರಿಸಿಕೊಂಡರು.

'ನಾನು ಫ್ಲೋರಿಡಾದ ಪಾಮ್ ಬೀಚ್ ಕೌಂಟಿಯಲ್ಲಿರುವ ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ ಕ್ಲಬ್‌ನಲ್ಲಿ ಗಾಲ್ಫ್ ಕ್ಲಬ್ ಚಾಂಪಿಯನ್‌ಶಿಪ್ ಅನ್ನು ಗೆದ್ದಿದ್ದೇನೆ ಬಹುಶಃ ಇದು ನನ್ನ ಕೊನೆಯದು' ಎಂದು ಟ್ರಂಪ್ ಭಾನುವಾರ ಮಧ್ಯಾಹ್ನ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಮೈಸೂರಿನ ಯಾದವಗಿರಿಯ ನಿವಾಸಿಗಳಾದ ದಂತವೈದ್ಯ ಡಾ.ಪಿ.ಜಿ.ಕರುಂಬಯ್ಯ (ಪಾಲಚಂಡ ಚೇತನ್) ಮತ್ತು ಶ್ವೇತ ಕರುಂಬಯ್ಯ ಅವರ ಪುತ್ರಿ ದೃಷ್ಟಿ, ಪಾಮ್ ಬೀಚ್ ಅಟ್ಲಾಂಟಿಕ್ ವಿಶ್ವವಿದ್ಯಾಲಯದಲ್ಲಿ ಗಾಲ್ಫ್ ತರಬೇತುದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ, ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ ಕ್ಲಬ್‌ನ ಸದಸ್ಯರಾಗಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಮತ್ತು ಎನ್‌ಪಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಹಳೆಯ ವಿದ್ಯಾರ್ಥಿನಿಯಾಗಿರುವ ದೃಷ್ಟಿ, ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯಿಂದ ಸಮಾಜಶಾಸ್ತ್ರ ಮತ್ತು ಮಾನವ ಅಭಿವೃದ್ಧಿಯಲ್ಲಿ ಡಬಲ್ ಮೇಜರ್ ಆಗಿದ್ದಾರೆ.

ಮೈಸೂರಿನ ಜೆಡಬ್ಲ್ಯೂಜಿಸಿಯಲ್ಲಿ 9 ವರ್ಷದವಳಿದ್ದಾಗಲೇ ಗಾಲ್ಫ್ ಆಟಕ್ಕೆ ಪಾದಾರ್ಪಣೆ ಮಾಡಿದ ದೃಷ್ಟಿ, ಭಾರತದಲ್ಲಿ 13 ವರ್ಷದೊಳಗಿನವರ ವಿಭಾಗದಲ್ಲಿ ವೃತ್ತಿಜೀವನದ 5ನೇ ಅತ್ಯುತ್ತಮ ಶ್ರೇಯಾಂಕ ಹೊಂದಿದ್ದರು. 2014ರಲ್ಲಿ ವೆಸ್ಟರ್ ಇಂಡಿಯಾ ಲೇಡೀಸ್ ಮತ್ತು ಜೂನಿಯರ್ ಗರ್ಲ್ಸ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್ ಅಪ್ ಆಗಿದ್ದರು.

2015ರಲ್ಲಿ ಸಿಜಿಎಲ್ ಇಂಡಿಯನ್ ಗೋಲ್ಡ್ ಯೂನಿಯನ್ ಸೌತ್ ಝೋನ್ ಈವೆಂಟ್ ಅನ್ನು 11 ಸ್ಟ್ರೋಕ್‌ಗಳಿಂದ ಗೆದ್ದರು. ಅಲ್ಲದೆ, 2026ರಲ್ಲಿ ಪ್ರೆಸ್ಟೀಜ್ ಗಾಲ್ಫ್‌ಶೈರ್ ಐಜಿಯು ಸೌತ್ ಝೋನ್ ಜೂನಿಯರ್ ಚಾಂಪಿಯನ್‌ಶಿಪ್ ಕೂಡ ತನ್ನದಾಗಿಸಿಕೊಂಡರು. ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯನ್ನು ಪ್ರತಿನಿಧಿಸುವ ವಿವಿಧ ಚಾಂಪಿಯನ್‌ಶಿಪ್‌ಗಳನ್ನ ಸಹ ಅವರು ಗೆದ್ದಿದ್ದಾರೆ.

ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ ಕ್ಲಬ್ ಚಾಂಪಿಯನ್‌ಶಿಪ್‌ನಲ್ಲಿ ದೃಷ್ಟಿ ಮೊದಲ ದಿನದಂದು ಸ್ಟೇಬಲ್‌ಫೋರ್ಡ್ ಮತ್ತು ಎರಡನೇ ಮತ್ತು ಮೂರನೇ ದಿನದಂದು ಮ್ಯಾಚ್‌ಪ್ಲೇ ಗೆದ್ದರು. ದೃಷ್ಟಿಯ ಕಿರಿಯ ಸಹೋದರ ಧ್ರುವ ಬೋಪಣ್ಣ ಕೂಡ ಮೈಸೂರಿನಲ್ಲಿ ಪ್ರೊ–ಗಾಲ್ಫ್ ಆಟಗಾರ.

ಆಗ ದೆಹಲಿ, ಈಗ ತಮಿಳುನಾಡು: ಬಹು ದೊಡ್ಡ ಲಿಕ್ಕರ್ ಹಗರಣ!

ಕೇಜ್ರಿವಾಲ್ ಹಾದಿಯಲ್ಲಿ ಎಂ.ಕೆ.ಸ್ಟಾಲಿನ್



ನವದೆಹಲಿ, ಮಾ.18– ದೆಹಲಿ ಮಾದರಿಯಲ್ಲೇ ನೆರೆಯ ತಮಿಳುನಾಡಿನಲ್ಲೂ ಬಹುದೊಡ್ಡ ಲಿಕ್ಕರ್ ಹಗರಣ ನಡೆದಿದ್ದು, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕೂಡ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಹಾದಿಯಲ್ಲಿ ಸಾಗಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಕೆ.ಅಣ್ಣಾಮಲೈ ಗಂಭೀರ ಆರೋಪ ಮಾಡಿದ್ದಾರೆ.

ತಮಿಳುನಾಡು ರಾಜ್ಯ ಮಾರ್ಕೆಟಿಂಗ್ ಕಾರ್ಪೊರೇಷನ್ ಲಿಮಿಟೆಡ್‌ಗೆ ಸಂಬಂಧಿಸಿದ ವಿವಿಧ ಕಚೇರಿಗಳು ಮತ್ತು ಉದ್ಯೋಗಿಗಳ ನಿವಾಸದ ಮೇಲೆ ಇತ್ತೀಚೆಗೆ ನಡೆದ ಜಾರಿ ನಿರ್ದೇಶನಾಲಯದ ದಾಳಿ ವೇಳೆ ಲಿಕ್ಕರ್ ಹಗರಣಕ್ಕೆ ಸಂಬಂಧಿಸಿದ ಪುರಾವೆಗಳು ದೊರೆತಿವೆ ಎಂಬ ಅಧಿಕಾರಿಗಳ ಹೇಳಿಕೆ ಬೆನ್ನಲ್ಲೇ ಇದೀಗ ತಮಿಳುನಾಡು ರಾಜ್ಯ ರಾಜಕೀಯದಲ್ಲಿ ಈ ಲಿಕ್ಕರ್ ಹಗರಣ ಬಹುದೊಡ್ಡ ರಾಜಕೀಯ ಚರ್ಚೆಗೆ ಕಾರಣವಾಗಿದೆ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಟಿವಿಕೆ ಪಕ್ಷದ ಮುಖ್ಯಸ್ಥ ನಟ ವಿಜಯ್ ಕೂಡ ತಮಿಳುನಾಡಿನಲ್ಲಿ ಸಾವಿರ ಕೋಟಿ ರೂಗೂ ಅಧಿಕ ಪ್ರಮಾಣದ ಲಿಕ್ಕರ್ ಹಗರಣ ನಡೆದಿದೆ ಎಂದು ಗಂಭೀರ ಆರೋಪ ಮಾಡಿದ್ದರು. ಇದರ ಬೆನ್ನಲ್ಲೇ ಇದೀಗ ಲಿಕ್ಕರ್ ಹಗರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ವ್ಯಾಪಕ ಪ್ರತಿಭಟನೆ ನಡೆಸಿದೆ.

ಸೋಮವಾರ ಚೆನ್ನೈನ TASMAC ಪ್ರಧಾನ ಕಚೇರಿಯಲ್ಲಿ ಭಾರಿ ಭದ್ರತಾ ನಿಯೋಜನೆಯ ನಡುವೆಯೇ ಬಿಜೆಪಿ ನಾಯಕರು ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಕೆ. ಅಣ್ಣಾಮಲೈ ಮತ್ತು ಮಾಜಿ ರಾಜ್ಯಪಾಲೆ ತಮಿಳಿಸೈ ಸೌಂದರ್ ರಾಜನ್ ಸೇರಿದಂತೆ ಹಲವಾರು ವಿರೋಧ ಪಕ್ಷದ ನಾಯಕರನ್ನು ಚೆನ್ನೈ ಪೊಲೀಸರು ಬಂಧಿಸಿದ್ದಾರೆ.

ಅಣ್ಣಾಮಲೈ ಅವರನ್ನು ಬಂಧಿಸಿ ಪೊಲೀಸ್ ವಾಹನದಲ್ಲಿ ಕರೆದುಕೊಂಡು ಹೋಗಿದ್ದಾರೆ. ಎಗ್ಮೋರ್‌ನಲ್ಲಿರುವ TASMAC ಕಚೇರಿಯಲ್ಲಿ ನಡೆದ ಘೇರಾವ್‌ನಲ್ಲಿ ಭಾಗವಹಿಸಲು ಮನೆಯಿಂದ ಹೊರಬಂದ ಸೌಂದರರಾಜನ್ ಅವರನ್ನು ಕೂಡ ಪೊಲೀಸ್ ತಂಡವು ಹೊರಹೋಗದಂತೆ ತಡೆದಿದೆ.

ಈ ಲಿಕ್ಕರ್ ಹಗರಣದ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ಕೆ. ಅಣ್ಣಾಮಲೈ ಟ್ವೀಟ್ ಮಾಡಿದ್ದು, 'ತಮಿಳುನಾಡು ಬಿಜೆಪಿ ಪರವಾಗಿ ನಾವು ಇಂದು ಚೆನ್ನೈನ TASMAC ಪ್ರಧಾನ ಕಚೇರಿಯಲ್ಲಿ ಡಿಎಂಕೆ ಸರ್ಕಾರದ 1,000 ಕೋಟಿ ರೂಪಾಯಿಗಳ TASMAC ಹಗರಣದ ವಿರುದ್ಧ ಪ್ರತಿಭಟಿಸಿ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದ್ದೆವು. ಆದರೆ ಭಯದಿಂದ ನಡುಗುತ್ತಿರುವ DMK ಸರ್ಕಾರವು ನಮ್ಮ ಹಿರಿಯ ಬಿಜೆಪಿ ನಾಯಕಿ ಮತ್ತು ತೆಲಂಗಾಣದ ಮಾಜಿ ರಾಜ್ಯಪಾಲೆ ತಮಿಳಿಸೈ ಸೌಂದರರಾಜನ್ ಅವರನ್ನು ಗೃಹಬಂಧನದಲ್ಲಿ ಇರಿಸಿದೆ ಎಂದು ಪೋಸ್ಟ್ ಮಾಡಿದ್ದಾರೆ.

ಆರೋಪ ನಿರಾಕರಿಸಿದ ಡಿಎಂಕೆ: ಇನ್ನು ಬಿಜೆಪಿ ಮತ್ತು ಟಿವಿಕೆ ಪಕ್ಷಗಳ ಲಿಕ್ಕರ್ ಹಗರಣ ಆರೋಪವನ್ನು ಡಿಎಂಕೆ ಸರ್ಕಾರ ನಿರಾಕರಿಸಿದೆ. ಈ ಕುರಿತು ಮಾತನಾಡಿರುವ ತಮಿಳುನಾಡು ಅಬಕಾರಿ ಸಚಿವ ಸೆಂಥಿಲ್ ಬಾಲಾಜಿ, TASMAC ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಆಧಾರವಿಲ್ಲ ಮತ್ತು ರಾಜ್ಯದಲ್ಲಿ ಇಂತಹ ದುಷ್ಕೃತ್ಯಗಳಿಗೆ ಅವಕಾಶವಿಲ್ಲ. ಶೋಧಗಳ ಹೆಸರಿನಲ್ಲಿ, ಇಡಿ ದಾಳಿಗಳನ್ನು ನಡೆಸಿದೆ. ಆದರೆ ಎಫ್‌ಐಆರ್ ದಾಖಲಾಗಿರುವ ವರ್ಷವನ್ನು ಉಲ್ಲೇಖಿಸಿಲ್ಲ. ಅವರು TASMAC ನೇಮಕಾತಿಯಲ್ಲಿ ತಪ್ಪುಗಳು ಸಂಭವಿಸಿವೆ ಎಂಬಂತೆ ದೃಶ್ಯವನ್ನು ಸೃಷ್ಟಿಸಿದ್ದಾರೆ ಎಂದು ಹೇಳಿದರು.

ಆಧಾರ್‌ನೊಂದಿಗೆ ವೋಟರ್ ಐಡಿ ಲಿಂಕ್‌ಗೆ ಶೀಘ್ರ ಕ್ರಮ

ನವದೆಹಲಿ, ಮಾ. 18– ಆಧಾರ್ ಕಾರ್ಡ್‌ನೊಂದಿಗೆ ಎಪಿಕ್ ಸಂಖ್ಯೆಯನ್ನು ಕೂಡಲೇ ಲಿಂಕ್ ಮಾಡಲು ಕ್ರಮ ವಹಿಸಲಾಗುವುದು ಎಂದು ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ತಿಳಿಸಿದ್ದಾರೆ. ಆಧಾರ್–ಮತದಾರರ ಗುರುತಿನ ಚೀಟಿ ಲಿಂಕ್ ಮಾಡುವ ಕುರಿತು ಚರ್ಚಿಸಲು ಚುನಾವಣಾ ಆಯೋಗವು ಕೇಂದ್ರ ಗೃಹ ಕಾರ್ಯದರ್ಶಿ, ಶಾಸಕಾಂಗ ಕಾರ್ಯದರ್ಶಿ (ಕಾನೂನು ಸಚಿವಾಲಯ), ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರದ ಸಿಇಒ ಅವರೊಂದಿಗೆ ಇಂದು ಉನ್ನತ ಮಟ್ಟದ ಸಭೆ ನಡೆಸಿತು.

ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಮಾಹಿತಿ



ನವದೆಹಲಿಯಲ್ಲಿ ಚುನಾವಣಾ ಭಾರತೀಯ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚುನಾವಣಾ ಆಯುಕ್ತರಾದ ಡಾ. ಸುಖಬೀರ್ ಸಿಂಗ್ ಸಂಧು ಮತ್ತು ಡಾ. ವಿವೇಕ್ ಜೋಶಿ ಅವರು ಕೇಂದ್ರ ಗೃಹ ಕಾರ್ಯದರ್ಶಿ, ಕಾರ್ಯದರ್ಶಿ ಶಾಸಕಾಂಗ ಇಲಾಖೆ, ಕಾರ್ಯದರ್ಶಿ ಮೇಟಿ ಮತ್ತು ಯುಐಡಿಎಐ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಇಸಿಐನ ತಾಂತ್ರಿಕ ತಜ್ಞರೊಂದಿಗೆ ಇಂದು ಸಭೆ ನಡೆಸಿ ಚರ್ಚಿಸಿದರು. ಚುನಾವಣಾ ಆಯೋಗವು ಆರ್ಟಿಕಲ್ 326, ಆರ್‌ಪಿ ಆಕ್ಟ್, 1950 ಮತ್ತು ಸುಪ್ರೀಂಕೋರ್ಟ್ ತೀರ್ಪುಗಳ ಪ್ರಕಾರ ಕ್ರಮ ಕೈಗೊಳ್ಳುತ್ತದೆ. UIDAI ಮತ್ತು ಚುನಾವಣಾ ಆಯೋಗದ ತಜ್ಞರ ನಡುವಿನ ತಾಂತ್ರಿಕ ಸಮಾಲೋಚನೆಗಳು ಶೀಘ್ರದಲ್ಲೇ ಪ್ರಾರಂಭವಾಗಲಿವೆ ಎಂದು ಸಭೆಯ ಬಳಿಕ ಮಾಹಿತಿ ನೀಡಲಾಗಿದೆ.

ರೌಡಿಶೀಟರ್ ದೊರೆಸ್ವಾಮಿ ಹತ್ಯೆ ಪ್ರಕರಣ

ಇದುವರೆಗೆ ಎಂಟು ಮಂದಿ ಬಂಧನ; ಪ್ರೇಯಸಿ ಪೊಲೀಸ್ ವಶಕ್ಕೆ

ಮೈಸೂರು, ಮಾ.18(ಎಸ್‌ಬಿಡಿ)– ರೌಡಿ ಶೀಟರ್ ದೊರೆಸ್ವಾಮಿ ಹತ್ಯೆ ಪ್ರಕರಣದಲ್ಲಿ ಈವರೆಗೆ 8 ಮಂದಿಯನ್ನು ಬಂಧಿಸಿರುವ ಪೊಲೀಸರು, ಘಟನೆ ವೇಳೆ ದೊರೆಸ್ವಾಮಿ ಜೊತೆಯಲ್ಲಿದ್ದ ಮಹಿಳೆಯ ವಿಚಾರಣೆ ನಡೆಸಿದ್ದಾರೆ.

ದೊರೆಸ್ವಾಮಿ ಕೊಲೆಯಾದ ವೇಳೆ ಜೊತೆಯಲ್ಲಿದ್ದ ಬೆಂಗಳೂರು ಮೂಲದ ಶ್ವೇತಾಳನ್ನು ಮಂಗಳವಾರ ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗಿದೆ. ಆಕೆಯ ಮೊಬೈಲ್ ಇನ್ನಿತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದ್ದು, ಬುಧವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸುವ ಸಾಧ್ಯತೆ ಇದೆ. ಘಟನೆ ಸಂಬಂಧ ನಿನ್ನೆ ಮತ್ತು ಮೊನ್ನೆ ಒಟ್ಟು 8 ಜನ ಆರೋಪಿಗಳನ್ನು ಬಂಧಿಸಲಾಗಿದೆ.

ಮೈಸೂರು ತಾಲೂಕು, ಜಯಪುರ ಹೋಬಳಿ, ಅನಗನಹಳ್ಳಿ ಸಮೀಪದ ತೋಟದ ಮನೆಯಲ್ಲಿ ಕೆಲ ದಿನಗಳ ಹಿಂದೆ ದೊರೆಸ್ವಾಮಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಲಾಗಿತ್ತು. ಆ ರಾತ್ರಿ ಆತನ ಜೊತೆಯಲ್ಲಿದ್ದ ಪ್ರೇಯಸಿ ಬೆಂಗಳೂರು ಮೂಲದ ಶ್ವೇತಾ ನಾಪತ್ತೆಯಾಗಿದ್ದಳು. ಆದ್ದರಿಂದ ಶ್ವೇತಾ ಮೇಲೆ ಅನುಮಾನ ವ್ಯಕ್ತವಾಗಿತ್ತು. ಆಕೆಯೇ ಕೊಲೆ ಮಾಡಿ, ತಲೆಮರೆಸಿಕೊಂಡಿರುವುದಾಗಿ ದೊರೆಸ್ವಾಮಿ ಪತ್ನಿಯೂ ಆರೋಪಿಸಿದ್ದರು. ಈ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮೇಲಧಿಕಾರಿಗಳ ನಿರ್ದೇಶನದಂತೆ ವೃತ್ತ ನಿರೀಕ್ಷಕ ಶಿವನಂಜಶೆಟ್ಟಿ ನೇತೃತ್ವದಲ್ಲಿ ತನಿಖೆ ನಡೆಸಿದ ತಂಡ, ಹಳೇ ದ್ವೇಷಕ್ಕೆ ಹತ್ಯೆ ಮಾಡಲಾಗಿದೆ ಎಂಬುದನ್ನು ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸಿತ್ತು. ಇದೀಗ ಹತ್ಯೆ ನಡೆದ ವೇಳೆ ಜೊತೆಯಲ್ಲಿದ್ದರು ಎನ್ನಲಾದ ಶ್ವೇತಾಳ ವಿಚಾರಣೆ ನಡೆಸಲಾಗಿದ್ದು, ಈಕೆ ಭಾಗಿಯಾಗಿದ್ದಾಳೋ, ಇಲ್ಲವೋ ಎನ್ನುವುದು ಮುಂದಿನ ತನಿಖೆಯಲ್ಲಿ ತಿಳಿಯಲಿದೆ.

ಗ್ಯಾರಂಟಿಗೆ ಬಿಜೆಪಿ ರಾಜ್ಯಗಳು; ವಿಶ್ವಸಂಸ್ಥೆ ಮೆಚ್ಚುಗೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಮ್ಮೆ



ಬೆಂಗಳೂರು, ಮಾ.18– ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ಆಡಳಿತವಿರುವ ರಾಜ್ಯಗಳು ಹಾಗೂ ವಿಶ್ವಸಂಸ್ಥೆ ಮೆಚ್ಚುಗೆ ವ್ಯಕ್ತಪಡಿಸಿವೆ ಎಂದು ಸಿಎಂ ಸಿದ್ದರಾಮಯ್ಯ ವಿಧಾನ ಸಭೆಯಲ್ಲಿಂದು ತಿಳಿಸಿದರು.

ವಿಧಾನಸಭಾ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸಿದ ಸಿದ್ದರಾಮಯ್ಯ, 2025ರ ಜನವರಿ 3 ರಂದು ಚಂದ್ರಬಾಬು ನಾಯ್ಡು ಅವರ ಸರ್ಕಾರದ ಮಂತ್ರಿಗಳು ಹಾಗೂ ಅಧಿಕಾರಿಗಳು ಗ್ಯಾರಂಟಿ ಯೋಜನೆಗಳ ಕುರಿತು ಅಧ್ಯಯನ ಮಾಡಿದ್ದಾರೆ. ಸಚಿವ ರಾಮಲಿಂಗಾರೆಡ್ಡಿ ಹಾಗೂ ನನ್ನನ್ನು ಭೇಟಿಯಾಗಿ ಚರ್ಚಿಸಿರುವುದಾಗಿ ತಿಳಿಸಿದರು.

2025ರ ಫೆಬ್ರವರಿ 2ರಂದು ಮಹಾರಾಷ್ಟ್ರದ ಸಾರಿಗೆ ಸಚಿವರಾದ ಪ್ರತಾಪ್ ಸರ್ನಾಯಕ್ ಶಕ್ತಿ ಯೋಜನೆ ಬಗ್ಗೆ ಚರ್ಚಿಸಿ ತೆರಳಿದ್ದಾರೆ. ಅಲ್ಲಿರುವುದು ಬಿಜೆಪಿ ಸರ್ಕಾರ. 2025ರ ಫೆಬ್ರವರಿ 5 ರಂದು ಕೇರಳದಿಂದ ಸಚಿವರು ಬಂದು ಅಧ್ಯಯನ ಮಾಡಿ ಹೋದರು. ಇವರೆಲ್ಲಾ ಸುಮ್ಮನೆ ಬಂದು ಹೋಗುತ್ತಾರೆಯೇ ಎಂದು ಪ್ರಶ್ನಿಸಿದರು.

ಸರ್ಕಾರ ಗ್ಯಾರಂಟಿ ಜಾರಿ ಮಾಡಿದರೆ ಆರ್ಥಿಕವಾಗಿ ದಿವಾಳಿಯಾಗುತ್ತದೆ. ಅಭಿವೃದ್ಧಿಗೆ ಹಣವಿರುವುದಿಲ್ಲ ಎಂದು ರಾಜ್ಯ ಬಿಜೆಪಿ ನಾಯಕರು ಮಾತ್ರವಲ್ಲ, ದೇಶದ ಪ್ರಧಾನಿಗಳು ಕೂಡ ಟೀಕಿಸಿದ್ದರು. ಆದರೆ ನೀವೇ ಲೋಕಸಭಾ ಚುನಾವಣೆಯಲ್ಲಿ ಮೋದಿ ಕೀ ಗ್ಯಾರಂಟಿ ಎಂದು ಘೋಷಣೆ ಮಾಡಿದ್ದೀರಿ. ಗ್ಯಾರಂಟಿಗಳನ್ನು ನಿರಂತರವಾಗಿ ವಿರೋಧಿಸಿದವರೆ ಈ ಕೆಲಸ ಮಾಡಿದ್ದೀರಿ. ಅನೇಕ ರಾಜ್ಯಗಳಲ್ಲಿ ಇದನ್ನು ನಕಲು ಮಾಡಿದ್ದೀರಿ. ವಿರೋಧ ಮಾಡುವುದಾದರೆ ನಕಲು ಏಕೆ ಮಾಡಬೇಕಿತ್ತು. ಸತ್ಯ ಯಾವಾಗಲೂ ಕಹಿಯಾಗಿರುತ್ತದೆ. ನಾವು ವಾಸ್ತವವನ್ನು ಹೇಳುತ್ತಿದ್ದೇವೆ ಎಂದರು.

ತಹಸೀಲ್ದಾರ್, ಎಸಿ, ಡಿಸಿ ಕೋರ್ಟ್‌ನಲ್ಲಿ ಒಂದೂವರೆ ವರ್ಷದಲ್ಲಿ ದಾಖಲಾಗಿದ್ದ 16,135 ಪ್ರಕರಣ; ಅವುಗಳಲ್ಲಿ ಇತ್ಯರ್ಥವಾಗಿರುವುದು 14109; ಬಾಕಿ 2026

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಲ್ಲಿ ಕಂದಾಯ ಪ್ರಕರಣ ವಿಲೇವಾರಿಯಲ್ಲಿ ಗಣನೀಯ ಸಾಧನೆ


ಮೈಸೂರು, ಮಾ.18(ಎಸ್‌ಪಿಎನ್)– ಮೈಸೂರು ಜಿಲ್ಲೆ ತಹಸೀಲ್ದಾರ್, ಸಹಾಯಕ ಆಯುಕ್ತರು(ಎಸಿ) ಹಾಗೂ ಜಿಲ್ಲಾ ದಂಡಾಧಿಕಾರಿಗಳ ನ್ಯಾಯಾಲಯಗಳಲ್ಲಿ ಕಳೆದ ಒಂದೂವರೆ ವರ್ಷದಿಂದ 16,135 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 14,109 ಪ್ರಕರಣಗಳು ಇತ್ಯರ್ಥಗೊಂಡು, ಬೇರೆ ಬೇರೆ ಕಾರಣಗಳಿಗೆ 2,026 ಪ್ರಕರಣಗಳು ಬಾಕಿ ಉಳಿದಿವೆ.

ಮೈಸೂರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ 2023ರ ಅ.1ರಿಂದ 2025ರ ಮಾ.10ರವರೆಗೆ 2,026 ಪ್ರಕರಣಗಳು ದಾಖಲಾಗಿದ್ದು, 1463 ಪ್ರಕರಣಗಳು ಇತ್ಯರ್ಥಗೊಂಡಿದ್ದು, 698 ಪ್ರಕರಣಗಳು ಬಾಕಿ ಇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ಕಂದಾಯ ಪ್ರಕರಣಗಳ ವಿಲೇವಾರಿ ತ್ವರಿತವಾಗಿದ್ದು, ಶೇ.87 ರಷ್ಟು ಪ್ರಗತಿ ಸಾಧಿಸಿದೆ. ರಾಜ್ಯ ಕಂದಾಯ ಇಲಾಖೆ ನೀಡಿರುವ ನಿಗದಿತ ಗುರಿಗಿಂತಲೂ ಮೈಸೂರು ಜಿಲ್ಲೆ ಹೆಚ್ಚಿನ ಪ್ರಕರಣ ಇತ್ಯರ್ಥಗೊಂಡಿವೆ.

ಇತ್ತೀಚಿನ ದಿನಗಳಲ್ಲಿ ಕ್ರಿಮಿನಲ್ ಪ್ರಕರಣಗಳಿಗಿಂತ ಸಿವಿಲ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದರಲ್ಲೂ ಆಸ್ತಿ ಭಾಗ, ಖಾತೆ ಬದಲಾವಣೆ, ಸರ್ವೆ ವಿಚಾರ ಸೇರಿದಂತೆ ಹತ್ತಾರು ವಿಷಯಗಳಲ್ಲಿ ರೈತರು ಹಾಗೂ ಸಾರ್ವಜನಿಕರು, ತಹಸೀಲ್ದಾರ್, ಉಪವಿಭಾಗಾಧಿಕಾರಿ, ಡಿಸಿ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗುತ್ತಿವೆ. ಆದರೆ, ರೈತರ ಜಮೀನಿಗೆ ಸಂಬಂಧಿಸಿದ ಪೋಡಿ, ಸ್ಕೆಚ್, ಆರ್‌ಟಿಸಿ ಮತ್ತಿತರ ಪ್ರಕರಣಗಳು ಬೇಗ ವಿಲೇವಾರಿಗೆ ಜಿಲ್ಲಾಡಳಿತ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸಾರ್ವಜನಿಕ ಕೆಲಸಗಳ ಒತ್ತಡದ ನಡುವೆಯೂ ಅಧಿಕಾರಿಗಳು ಕೋರ್ಟ್ ಕಲಾಪ ನಡೆಸಬೇಕಿದ್ದರಿಂದ ವ್ಯಾಜ್ಯಗಳಿಗೆ ಪರಿಹಾರ ಸಿಕ್ಕಿರಲಿಲ್ಲ. ಇದರ ಬಗ್ಗೆ ಗಮನ ಹರಿಸುವಂತೆ ಹಲವು ಮುಖಂಡರು ಸರ್ಕಾರಕ್ಕೆ ಮನವಿ ಮಾಡಿದ್ದರು. ಕಂದಾಯ ವ್ಯಾಜ್ಯಗಳನ್ನು ತ್ವರಿತಗೊಳಿಸುವಂತೆ ಆಯಾಯ ಜಿಲ್ಲೆಯ ಅಧಿಕಾರಿಗಳಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಬಹುತೇಕ ಪ್ರಕರಣಗಳು ಇತ್ಯರ್ಥಗೊಂಡಿವೆ.

ಮೇಲ್ಮನವಿಗೆ ಅವಕಾಶ: ಕಂದಾಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮೊದಲು ತಹಸೀಲ್ದಾರ್ ಕೋರ್ಟ್‌ನಲ್ಲಿ ವಿಚಾರಣೆ ನಡೆದು ತೀರ್ಪು ಹೊರಬಂದರೆ, ನಂತರ ಎಸಿ ಕೋರ್ಟ್‌ನಲ್ಲಿ ಪ್ರಶ್ನಿಸಬಹುದು. ಇಲ್ಲಿಯೂ ಪ್ರಕರಣ ಇತ್ಯರ್ಥವಾಗದಿದ್ದರೆ, ಡಿಸಿ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು, ಡಿಸಿ ಕೋರ್ಟ್‌ನಲ್ಲಿ ನೀಡುವ ತೀರ್ಪು ಅಂತಿಮ ಅಲ್ಲದಿದ್ದರೂ ಬಹುತೇಕ ವ್ಯಾಜ್ಯಗಳು ಈ ಹಂತದಲ್ಲೇ ಇತ್ಯರ್ಥಗೊಳ್ಳುತ್ತವೆ. ಹೀಗಾಗಿ ಮೇಲ್ಮನವಿ ಪ್ರಕರಣಗಳು ಶೇ. 10 ರಷ್ಟು ಬಾಕಿ ಇರುವುದಿಲ್ಲ ಎನ್ನುತ್ತಾರೆ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್.



ತಾಲೂಕುವಾರು ವಿವರ: ತಿ.ನರಸೀಪುರ ತಹಸೀಲ್ದಾರ್ ಕೋರ್ಟ್‌ನಲ್ಲಿ 1,560 ಪ್ರಕರಣಗಳು ದಾಖಲಾಗಿದ್ದು, 1483 ಪ್ರಕರಣಗಳು ಇತ್ಯರ್ಥಗೊಂಡಿವೆ. 77 ಪ್ರಕರಣಗಳು ಬಾಕಿ ಉಳಿದಿವೆ. ಸರಗೂರು ತಹಸೀಲ್ದಾರ್ ಕೋಟ್‌ನಲ್ಲಿ 145 ಪ್ರಕರಣ ದಾಖಲಾಗಿದ್ದು, 129 ಇತ್ಯರ್ಥಗೊಂಡಿವೆ. 16 ಪ್ರಕರಣ ಬಾಕಿ ಉಳಿದಿವೆ. ಸಾಲಿಗ್ರಾಮ ತಹಸೀಲ್ದಾರ್ ಕೋರ್ಟ್‌ನಲ್ಲಿ 524 ಪ್ರಕರಣ ದಾಖಲಾಗಿದ್ದು, 495 ಪ್ರಕರಣ ಇತ್ಯರ್ಥಗೊಂಡಿವೆ. 29 ಪ್ರಕರಣ ಬಾಕಿ ಉಳಿದಿವೆ. ಪಿರಿಯಾಪಟ್ಟಣ ತಹಸೀಲ್ದಾರ್ ಕೋರ್ಟ್‌ನಲ್ಲಿ 545 ಪ್ರಕರಣ ದಾಖಲಾಗಿದ್ದು, 498 ಪ್ರಕರಣ ಇತ್ಯರ್ಥಗೊಂಡು 47 ಪ್ರಕರಣ ದಾಖಲಾಗಿವೆ. ನಂಜನಗೂಡು ತಹಸೀಲ್ದಾರ್ ಕೋರ್ಟ್‌ನಲ್ಲಿ 1281 ಪ್ರಕರಣ ದಾಖಲಾಗಿದ್ದು, 1189 ಪ್ರಕರಣ ಇತ್ಯರ್ಥಗೊಂಡು 92 ಪ್ರಕರಣ ಬಾಕಿ ಉಳಿದಿವೆ.

ಮೈಸೂರು ತಹಸೀಲ್ದಾರ್ ಕೋರ್ಟ್‌ನಲ್ಲಿ 2678 ಪ್ರಕರಣ ದಾಖಲಾಗಿದ್ದು, 2559 ಪ್ರಕರಣ ಇತ್ಯರ್ಥಗೊಂಡು 119 ಪ್ರಕರಣ ಬಾಕಿ ಉಳಿದಿವೆ. ಕೆ.ಆರ್.ನಗರ ತಹಸೀಲ್ದಾರ್ ಕೋರ್ಟ್‌ನಲ್ಲಿ 218 ಪ್ರಕರಣ ದಾಖಲಾಗಿದ್ದು, 208 ಪ್ರಕರಣ ಇತ್ಯರ್ಥಗೊಂಡು 10 ಪ್ರಕರಣ ಬಾಕಿ ಉಳಿದಿವೆ. ಹುಣಸೂರು ತಹಸೀಲ್ದಾರ್ ಕೋರ್ಟ್‌ನಲ್ಲಿ 904 ಪ್ರಕರಣ ದಾಖಲಾಗಿದ್ದು, 868 ಪ್ರಕರಣ ಇತ್ಯರ್ಥಗೊಂಡಿವೆ. ಇದರಲ್ಲಿ 36 ಪ್ರಕರಣ ಬಾಕಿ ಉಳಿದಿವೆ. ಹೆಚ್.ಡಿ.ಕೋಟೆ ತಹಸೀಲ್ದಾರ್ ಕೋರ್ಟ್‌ನಲ್ಲಿ 461 ಪ್ರಕರಣ ದಾಖಲಾಗಿ, 413 ಪ್ರಕರಣ ಇತ್ಯರ್ಥಗೊಂಡಿವೆ. 48 ಪ್ರಕರಣ ಬಾಕಿ ಉಳಿದಿವೆ.

ಮೈಸೂರು ವಿಶೇಷ ಎಸಿ ನ್ಯಾಯಾಲಯದಲ್ಲಿ 503 ಪ್ರಕರಣ ದಾಖಲಾಗಿದ್ದು, 325 ಪ್ರಕರಣದ ತೀರ್ಪು ಪ್ರಕಟವಾಗಿದ್ದು, 178 ಪ್ರಕರಣ ಬಾಕಿ ಉಳಿದಿವೆ. ಹುಣಸೂರು ಸ್ಪೆಷಲ್ ಎಸಿ ಕೋರ್ಟ್‌ನಲ್ಲಿ 201 ಪ್ರಕರಣ ದಾಖಲಾಗಿದ್ದು, 81 ಪ್ರಕರಣದ ತೀರ್ಪು ಬಂದಿವೆ. ಇದರಲ್ಲಿ 120 ಪ್ರಕರಣ ಬಾಕಿ ಉಳಿದುಕೊಂಡಿವೆ ಮೈಸೂರು ಎಸಿ ನ್ಯಾಯಾಲಯದಲ್ಲಿ 3014 ಪ್ರಕರಣ ದಾಖಲಾಗಿದ್ದು, 2769 ಪ್ರಕರಣ ಇತ್ಯರ್ಥಗೊಂಡು 245 ಪ್ರಕರಣ ಬಾಕಿಯಿದೆ. ಹುಣಸೂರು ಎಸಿ ಕೋರ್ಟ್‌ನಲ್ಲಿ 1692 ಪ್ರಕರಣ ದಾಖಲಾಗಿ, 1428 ಪ್ರಕರಣ ಇತ್ಯರ್ಥಗೊಂಡು 264 ಪ್ರಕರಣ ಬಾಕಿ ಉಳಿದಿದೆ. ಮೈಸೂರು ಡಿಸಿ ಸ್ಪೆಷಲ್ ಕೋರ್ಟ್‌ನಲ್ಲಿ 248 ಪ್ರಕರಣ ದಾಖಲಾಗಿದ್ದು, 201 ಪ್ರಕರಣ ಇತ್ಯರ್ಥಗೊಂಡು 47 ಬಾಕಿ ಉಳಿದಿವೆ.

> ಮೈಸೂರು ಜಿಲ್ಲಾ ಕಂದಾಯ ಕೋರ್ಟ್‌ನಲ್ಲಿ ಕೂಲಂಕಷ ವಿಚಾರಣೆ ನಡೆಸಿ, ಬಹುತೇಕ ಪ್ರಕರಣಗಳು ಇತ್ಯರ್ಥವಾಗುತ್ತಿವೆ. ಇದರಿಂದ ರೈತರಿಗೆ ಅನುಕೂಲವಾಗಿದೆ
> – ಜಿ.ಲಕ್ಷ್ಮಿಕಾಂತರೆಡ್ಡಿ, ಡಿಸಿ

> ಜಮೀನಿನ ಖಾತೆ ಬದಲಾವಣೆ ಹಾಗೂ ಇತರೆ ವಿಷಯಗಳಲ್ಲಿ ಕಂಪ್ಯೂಟರ್ ಆಪರೇಟರ್‌ಗಳಿಂದ ಆಗುವ ತಪ್ಪುಗಳನ್ನು ತಹಸೀಲ್ದಾರ್ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾಗ ಅಲ್ಲಿ ಕೆಲ ಪ್ರಕರಣಗಳು ತಿದ್ದುಪಡಿಗೊಳ್ಳುತ್ತವೆ. ಇಲ್ಲಿಯೂ ಇತ್ಯರ್ಥವಾಗದ ಪ್ರಕರಣಗಳಿಗೆ ಎಸಿ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತಾರೆ. ಈ ಹಂತದಲ್ಲಿ ವಿಚಾರಣೆ ಮಂದಗತಿಯಲ್ಲಿರುತ್ತವೆ. ಅಂತೆಯೇ ಡಿಸಿ ಕೋರ್ಟ್ ಹಂತದಲ್ಲಿ ಮತ್ತಷ್ಟು ವಿಳಂಬವಾಗುತ್ತದೆ. ನಂತರ ಇದೇ ಪ್ರಕರಣ ಸಿವಿಲ್ ಕೋರ್ಟ್‌ನಲ್ಲಿ ಪ್ರಕರಣ ದಾಖಲಾದರೆ, ವರ್ಷಾನುಗಟ್ಟಲೇ ವಿಚಾರಣೆಗೆ ಬರುವುದಿಲ್ಲ. ಈ ವ್ಯವಸ್ಥೆ ಬದಲಾಗಬೇಕು.
> – ಅತ್ತಹಳ್ಳಿ ದೇವರಾಜ್, ಹಿರಿಯ ರೈತ ಮುಖಂಡರು

ಏ.12, ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ

ವಿಜೃಂಭಣೆಯಿಂದ ನಡೆಸಲು ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

ತಿ.ನರಸೀಪುರ, ಮಾ.18– ಪಟ್ಟಣದ ಪ್ರಸಿದ್ಧ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವವನ್ನು ಏ.12 ರಂದು ವಿಜೃಂಭಣೆಯಿಂದ ನಡೆಸಲು ತಾಪಂ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ನರಸೀಪುರದಲ್ಲಿ ವಾಡಿಕೆಯಂತೆ ಏ.9ರಂದು ನಂಜನಗೂಡು ಶ್ರೀನಂಜುಂಡೇಶ್ವರಸ್ವಾಮಿ ದೊಡ್ಡ ಜಾತ್ರೆ ಮುಗಿದ 3 ದಿನಗಳ ಬಳಿಕ ಶ್ರೀಗುಂಜಾ ನರಸಿಂಹಸ್ವಾಮಿ ರಥೋತ್ಸವ ನಡೆಸಲಾಗುವುದು. ಸಂಪ್ರದಾಯದಂತೆ ಸುತ್ತಮುತ್ತಲಿನ 5 ಗ್ರಾಮಗಳ ಯಜಮಾನರನ್ನು ಆಹ್ವಾನಿಸಿ, ರಥದ ಚಕ್ರಗಳ ದುರಸ್ತಿಗೊಳಿಸಿ, ಅಗತ್ಯ ಸಿದ್ಧತೆ ಮಾಡಿಕೊಂಡು ಸಂಭ್ರಮದಿಂದ ಜಾತ್ರೋತ್ಸವ ನಡೆಸಲು ತೀರ್ಮಾನಿಸಲಾಯಿತು.

ಸಭೆ ಆರಂಭದಲ್ಲಿ ಪಂಚಾಂಗದಲ್ಲಿನ ತಪ್ಪು ಮಾಹಿತಿಯಿಂದ ಭಾನುವಾರ ದೇವಾಲಯದಲ್ಲಿ ಆಗಮಿಕ ಶ್ರೀಧರ ಭಟ್ ಅವರು ಧ್ವಜಾರೋಹಣ ನೆರವೇರಿಸಿ, ರಥೋತ್ಸವ ಆಚರಣೆಯ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿ, ಭಕ್ತರಲ್ಲಿ ಗೊಂದಲ ಸೃಷ್ಟಿಸಿದ್ದಕ್ಕೆ ಕುಲಸ್ಥ ಯಜಮಾನರಿಂದ ತೀವ್ರ ಆಕ್ಷೇಪ ವ್ಯಕ್ತವಾಯಿತು. ಇದಕ್ಕೆ ಮತ್ತೋರ್ವ ಸಹಾಯಕ ಅರ್ಚಕ ಕಂತೆಕಟ್ಟೆ ಗೋಪಾಲಸ್ವಾಮಿ ಧ್ವನಿಗೂಡಿಸಿ ಆಗಮಿಕರ ಅಚಾತುರ್ಯದಿಂದ ರಥೋತ್ಸವದ ಸಂಪ್ರದಾಯ ಮುರಿದಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.



ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು.

ಮಾಜಿ ಎಂಎಲ್‌ಸಿ ಸಿ.ರಮೇಶ್ ಮಾತನಾಡಿ, ಪೂರ್ವ ಸಿದ್ಧತಾ ಸಭೆ ನಡೆಯುವ ಮೊದಲೇ ಬ್ರಹ್ಮ ರಥೋತ್ಸವ ಧಾರ್ಮಿಕ ಕಾರ್ಯಗಳು ನಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಪ್ರಧಾನ ಅರ್ಚಕರು, ಆಗಮಿಕರು ಹಾಗೂ ಪಾರುಪತ್ತೇಗಾರರ ಆಯ್ಕೆ ಸಂಬಂಧ ಜಿಲ್ಲಾಧಿಕಾರಿಗಳ ಆದೇಶ ಪತ್ರ ನೀಡುವಂತೆ ಒತ್ತಾಯಿಸಿದರು.

ಮುಖಂಡ ಟಿ.ಎನ್.ಗುರುಪ್ರಸಾದ್ ಮಾತನಾಡಿ, ರಥದ ಚಕ್ರಗಳು ಮುರಿದು ಹೋಗಿದ್ದು, ಇರುವ ಕಾಲಮಿತಿಯಲ್ಲಿ ರಥದ ದುರಸ್ತಿ ಕಾರ್ಯ ಕೈಗೊಳ್ಳಬೇಕು ಎಂದರು.

ಧಾರ್ಮಿಕ ದತ್ತಿ ಇಲಾಖೆಯಲ್ಲಿ ಎರಡೂವರೆ ದಶಕಗಳಿಂದ ಠಿಕಾಣಿ ಹೂಡಿರುವ ಗುಮಾಸ್ತ ಕಿರಣ ಅವರನ್ನು ವರ್ಗಾವಣೆ ಮಾಡಿ ಕಳುಹಿಸಿ ಅಲ್ಲದೇ ರಥೋತ್ಸವ ಸಾಗುವ ರಸ್ತೆಗಳನ್ನು ದುರಸ್ತಿಗೊಳಿಸಬೇಕೆಂದು ಹಲವರು ಆಗ್ರಹಿಸಿದರು.

ಸಭೆಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿ ಪಿ.ಎಸ್.ಅನಂತರಾಜು, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ತಾಲೂಕು ಆರೋಗ್ಯಾಧಿಕಾರಿ ಡಾ.ಎಂ.ಕೆ.ರವಿಕುಮಾರ್, ಪ್ರಧಾನ ಅರ್ಚಕ ಸಂಪತ್ ಕುಮಾರ್, ಚೆಸ್ಕಾಂ ಎಇಇ ಕೆ.ವಿ.ವೀರೇಶ್, ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ಪಾರುಪತ್ತೇಗಾರ್ ದೀಪು, ಪಪಂ ಮಾಜಿ ಅಧ್ಯಕ್ಷ ಬಸವಣ್ಣ, ಎನ್.ಮಹದೇವಸ್ವಾಮಿ, ಮಹದೇವ್, ಮಾಜಿ ಉಪಾಧ್ಯಕ್ಷ ಮಹದೇವ ಸ್ವಾಮಿ, ಶ್ರೀರಾಂಪುರ ಪ್ರಕಾಶ್, ಶಿವರಾಜು, ತಾಪಂ ಮಾಜಿ ಸದಸ್ಯ ರಂಗಸ್ವಾಮಿ, ಗ್ರಾಪಂ ಮಾಜಿ ಉಪಾಧ್ಯಕ್ಷ ರಂಗಸ್ವಾಮಿ, ಯೋಗಿ, ಸಿ.ಮಹದೇವ, ನ್ಯಾಯಬೆಲೆ ಅಂಗಡಿ ಮಹದೇವ ಸೇರಿದಂತೆ ಗೋಪಾಲಪುರ, ಹಳೇ ಟೌನ್, ಆಲಗೂಡು, ಕೆಬ್ಬೆ ಹಾಗೂ ವ್ಯಾಸರಾಜಪುರ ಗ್ರಾಮಗಳ ಯಜಮಾನರು ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ತಾಲೂಕಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯ 160 ದೇವಾಲಯಗಳಲ್ಲಿಯೂ ಇಷ್ಟೊಂದು ಗೊಂದಲ ಇಲ್ಲ. ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಪ್ರಧಾನ ಅರ್ಚಕ ಹಾಗೂ ಆಗಮಿಕರು ಮತ್ತು ಪಾರುಪತ್ತೇಗಾರ್ ನಡುವೆ ಹೊಂದಾಣಿಕೆ ಇಲ್ಲದಿರುವುದರಿಂದ ಲೋಪಗಳು ಆಗುತ್ತಿವೆ. ಸಂಪ್ರದಾಯದಂತೆ ಏ.12ರಂದು ಬ್ರಹ್ಮ ರಥೋತ್ಸವ ಆಯೋಜಿಸಲಾಗುವುದು. ಪೂರ್ವ ಸಿದ್ಧತೆ ಭಾಗವಾಗಿ ವಿವಿಧ ಇಲಾಖೆಗಳಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಕಾನೂನು ವ್ಯವಸ್ಥೆ ಮತ್ತು ಭಕ್ತರ ಭಾವನೆಗಳಿಗೆ ಧಕ್ಕೆ ಆಗದಂತೆ ಮುಂಜಾಗ್ರತ ಕ್ರಮ ಕೈಗೊಳ್ಳಲಾಗುವುದು.

- ಟಿ.ಜಿ.ಸುರೇಶಾಚಾರ್, ತಹಸೀಲ್ದಾರ್.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಮಾ.18– ಮೊದಲು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇಂಗ್ಲೆಂಡ್ ಹಾಗೂ ಅಮೆರಿಕಾ ದೇಶಗಳಲ್ಲಿ ಮಾತ್ರ ಆಚರಿಸುತ್ತಿದ್ದರು ಎಂದು ಮೈಸೂರು ಜೆಎಸ್‌ಎಸ್ ಕಾಲೇಜಿನ ಉಪನ್ಯಾಸಕಿ ಕುಮುದಿನಿ ಸ್ವಾಮಿ ತಿಳಿಸಿದರು.

ಪಟ್ಟಣದ ನಿಸರ್ಗ ಫೌಂಡೇಷನ್ ಕಚೇರಿಯಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಮಹಿಳೆಯರು ಸರ್ಕಾರದಿಂದ ಸಿಗುವ ಸೌಲಭ್ಯ ಸದುಪಯೋಗಪಡಿಸಿಕೊಳ್ಳಬೇಕು. ಹೆಣ್ಣು ಮಕ್ಕಳಿಗೆ ಬಾಲ್ಯವಿವಾಹ ಮಾಡಬಾರದು. ಅವರಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಮಹಿಳೆಯರು ನಮ್ಮ ಸಂಸ್ಕೃತಿಯನ್ನು ಮರೆಯಬಾರದು ಎಂದರು.

ನಿಸರ್ಗ ಸಂಸ್ಥೆ ಆದಿವಾಸಿಗಳಿಗಾಗಿ ಕಾರ್ಯ ನಿರ್ವಹಿಸುತ್ತಿದ್ದು, ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ನಾವೇ ಹೋರಾಟ ಮಾಡಬೇಕೆಂದು ಕರೆ ನೀಡಿದರು.

ನಿಸರ್ಗ ಸಂಸ್ಥೆ ನಿರ್ದೇಶಕ ಪ್ರಭು ಮಾತನಾಡಿ, ಮಹಿಳೆಯರು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಸಮಾನತೆ ಹೊಂದಬೇಕು. ಆದಿವಾಸಿಗಳು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದರು.

ನಿಸರ್ಗ ಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಮಾರನಹಾಡಿಯ ದೇವಮ್ಮ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಚಿಗುರು ಶಾಲಾ ಮಕ್ಕಳಾದ ನಿಶ್ಚಿತ, ಪೂರ್ವಿಕ, ಲಿಖಿತಾ ಅವರು ಅಜೀಂ ಪ್ರೇಮ್ ಜಿ ವಿವಿ ಆಯೋಜಿಸಿದ್ದ ದಿ ಫಾರೆಸ್ಟ್ ಫಾರ್ ಲೈಫ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಬಂಧದಲ್ಲಿ ವಿಜೇತರಾಗಿದ್ದು ಪ್ರಶಸ್ತಿ ಪತ್ರ ವಿತರಿಸಲಾಯಿತು. ಅರಳಿಕಟ್ಟೆ ಹಾಡಿ ಕೆಂಪಮ್ಮ, ಸಣ್ಣಮ್ಮ, ಚಿಕ್ಕಮ್ಮ ಎಂಬುವರಿಗೆ ಸಂಧ್ಯಾ ಸುರಕ್ಷಾ ಯೋಜನೆಯಡಿ ಮಂಜೂರಾತಿ ಆದೇಶ ಪತ್ರ ವಿತರಿಸಲಾಯಿತು. ಈ ವೇಳೆ ಅಂಗನವಾಡಿ ಮೇಲ್ವಿಚಾರಕಿ ಚಿನ್ನಮ್ಮ, ಹಿರಿಯ ಮಹಿಳಾ ಹೋರಾಟಗಾರರಾದ ಜವರಮ್ಮ, ಅಮ್ಮಣ್ಣಮ್ಮ, ಸಂಸ್ಥೆಯ ಚಿಕ್ಕತಿಮ್ಮನಾಯ್ಕ, ಕನ್ಯಾಕುಮಾರಿ, ಜ್ಯೋತಿ, ಶೃತಿ ಇದ್ದರು.

ಸರಗೂರಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ವೃತ್ತಿ ಕೌಶಲ್ಯ ತರಬೇತಿ ಪಡೆದು ಆರ್ಥಿಕವಾಗಿ ಸದೃಢರಾಗಿ



ಸರಗೂರಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಸರಗೂರು, ಮಾ.18– ಮಹಿಳೆಯರು ವೃತ್ತಿ ಕೌಶಲ್ಯ ತರಬೇತಿ ಪಡೆದು ಆರ್ಥಿಕವಾಗಿ ಸದೃಢರಾಗಿ ಎಂದು ಸ್ನೇಹ ಸ್ತ್ರೀ ಸಮಾಜ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ತಿಳಿಸಿದರು.

ಪಟ್ಟಣದ ಸ್ನೇಹ ಸ್ತ್ರೀ ಸಮಾಜ ಹಾಗೂ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯಿಂದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಅಬಲೆ ಅಲ್ಲ ಅವಳು ಸಬಲೆ. ತರಬೇತಿ ಕೊಡುವ ಉದ್ದೇಶ ಆರ್ಥಿಕವಾಗಿ ಸಧೃಡರಾಗಿ ನಿಮ್ಮ ಭವಿಷ್ಯ ರೂಪಿಕೊಳ್ಳಲಿ ಎಂಬುದಾಗಿದೆ. ಪತಿ–ಸತಿಯರು ಸಂಸಾರದ ಕಣ್ಣುಗಳಿದ್ದಂತೆ. ಇಬ್ಬರೂ ದುಡಿದರೆ ಜೀವನ ಉತ್ತಮವಾಗಿರುತ್ತದೆ. ಈಗಿನ ಮಹಿಳೆಯರು ಟಿವಿಯಲ್ಲಿ ಬರುವ ಧಾರಾವಾಹಿಗಳಿಗೆ ಸಮಯ ನೀಡುತ್ತಾರೆ. ಅದರ ಬದಲು ತರಬೇತಿ ಪಡೆದು ನಿಮ್ಮ ಮಕ್ಕಳ ಭವಿಷ್ಯ ಉಜ್ವಲಗೊಳಿಸಿಕೊಳ್ಳಿ ಎಂದರು.

ತಹಸೀಲ್ದಾರ್ ಮೋಹನ ಕುಮಾರಿ ಮಾತನಾಡಿ, ಪ್ರಸ್ತುತ ಮಹಿಳೆಯರು ಸ್ವಾವಲಂಬಿಯಾಗಿ ಬದುಕುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಉತ್ತಮ ಸ್ಥಾನ ಪಡೆಯಲು ಸಂಘಟನೆ ದಾರಿಯಾಗಲಿದೆ. ಮಹಿಳೆಯರು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಬೇಕು. ಮೊಬೈಲ್ ಅವಶ್ಯಕತೆ ಇದ್ದರೆ ಮಾತ್ರ ಬಳಸಿ ಓದುವ ಕಡೆ ಗಮನವಿರಲಿ ಎಂದರು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ನಿರ್ದೇಶಕ ರಮೇಶ್ ಮಾತನಾಡಿದರು. ವಿವೇಕಾನಂದ ಆಸ್ಪತ್ರೆ ಸಂಧ್ಯಾ ಮಾತನಾಡಿ, ಮಹಿಳೆಯರಿಗಾಗಿ ಆಸ್ಪತ್ರೆಯಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಇದೇ ವೇಳೆ ಸಮಾಜಮುಖಿ ಸೇವೆ ಸಲ್ಲಿಸುತ್ತಿರುವ ನೀಲಾರಾಣಿ ಅವರನ್ನು ಸ್ನೇಹ ಸ್ತ್ರೀ ಸಮಾಜದಿಂದ ಸನ್ಮಾನಿಸಲಾಯಿತು.

ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ ಕಾರ್ಯಕ್ರಮಾಧಿಕಾರಿ ಸೌಭಾಗ್ಯ, ಸಹಾಯಕ ಕಾರ್ಯಕ್ರಮ ಅಧಿಕಾರಿ ಸುರೇಶ್ ಕುಮಾರ್, ಅಖಿಲ ಭಾರತ ವೀರಶೈವ ಮಹಾಸಭಾ ಮಹಿಳಾ ಅಧ್ಯಕ್ಷೆ ಜ್ಯೋತಿ, ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯ ಶ್ರೀನಿವಾಸ್, ಆರೋಗ್ಯಾಧಿಕಾರಿ ಅನಿತಾ ಕುಮಾರಿ, ಸ್ನೇಹ ಸ್ತ್ರೀ ಸಮಾಜದ ಕಾರ್ಯದರ್ಶಿ ಸೀಮಾ, ಉಪಾಧ್ಯಕ್ಷೆ ಶೋಭ, ಸದಸ್ಯರಾದ ಮಂಜುಳ, ಉಮಾ, ರಜಿನಿ, ಸುಮಾ, ರೇಣುಕಾ, ಪುಷ್ಪ, ಜ್ಯೋತಿ, ರಶ್ಮಿ, ಮಂಗಳ, ಜೆಎಸ್‌ಎಸ್ ಶಾಲೆ ಮುಖ್ಯ ಶಿಕ್ಷಕ ಮಹಮದ್ ಅಂಜುಮ್ ಪಾಷಾ, ಕೃಷ್ಣಮೂರ್ತಿ, ಅಶೋಕ್ ಇತರರಿದ್ದರು.

ವಿಜೃಂಭಣೆಯ ಶ್ರೀಲಕ್ಷ್ಮಿಕಾಂತಸ್ವಾಮಿ ರಥೋತ್ಸವ



ಶ್ರೀಲಕ್ಷ್ಮಿಕಾಂತಸ್ವಾಮಿಯವರ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ನಂಜನಗೂಡು, ಮಾ.18– ತಾಲೂಕಿನ ಕಳಲೆ ಗ್ರಾಮದ ಪುರಾಣ ಪ್ರಸಿದ್ಧ ಶ್ರೀಲಕ್ಷ್ಮಿಕಾಂತಸ್ವಾಮಿಯವರ ರಥೋತ್ಸವ ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ದೇವಾಲಯದಲ್ಲಿ ಮಂಗಳವಾರ ಮುಂಜಾನೆಯಿಂದಲೇ ಶ್ರೀಲಕ್ಷ್ಮಿಕಾಂತಸ್ವಾಮಿಯವರಿಗೆ ಕ್ಷಿರಾಭಿಷೇಕ, ಫಲ–ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದ ನಂತರ ಬೆಳಗ್ಗೆ 6 ರಿಂದ 6.15ರೊಳಗೆ ಸಲ್ಲುವ ಶುಭ ಕುಂಭ ಲಗ್ನದಲ್ಲಿ ವಜ್ರ ವೈಡೂರ್ಯಗಳಿಂದ ಅಲಂಕೃತವಾದ ಶ್ರೀಲಕ್ಷ್ಮಿಕಾಂತಸ್ವಾಮಿಯವರ ಉತ್ಸವ ಮೂರ್ತಿಯನ್ನು ರಥೋತ್ಸವದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ ಮಹಾ ಮಂಗಳಾರತಿ ನೆರವೇರಿಸಿ, ಪೂಜೆ ಸಲ್ಲಿಸಿದ ಬಳಿಕ ಬೆಳಗ್ಗೆ 8.15ಕ್ಕೆ ಮಾಜಿ ಶಾಸಕ ಕೇಶವಮೂರ್ತಿ ಮತ್ತು ದೇವಾಲಯದ ಪಾರುಪತ್ತೇದಾರ್ ಜಯರಾಂ ರಥದ ಚಕ್ರಕ್ಕೆ ಈಡುಗಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ್ದ ಭಕ್ತರು ಶ್ರದ್ಧಾ ಭಕ್ತಿಯಿಂದ ರಥ ಎಳೆದು ಪುನೀತರಾದರು. ರಥ ಗ್ರಾಮದ ಬೀದಿಗಳಲ್ಲಿ ತೆರಳುವಾಗ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಕಟ್ಟಿಕೊಂಡು ಹಣ್ಣು ಜವನ ಎಸೆದು ಭಕ್ತಿ ಮೆರೆದರು. ರಥೋತ್ಸವ ಯಾವುದೇ ಅಡಚಣೆ ಇಲ್ಲದೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸ್ವಸ್ಥಾನ ಸೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯದ ಸುತ್ತಮುತ್ತ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ರಥವನ್ನು ಬಣ್ಣದ ಬಟ್ಟೆ ಬಾವುಟಗಳಿಂದ ಹಾಗೂ ನಾನಾ ಬಗೆಯ ಹೂಗಳಿಂದ ಸಿಂಗರಿಸಲಾಗಿತ್ತು. ರಥ ಚಲಿಸುವ ಮಾರ್ಗದಲ್ಲಿ ರಂಗೋಲೆ ಬಿಡಿಸಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಅಲ್ಲದೇ ಜಾತ್ರಾ ಮಹೋತ್ಸವದ ಅಂಗವಾಗಿ ಸೂಕ್ತ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

ದೇವಾಲಯ ಪಾರುಪತ್ತೇದಾರ್ ಜಯರಾಂ ಮಾತನಾಡಿ, ಶ್ರೀಲಕ್ಷ್ಮಿಕಾಂತ ಸ್ವಾಮಿ ದೇವಾಲಯ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ಇದೀಗ ದೇವಾಲಯ ಹಾಗೂ ರಥ ಶಿಥಿಲಾವಸ್ಥೆಯಲ್ಲಿದೆ. ಈ ದೇವಾಲಯ ಶ್ರೀಕಂಠೇಶ್ವರ ದೇವಾಲಯದ ಅಧೀನದಲ್ಲಿ ಬರುವುದರಿಂದ ಪುರಾತನ ದೇವಾಲಯಗಳನ್ನು ಉಳಿಸುವ ಸಲುವಾಗಿ ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಕ್ರಮವಹಿಸಿ ಶ್ರೀಕಂಠೇಶ್ವರ ದೇವಾಲಯದ ಅನುದಾನ ಬಳಸಿಕೊಂಡು ಈ ದೇವಾಲಯದ ಜೀರ್ಣೋದ್ಧಾರ ಕೆಲಸ ಮಾಡಬೇಕು. ಜೊತೆಗೆ ಮುಂದಿನ ವರ್ಷದ ಜಾತ್ರೆ ವೇಳೆಗೆ ಶಿಥಿಲಾವಸ್ಥೆಯಲ್ಲಿರುವ ರಥವನ್ನು ಜೀರ್ಣೋದ್ಧಾರ ಗೊಳಿಸಬೇಕು ಎಂದರು.

ಮಂಗಳವಾರ ರಾತ್ರಿ ತೇರಡಿ ಉತ್ಸವ ಜರುಗುವ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಮನಸೂರೆಗೊಂಡವು. ರಥೋತ್ಸವ ವೇಳೆ ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ಮುಖಂಡರಾದ ರವಿಕುಮಾರ್, ರಾಜೇಶ ಹಾಗೂ ಗ್ರಾಮಸ್ಥರು ಇತರರಿದ್ದರು.

ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆ

ಹುಣಸೂರು, ಮಾ.18– ತಾಲೂಕಿನ ತಿಪ್ಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹುಣಸೂರಿನ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಲಾಯಿತು.


ಇದಕ್ಕೂ ಮುನ್ನಾ ಕಾಲೇಜಿನ ವಿದ್ಯಾರ್ಥಿನಿಯರು ಗ್ರಾಮದ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಿ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, ಮಕ್ಕಳನ್ನು ಶಿಕ್ಷಣದಿಂದ ವಂಚಿಸಬೇಡಿ, ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ, ಕುಡಿತದಿಂದ ಕುಟುಂಬ ಸರ್ವನಾಶವಾಗಲಿದೆ ಕುಡಿತದಿಂದ ದೂರವಿರಿ, ಗ್ರಾಮದಲ್ಲಿ ಸ್ವಚ್ಛತೆ ಮತ್ತು ನಿಮ್ಮ ಸುತ್ತಮುತ್ತಲಿನ ಪರಿಸರ ಕಾಯ್ದುಕೊಳ್ಳಿ, ನೀರು ಮತ್ತು ಮಣ್ಣನ್ನು ಉಳಿಸಿ ಎಂಬ ಘೋಷಣೆಯೊಂದಿಗೆ ಅರಿವು ಮೂಡಿಸಿದರು. ಈ ವೇಳೆ ಎನ್‌ಎಸ್‌ಎಸ್ ಸಂಚಾಲಕ ಡಾ.ಕೆ.ಸಿ.ಪ್ರಸನ್ನ, ಉಪನ್ಯಾಸಕಿಯರಾದ ಪ್ರತಿಭಾ, ಕಾವ್ಯ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಶಂಕರ್ ಇನ್ನಿತರರಿದ್ದರು. ನಂತರ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೊತ್ತೇಗಾಲ ಗ್ರಾಪಂ ಅಧ್ಯಕ್ಷ ರವಿಕುಮಾರ್, ವಿದ್ಯಾರ್ಥಿಗಳು ಓದಿನ ಜೊತೆಗೆ ಗ್ರಾಮೀಣ ಜನರೊಂದಿಗೆ ಬೆರೆತು ಗ್ರಾಮೀಣ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಮಾಜಿಕ ಚಟುವಟಿಕೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬ ಹುದು. ಇದಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಗಳು ಪೂರಕವಾಗಿವೆ ಎಂದರು.

ಪ್ರಾಂಶುಪಾಲ ಪ್ರೊ.ಮಂಜು.ಎಸ್, ಎನ್‌ಎಸ್‌ಎಸ್ ಅಧಿಕಾರಿ ಪ್ರೊ.ವಿಶ್ವನಾಥ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಹೆಚ್.ಎಸ್.ನಟರಾಜು, ಹನಗೋಡು ಉಪ ಪ್ರಾಂಶುಪಾಲ ಸಂತೋಷ್ ಕುಮಾರ್, ನಂಜುಂಡಸ್ವಾಮಿ, ಜೆಡಿಎಸ್ ತಾಲೂಕು ಅಧ್ಯಕ್ಷ ದೇವರಾಜ್ ಒಡೆಯರ್, ಯಾಜಮಾನರಾದ ಚಿಕ್ಕದಾಸೇಗೌಡ, ಜಯಸ್ವಾಮಿಗೌಡ, ಶೈಲಜಾ, ಆನಂದ್, ಗ್ರಾಪಂ ಕಾರ್ಯದರ್ಶಿ ಕೃಷ್ಣಶೆಟ್ಟಿ, ಪುಟ್ಟರಾಜು, ನಾಗೇಗೌಡ ಉಪಸ್ಥಿತರಿದ್ದರು.



ತಿಪ್ಲಾಪುರ ಶಾಲೆಯಲ್ಲಿ ಎನ್‌ಎಸ್‌ಎಸ್ ಶಿಬಿರ ನಡೆಯಿತು.

ಪುನೀತ್ ಹುಟ್ಟುಹಬ್ಬ: ಪರೀಕ್ಷಾ ಪರಿಕರ ವಿತರಣೆ



ಹುಣಸೂರು ತಾಲೂಕಿನ ತೆಂಕಲಕೊಪ್ಪಲು ಗ್ರಾಮದಲ್ಲಿ ನಟ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಅಂಗವಾಗಿ ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಪರಿಕರ ವಿತರಿಸಿ ಶುಭ ಕೋರಲಾಯಿತು. ಈ ವೇಳೆ ಜನಧ್ವನಿ ಫೌಂಡೇಶನ್ ಅಧ್ಯಕ್ಷ ಪ್ರವೀಣ, ಸ್ವಾಮಿಗೌಡ, ಚಂದ್ರಶೇಖರ್, ಎಸ್‌ಡಿಎಂಸಿ ಅಧ್ಯಕ್ಷ ಯತೀಶ್, ಶಾಲೆ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ವಿದ್ಯಾರ್ಥಿಗಳಿದ್ದರು.

ವ್ಯಕ್ತಿತ್ವ ಬೆಳವಣಿಗೆಗೆ ಎನ್‌ಎಸ್‌ಎಸ್ ಶಿಬಿರ ಸಹಕಾರಿ



ಎನ್‌ಎಸ್‌ಎಸ್ ಸಮಾರೋಪದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ತಿ.ನರಸೀಪುರ, ಮಾ.18– ಎನ್‌ಎಸ್‌ಎಸ್ ಶಿಬಿರ ಅನುಭವ ಆಧಾರಿತ ಶಿಕ್ಷಣವಾಗಿದ್ದು, ಗ್ರಾಮೀಣ ಬದುಕು, ಸಂಸ್ಕೃತಿ ಪರಿಚಯಿಸುವ ಜೊತೆಗೆ ಶಿಬಿರಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ತುಂಬಲ ಗ್ರಾಪಂ ಅಧ್ಯಕ್ಷ ರಾಮಲಿಂಗಯ್ಯ ತಿಳಿಸಿದರು.

ಮೈಸೂರಿನ ಟೆರಿಷಿಯನ್ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ವಿಶೇಷ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಶಿಬಿರಗಳು ತಮ್ಮದೇ ಆದ ಮಹತ್ವ ಪಡೆದುಕೊಂಡಿದ್ದು, ಗ್ರಾಮೀಣ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿವೆ. ಅಲ್ಲದೇ ಜನರಿಗೆ ಸರ್ಕಾರದ ಸೌಲಭ್ಯಗಳ ಕುರಿತು ಮಾಹಿತಿ ನೀಡುವ ಕಾರ್ಯವನ್ನು ಈ ಶಿಬಿರಗಳು ಮಾಡುತ್ತಿವೆ. ವಿದ್ಯಾರ್ಥಿಗಳು ಎನ್‌ಎಸ್‌ಎಸ್‌ನಲ್ಲಿ ತೊಡಗಿಕೊಳ್ಳುವುದರಿಂದ ಜೀವನದಲ್ಲಿ ಶಿಸ್ತು ಹಾಗೂ ಸೇವಾ ಮನೋಭಾವ ಮೈಗೂಡಿಸಿಕೊಳ್ಳಲು ಸಾಧ್ಯ ಎಂದರು.

ಟೆರಿಷಿಯನ್ ಕಾಲೇಜಿನ ನಿರ್ದೇಶಕಿ ಡಾ.ಸಿಸ್ಟರ್ ಜ್ವನಿಟ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಸೇವೆ ಮಾಡುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ರಾಷ್ಟ್ರೀಯ ಸೇವಾ ಯೋಜನೆ ಮೂಲಕ ಇಂತಹ ಸದಾವಕಾಶ ಲಭ್ಯವಾಗುತ್ತಿದ್ದು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳಿಗಿಂತ ವಿಭಿನ್ನವಾಗಿರುತ್ತಾರೆ ಎಂದರು.

ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಗ್ರಾಮಾಭಿವೃದ್ಧಿ ಪರಿಕಲ್ಪನೆ ರೂಢಿಸಿಕೊಂಡು ಗ್ರಾಮಗಳನ್ನು ಸ್ವಚ್ಛ ಮತ್ತು ಸುಂದರವಾಗಿ ಪರಿವರ್ತಿಸುವತ್ತ ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಕರೆ ನೀಡಿದರು.

ರಾಷ್ಟ್ರೀಯ ಸೇವಾ ಯೋಜನೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳಿಸುವ ಜೊತೆಗೆ ಸಹಬಾಳ್ವೆ, ಸಂಘಟನೆ, ಶ್ರಮದಾನ ಸೇರಿದಂತೆ ಮಾನವೀಯ ಮೌಲ್ಯಗಳನ್ನು ಹೆಚ್ಚಿಸುವ ಜೊತೆಗೆ ಸಾಮಾಜಿಕ ಕಳಕಳಿ ಕಲಿಸುತ್ತವೆ ಎಂದರು. ಮಾ.12ರಿಂದ 18 ರವರಗೆ ನಡೆದ ಎನ್‌ಎಸ್‌ಎಸ್ ಶಿಬಿರದಲ್ಲಿ ಟೆರಿಷಿಯನ್ ಕಾಲೇಜಿನ 45 ಶಿಬಿರಾರ್ಥಿಗಳು ಗ್ರಾಮ, ಶಾಲಾವರಣ, ರಸ್ತೆ ಹಾಗೂ ದೇವಸ್ಥಾನದ ಸ್ವಚ್ಛತೆ ಮಾಡುವ ಮೂಲಕ ಶ್ರಮದಾನ ಮಾಡಿದರು. ಪ್ಲಾಸ್ಟಿಕ್ ನಿಷೇಧ, ನೀರು, ಪರಿಸರ, ಅರಣ್ಯ ನಾಶ, ಶಿಕ್ಷಣ, ಶೌಚಾಲಯ, ಭ್ರೂಣಹತ್ಯೆ ಹಾಗೂ ಮಹಿಳಾ ಸಬಲೀಕರಣ ಕುರಿತು ಜಾಥಾ ಮೂಲಕ ಗ್ರಾಮಸ್ಥರಲ್ಲಿ ಅರಿವು ಮೂಡಿಸಿದರು.

ಶಿಬಿರದ ಅಂಗವಾಗಿ ಮೈಸೂರಿನ ವಾಸನ್ ಕಣ್ಣಿನ ಆಸ್ಪತ್ರೆ ವತಿಯಿಂದ ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಮಧುಮೇಹ ಹಾಗೂ ರಕ್ತದೊತ್ತಡದ ಪರೀಕ್ಷೆ ನಡೆಸಿ ಆರೋಗ್ಯದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಶಿಬಿರದ ಅಂತಿಮ ದಿನವಾದ ಮಂಗಳವಾರ ಮುತ್ತತ್ತಿ ಶಾಲೆ ಮಕ್ಕಳಿಗೆ ನೋಟ್ ಬುಕ್, ಲೇಖನ ಸಾಮಾಗ್ರಿ ಹಾಗೂ ಸಮವಸ್ತ್ರ ವಿತರಿಸಲಾಯಿತು. ಶಿಬಿರಾರ್ಥಿಗಳು ಶಿಬಿರದಲ್ಲಿ ತಮ್ಮ ಅನುಭವ ಹಂಚಿಕೊಂಡರು. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯ ಕಂಬಯ್ಯ, ಕಾರ್ಯದರ್ಶಿ ಪ್ರವೀಣ್ ಕುಮಾರ್, ಟೆರಿಷಿಯನ್ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಸಿ.ಜಯಂತಿ, ಐಕ್ಯೂಎಸಿ ಸಂಯೋಜಕ ವಿವೇಕ್ ಚಾರ್ಲ್, ಡಾ.ಮೋಹನ್, ಡಾ.ಸತೀಶ್, ಚೇತನ್, ಎನ್‌ಎಸ್‌ಎಸ್ ಶಿಬಿರಾಧಿಕಾರಿ ಮೆಂಕಟೇಶ್, ಸಹ ಶಿಬಿರಾಧಿಕಾರಿ ಸ್ವಪ್ನ, ಶಿಬಿರದ ಕಾರ್ಯ ದರ್ಶಿ ರಮ್ಯಶ್ರೀ, ಮುತ್ತತ್ತಿ ಸರ್ಕಾರಿ ಶಾಲೆ ಮುಖ್ಯೋಪಾಧ್ಯಾಯ ಮಹೇಶ್ ಮತ್ತಿತರಿದ್ದರು.

ಬೀದಿ ನಾಯಿ ದಾಳಿಗೆ ನಾಲ್ವರು ಮಕ್ಕಳಿಗೆ ತೀವ್ರ ಗಾಯ

ನಾಯಿಗಳ ಹಾವಳಿಗೆ ಸಾರ್ವಜನಿಕರ ಆಕ್ರೋಶ

ತಿ.ನರಸೀಪುರ, ಮಾ.18– ಬೀದಿ ನಾಯಿ ದಾಳಿಗೆ ಮನೆ ಮುಂದೆ ಆಟವಾಡುತ್ತಿದ್ದ ನಾಲ್ವರು ಮಕ್ಕಳು ಗಾಯಗೊಂಡಿರುವ ಘಟನೆ ಮಂಗಳವಾರ ಪಟ್ಟಣದ ಪುರಸಭೆ ವ್ಯಾಪ್ತಿಯ ವಿನಾಯಕ ಹಾಗೂ ಇಂದಿರಾ ಕಾಲೋನಿಯಲ್ಲಿ ಸಂಭವಿಸಿದೆ.

ಪಟ್ಟಣದ ವಿನಾಯಕ ಕಾಲೋನಿ ನಿವಾಸಿ ಶಿವರಾಜು ಅವರ ಪುತ್ರಿ ಮನ್ವಿತಾ(5), ಆಟೋ ಚಾಲಕ ಮಂಜು ಅವರ ಪುತ್ರಿ ಚಂದನ(8), ಇಂದಿರಾ ಕಾಲೋನಿ ನಿವಾಸಿ ಎಲೆಕ್ಟ್ರಿಕಲ್ ನಾರಾಯಣ ಅವರ ಪುತ್ರ ಆದಿತ್ಯ(4) ಹಾಗೂ ವರ್ಕ್‌ಶಾಪ್ ವಿಜಿ ಅವರ ಪುತ್ರಿ ಭುವನ(9) ಗಾಯಗೊಂಡ ಮಕ್ಕಳು. ಮಕ್ಕಳಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ವಿವರ: ಇಂದು ಬೆಳಗ್ಗೆ ಮನ್ವಿತಾ ಮನೆ ಎದುರು ಆಟವಾಡುತ್ತಿದ್ದ ವೇಳೆ ಏಕಾಏಕಿ ದಾಳಿ ನಡೆಸಿದ ಬೀದಿ ನಾಯಿ ತೀವ್ರವಾಗಿ ಕಚ್ಚಿ ಗಾಯಗೊಳಿಸಿದೆ. ಅಲ್ಲದೇ ಚಂದನ ಮೇಲೂ ನಾಯಿ ದಾಳಿ ನಡೆಸಿ ಗಾಯಗೊಳಿಸಿದರೇ, ಇಂದಿರಾ ಕಾಲೋನಿ ಮಕ್ಕಳಾದ ಆದಿತ್ಯ ಹಾಗೂ ಭುವನಾಳ ಮೇಲೂ ನಾಯಿ ದಾಳಿ ನಡೆಸಿದೆ. ಈ ವೇಳೆ ಮಕ್ಕಳ ಚೀರಾಟ ಕೇಳಿದ ಅಜ್ಜಿಯೊಬ್ಬರು ನಾಯಿ ಓಡಿಸಲು ಪ್ರಯತ್ನಪಟ್ಟರಾದರೂ ನಾಯಿ ಮಕ್ಕಳನ್ನು



ಕಚ್ಚಿ ಗಾಯಗೊಳಿಸಿದೆ. ಅಂತಿಮವಾಗಿ ನಾಯಿಗೆ ಕೋಲಿನಿಂದ ಹೊಡೆದು ಅಜ್ಜಿ ಮಕ್ಕಳನ್ನು ರಕ್ಷಿಸಿದ್ದಾರೆ ಎನ್ನಲಾಗಿದೆ.

ಸಾರ್ವಜನಿಕರ ಆಕ್ರೋಶ: ಇತ್ತೀಚಿನ ದಿನಗಳಲ್ಲಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿದ್ದು, ಮನ್ವಿತಾ ಸೇರಿದಂತೆ ನಾಲ್ವರು ಮಕ್ಕಳನ್ನು ಕಚ್ಚಿ ಗಾಯಗೊಳಿಸಿದೆ. ಪುರಸಭೆ ವ್ಯಾಪ್ತಿ



ನಾಯಿ ಹಾಗೂ ಹಂದಿಗಳ ಹಾವಳಿ ನಿಯಂತ್ರಿಸುವಲ್ಲಿ ಪುರಸಭೆ ವಿಫಲವಾಗಿದ್ದು, ಸಾರ್ವಜನಿಕರು ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಂಸದಂಗಡಿಗಳಿಂದ ನಾಯಿಗಳ ಹಾವಳಿ: ಕೊಳಚೆ ಪ್ರದೇಶದಂತಿರುವ ವಿನಾಯಕ ಕಾಲೋನಿ ಪಟ್ಟಣದ ಲಿಂಕ್ ರಸ್ತೆಗೆ ಹೊಂದಿಕೊಂಡಂತಿದ್ದು, ರಸ್ತೆ ಪಕ್ಕದಲ್ಲೇ ಅಶುಚಿತ್ವದಿಂದ ಕೂಡಿದ ಮಾಂಸದ ಗೂಡಂಗಡಿಗಳಿವೆ. ಮಾಂಸದ ಅಂಗಡಿ ಹಿಂದಿನ ಸಾಲಿನಲ್ಲೇ ವಿನಾಯಕ ಕಾಲೋನಿ ನಿವಾಸಿಗಳು ವಾಸವಾಗಿದ್ದಾರೆ. ಮಾಂಸದಂಗಡಿಗಳಲ್ಲಿ ಬೇಡದ ತ್ಯಾಜ್ಯಗಳನ್ನು ರಸ್ತೆಗೆ ಎಸೆಯುತ್ತಿದ್ದು, ಅದನ್ನು ತಿಂದು ರುಚಿ ಕಂಡಿರುವ ನಾಯಿಗಳು ಕಾಲೋನಿಗೆ ನುಗ್ಗಿ ಮಕ್ಕಳ ಮೇಲೆ ಆಕ್ರಮಣ ಮಾಡುತ್ತಿವೆ. ಮಾಂಸದಂಗಡಿ ಗಳನ್ನು ಎತ್ತಂಗಡಿ ಮಾಡಿಸಿ ಕಾಲೋನಿ ನಿವಾಸಿಗಳು ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಮಾಡಿಕೊಡುವಂತೆ ಪುರಸಭೆ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ ಹಲವು ಬಾರಿ ಮನವಿ ಮಾಡಿದ್ದರೂ ಪುರಸಭೆ ಮಾತಿಗೆ ಮನ್ನಣೆ ನೀಡದ ಹಿನ್ನೆಲೆಯಲ್ಲಿ ನಾಯಿಕಡಿತ ಪ್ರಕರಣಗಳು ಹೆಚ್ಚಾಗಿವೆ ಎನ್ನಲಾಗಿದೆ.

ಪುರಸಭೆ ಮುಖ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿಗಳಿಗೆ ಹಲವು ಬಾರಿ ನಾಯಿಗಳನ್ನು ಹಿಡಿಸುವಂತೆ ಮನವಿ ಮಾಡಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಮುಖ್ಯಾಧಿಕಾರಿಗಳ ಬೇಜವಾಬ್ದಾರಿಯಿಂದಲೇ ಇಂತಹ ಪ್ರಕರಣಗಳು ಹೆಚ್ಚಾಗಿದೆ. ಈಗಲಾದರೂ ಪುರಸಭೆ ಅಧಿಕಾರಿಗಳು ಸಮಸ್ಯೆಗೆ ಪರಿಹಾರ ಕಂಡು ಹಿಡಿದು ಬೀದಿ ನಾಯಿ ಹಾವಳಿ ತಪ್ಪಿಸುವ ಜೊತೆಗೆ ಪುರಸಭೆ ವ್ಯಾಪ್ತಿ ತುಂತುರು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇರುವುದರಿಂದ ಅಗತ್ಯಕ್ರಮ ಕೈಗೊಳ್ಳಬೇಕು.

- ಎಂ.ರಾಘವೇಂದ್ರ, ಪುರಸಭೆ ಮಾಜಿ ಸದಸ್ಯ

ವಿದ್ಯಾರ್ಥಿಗಳು ಮಾನವೀಯ ಮೌಲ್ಯ ಅಳವಡಿಸಿಕೊಳ್ಳಿ



ವಿಶೇಷ ವಾರ್ಷಿಕ ಶಿಬಿರವನ್ನು ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ಸುಬ್ಬಣ್ಣ ಉದ್ಘಾಟಿಸಿದರು.

ನಂಜನಗೂಡು, ಮಾ.18– ಜ್ಞಾನ, ವಿಜ್ಞಾನ ಮತ್ತು ತಾಂತ್ರಿಕ ಯುಗದಲ್ಲಿ ಯುವ ಜನತೆ ಯಾಂತ್ರಿಕವಾಗಿ ಬದುಕುತ್ತಿದ್ದು, ಮಾನವೀಯ ಮೌಲ್ಯಗಳ ಅಗತ್ಯತೆ ಅರಿಯುವಲ್ಲಿ ವಿಫಲವಾಗುತ್ತಿದ್ದಾರೆ ಎಂದು ನಿವೃತ್ತ ಪ್ರಾಂಶುಪಾಲ ಪ್ರೊ.ಸಿ. ಸುಬ್ಬಣ್ಣ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ಕುರಹಟ್ಟಿಯಲ್ಲಿ ನಗರದ ಜೆಎಸ್‌ಎಸ್ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸಂಯುಕ್ತಾಶ್ರಯದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರದ ಮಡಿಲಿನಲ್ಲಿ ಬೆಳೆಯುತ್ತಿರುವ ಗ್ರಾಮೀಣ ಸೊಗಡಿನ ವಿದ್ಯಾರ್ಥಿಗಳು, ಹೆತ್ತ ತಾಯಿ, ತಂದೆ ಹಾಗೂ ವಿದ್ಯೆ ಕಲಿಸಿದ ಗುರುಗಳನ್ನು ತಿರಸ್ಕರಿಸದೇ, ಕೇವಲ ಪದವೀಧರರಾಗದೆ ವಿದ್ಯಾವಂತರಾಗಿ ಆದರ್ಶ, ಜವಾಬ್ದಾರಿಯುತ ಪ್ರಜೆಗಳಾಗಿ ರೂಪುಗೊಳ್ಳಲು ಇಂತಹ ಶಿಬಿರಗಳು ಪೂರಕವಾಗಿದ್ದು, ಶಿಬಿರಾರ್ಥಿಗಳು ಸಂಸ್ಕೃತಿ, ಸಂಸ್ಕಾರ ಮತ್ತು ಪರಂಪರೆಯಂತಹ ಮೌಲಿಕ ಅಂಶಗಳನ್ನು ರೂಢಿಸಿಕೊಂಡು ಪ್ರಜ್ಞಾವಂತ–ವಿದ್ಯಾವಂತರಾಗಿ, ಸತ್ಪ್ರಜೆಗಳಾಗಿ ಹೊರಹೊಮ್ಮಬೇಕೆಂದು ಹೇಳಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ಮಹೇಶ್ ಮಾತನಾಡಿ, ವಿದ್ಯಾರ್ಥಿಗಳು ನೈರ್ಮಲ್ಯ, ಶೌಚಾಲಯದ ಬಳಕೆ, ಕುಡಿಯುವ ನೀರಿನ ಸದ್ಬಳಕೆ, ಬಯಲು ಬಹಿರ್ದೆಸೆ ನಿರ್ಮೂಲನೆ ಹಾಗೂ ಆರೋಗ್ಯದ ಬಗ್ಗೆ ಜನತೆಯಲ್ಲಿ ಅರಿವು ಮೂಡಿಸುವುದರೊಂದಿಗೆ ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಸಾಕಾರಗೊಳಿಸುವ ನಿಟ್ಟಿನಲ್ಲಿ ಸ್ವಯಂ ಪ್ರೇರಿತರಾಗಿ ಸೇವೆ ಸಲ್ಲಿಸಿ, ದೇಶದ ಸತ್ಪ್ರಜೆಗಳಾಗುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ ರೂಪಿಸಿರುವ ಕಾರ್ಯಕ್ರಮಗಳು ಪೂರಕವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಸಿ.ಎಸ್.ಹೊನ್ನೇಗೌಡ, ಪ್ರೊ.ಶಿವಬಸಪ್ಪ, ಡಾ.ಎನ್.ಜಿ.ಲೋಕೇಶ್, ಹೊಣಕಾರ ನಾಯಕ, ಶಾಂತಮಲ್ಲು, ಲತಾ, ನಾಗಮ್ಮ, ಹೊನ್ನಪ್ಪ, ಗುರುಮಲ್ಲಪ್ಪ, ಪುಟ್ಟಸ್ವಾಮಿ, ಚಿಕ್ಕಮಹದೇವಯ್ಯ, ಮಂಗಳಮ್ಮ ಉಪಸ್ಥಿತರಿದ್ದರು.

ಮೊಬೈಲ್ ಸಂಸ್ಕೃತಿ ಕೈಬಿಡಿ; ಪುಸ್ತಕ ಓದಿ ಜ್ಞಾನವಂತರಾಗಿ

● ವಿದ್ಯಾರ್ಥಿಗಳಿಗೆ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಸಲಹೆ ● ಫೇಸ್‌ಬುಕ್ ಬದಲು ಪುಸ್ತಕದ ಪುಟ ತಿರುಗಿಸಿ ● ಮೊಬೈಲ್ ಬಳಕೆಗೆ ಇತಿಮಿತಿ ಇರಲಿ ● ಸವಾಲು ಎದುರಿಸಿ ಗುರಿ ಮುಟ್ಟಿ ● ಜೀವನದ ಮೌಲ್ಯಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಮಾನಸ ಯುವ ಸಂವರ್ಧನೆ–2025 ಔದ್ಯೋಗಿಕ ಮತ್ತು ಯುವ ಸಬಲೀಕರಣ ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಉದ್ಘಾಟಿಸಿದರು.

ಶಿಕ್ಷಣದಿಂದ ಬಡತನ ಮರೆಯಾಗುತ್ತದೆ

ಬಡತನದಿಂದ ಹೊರಗೆ ಬರಲು ಶಿಕ್ಷಣ ಬಹಳ ಮುಖ್ಯ. ಓದಿನ ಮೂಲಕ ಸಾಧನೆ ಮಾಡಿದರೆ ಬಡತನ ಮರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಒಳ್ಳೆಯ ಪುಸ್ತಕಗಳನ್ನು ಓದಿ ಜ್ಞಾನವಂತರಾಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಸಲಹೆ ನೀಡಿದರು.

ಪ್ರತಿಯೊಬ್ಬರಿಗೂ ಒಳ್ಳೆಯ ಮಾರ್ಗ ಹಾಗೂ ಕೆಟ್ಟ ಮಾರ್ಗ ಎಂಬ ಎರಡು ಆಯ್ಕೆ ಇರುತ್ತದೆ. ಇದನ್ನು ಪರಾಮರ್ಶಿಸಿ ಒಳ್ಳೆಯ ಮಾರ್ಗದಲ್ಲಿ ಸಾಗಬೇಕು ಎಂದರು.

ಮೊಬೈಲ್ ಪಕ್ಕಕ್ಕಿಟ್ಟು ಎರಡು ದಿನಗಳ ಕಾರ್ಯಾಗಾರದ ವಿಚಾರಗಳ ಬಗ್ಗೆ ಮಂಥನ ಮಾಡಬೇಕು. ಕೃತಕ ಬುದ್ಧಿಮತ್ತೆ ಸೇರಿದಂತೆ ಹಲವು ಹೊಸ ವಿಚಾರಗಳ ಬಗ್ಗೆ ಶ್ರದ್ಧೆಯಿಂದ ಕೇಳಬೇಕು. ಆರೋಗ್ಯದ ಬಗ್ಗೆ ಕೂಡ ವಿದ್ಯಾರ್ಥಿಗಳು ಗಮನ ನೀಡಬೇಕು ಎಂದು ಪ್ರೊ. ಲೋಕನಾಥ್ ಹೇಳಿದರು.

ಮೈಸೂರು, ಮಾ.18(ಬಿಎಲ್‌ಯು)– ಮೊಬೈಲ್ ಸಂಸ್ಕೃತಿ ಕೈಬಿಡಿ, ಪುಸ್ತಕ ಓದುವುದನ್ನು ರೂಢಿಸಿಕೊಳ್ಳಿ. ಪುಸ್ತಕ ಪ್ರೀತಿ ಬೆಳೆಸಿಕೊಂಡರೆ ಅದ್ಭುತ ಜ್ಞಾನದೊಂದಿಗೆ ಜೀವನದಲ್ಲಿ ಸಾಧನೆ ಮಾಡಬಹುದು ಎಂದು ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಇಂದು ಆಯೋಜಿಸಿದ್ದ ಮಾನಸ ಯುವ ಸಂವರ್ಧನೆ–2025 ಔದ್ಯೋಗಿಕ ಮತ್ತು ಯುವ ಸಬಲೀಕರಣ ಕುರಿತ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಟ್ವಿಟರ್, ಫೇಸ್‌ಬುಕ್ ಸೇರಿದಂತೆ ಹಲವು ರೀತಿಯ ಸೋಷಿಯಲ್ ಮೀಡಿಯಾದಲ್ಲಿ ನಮಗೆ ಎಷ್ಟು ಫಾಲೋವರ್ಸ್ ಇದ್ದಾರೆ ಎಂಬುದಕ್ಕಿಂತ ನಾನು ಎಷ್ಟು ಪುಸ್ತಕ ಓದಿದ್ದೇನೆ ಎಂಬುದು ಮುಖ್ಯವಾಗುತ್ತದೆ ಎಂದು ಹೇಳಿದರು.

ಫೇಸ್‌ಬುಕ್ ನೋಡುವುದಕ್ಕಿಂತ ಪುಸ್ತಕದ ಪುಟ ತಿರುಗಿಸಿ ನೋಡುವ ಹವ್ಯಾಸ ಬೆಳೆಸಿಕೊಳ್ಳಬೇಕು. ಸಾಧನೆ ಮಾಡಿದ ವ್ಯಕ್ತಿಗಳ ಜೊತೆ ನೀವು ಸೆಲ್ಫಿ ತೆಗೆದುಕೊಳ್ಳುವುದಕ್ಕಿಂತ, ನಿಮ್ಮ ಜೊತೆ ಇತರರು ಸೆಲ್ಫಿ ತೆಗೆದುಕೊಳ್ಳುವ ಎತ್ತರಕ್ಕೆ ನೀವು ಬೆಳೆಯಬೇಕು ಎಂದು ಕಿವಿಮಾತು ಹೇಳಿದರು.

ಬಹಳಷ್ಟು ಮಂದಿ ಮೊಬೈಲ್‌ಗೆ ದಾಸರಾಗಿರುತ್ತಾರೆ. ಪುಸ್ತಕ ಮತ್ತು ಮೊಬೈಲ್‌ನಲ್ಲಿ ಯಾವುದು ಮುಖ್ಯ ಎಂಬ ಆಯ್ಕೆ ಬರುತ್ತದೆ. ಆಗ ಮೊಬೈಲ್ ಬಿಟ್ಟರು ಕಷ್ಟ, ಮೊಬೈಲ್ ಇಲ್ಲದಿದ್ದರೂ ಕಷ್ಟ ಎಂಬ ಪರಿಸ್ಥಿತಿ. ಆದರೆ ಮೊಬೈಲ್ ಬಳಕೆಯಲ್ಲಿ ಇತಿಮಿತಿ ಇರಬೇಕು. ಅದರಲ್ಲಿರುವ ಸಕಾರಾತ್ಮಕ ವಿಚಾರಗಳನ್ನು ಕಲೆ ಹಾಕಿ ಮಂಥನ ಮಾಡಬೇಕು, ಜ್ಞಾನವಂತರಾಗಬೇಕು ಎಂದು ತಿಳಿಸಿದರು.

ನಶಿಸಿ ಹೋಗುವ ವಸ್ತುಗಳಿಗಿಂತ ನಶಿಸಿ ಹೋಗದ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಜೀವನದಲ್ಲಿ ಹಣ ಕೊಟ್ಟು ಎಲ್ಲವನ್ನು ಖರೀದಿ ಮಾಡಬಹುದು. ಆದರೆ ಸಕಾರಾತ್ಮಕ ಅಂಶಗಳಿರುವ ಮೌಲ್ಯಗಳನ್ನು ಎಷ್ಟೇ ಹಣ ಕೊಟ್ಟರೂ ಖರೀದಿ ಮಾಡಲು ಸಾಧ್ಯವಿಲ್ಲ ಎಂದು ಡಾ.ಕುಮಾರ್ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.

ಜನ ಹಲವು ವಸ್ತುಗಳನ್ನು ಕಳವು ಮಾಡುತ್ತಾರೆ. ಆದರೆ, ಪುಸ್ತಕ ಕಳವು ಮಾಡಿ ಶ್ರದ್ಧೆಯಿಂದ ಓದಿದರೆ ಅವನು ನಿಜವಾದ ಓದುಗನಾಗಿರುತ್ತಾನೆ. ಹೆಚ್ಚು ಜ್ಞಾನವಂತನಾಗಬೇಕೆಂಬ ತುಡಿತ ಅವನಲ್ಲಿರುತ್ತದೆ ಎಂದು ಡಾ.ಕುಮಾರ್ ಹೇಳಿದರು.

ನಾವು ಸ್ಮಾರ್ಟ್ ಆಗಿದ್ದರೆ ಸಾಲದು, ನಮ್ಮ ಸಾಧನೆಯ ಗುರಿ ಕೂಡ ಸ್ಮಾರ್ಟ್ ಆಗಿರಬೇಕು. ಯಾವುದೇ ಗೊಂದಲವಿಲ್ಲದ, ಸ್ಪಷ್ಟತೆ ಮತ್ತು ನಿಖರತೆ ಗುರಿ ತಲುಪುವ ಸಾಮರ್ಥ್ಯ ಹೊಂದಿರಬೇಕು. ಇದಕ್ಕಾಗಿ ಕಠಿಣ ಪರಿಶ್ರಮಪಡಬೇಕು ಎಂದರು.

ವ್ಯಕ್ತಿಯೊಬ್ಬನ 75 ವರ್ಷದ ಜೀವಿತಾವಧಿಯಲ್ಲಿ ದಿನಕ್ಕೆ 8 ಗಂಟೆಯಂತೆ ಲೆಕ್ಕ ಮಾಡಿದರೂ 25 ವರ್ಷ ಮಲಗಿರುತ್ತಾನೆ. ಬಾಲ್ಯ ಮತ್ತು ಯೌವನದಲ್ಲಿ 25 ವರ್ಷ ಕಳೆದು ಹೋಗುತ್ತದೆ. ಉಳಿದ 25 ವರ್ಷಗಳು ನಮಗೆ ಗುಣಮಟ್ಟದ ಬದುಕು ಇರುತ್ತದೆ. ಆದ ಕಾರಣ ಮಿಂಚಿನಂತೆ ಕಳೆದು ಹೋಗುವ ಸಮಯದ ಮೌಲ್ಯಕ್ಕೆ ಬೆಲೆ ನೀಡಿ. ಕಾಲ ವ್ಯರ್ಥ ಮಾಡದೆ ಜೀವನದಲ್ಲಿ ಏನಾದರೊಂದು ಸಾಧನೆ ಮಾಡಿ. ನಾವು ಅಗಲಿದರೂ ನಮ್ಮ ಸಾಧನೆ ಹೆಜ್ಜೆ ಗುರುತು ಮುಂದಿನ ಪೀಳಿಗೆಗೆ ಆದರ್ಶವಾಗಿರಬೇಕು ಎಂದು ಹೇಳಿದರು.

ಗುರಿ ಮುಟ್ಟಲು ಎದುರಾಗುವ ಅಡೆತಡೆಗಳನ್ನು ದಾಟಿ ಗುರಿ ಸಾಧಿಸಬೇಕು. ಕುಗ್ಗದೆ ಹಿಗ್ಗಿ ನಾನು ಸವಾಲುಗಳನ್ನು ಎದುರಿಸಿ ಸಾಧನೆ ಮಾಡಿದ್ದೇನೆ ಎಂಬ ಹೆಮ್ಮೆ ಇರಬೇಕು. ಸವಾಲು ಎದುರಿಸಲು ಹಿಂದೇಟು ಹಾಕಿದರೆ ನಿಮ್ಮ ಸಾಮರ್ಥ್ಯ ನಿಮಗೆ ಅರ್ಥವಾಗುವುದಿಲ್ಲ. ಅಡೆತಡೆ ದಾಟಿ ನದಿ ಸಮುದ್ರ ಸೇರುವಂತೆ ನೀವು ಗುರಿ ಮುಟ್ಟಬೇಕು ಎಂದು ವಿದ್ಯಾರ್ಥಿಗಳಿಗೆ ಡಾ.ಕುಮಾರ್ ಟಿಪ್ಸ್ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಗನ ಕುಸುಮ(ಕ) + ರಾಬರ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಕ್ರಾಂತಿಕು ವಸ್ತುನಾರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಸ್ವೀಟ್ ಹಾರ್ಟ್(ತ)	4 ಪ್ರದರ್ಶನಗಳು
ಸಂಗಂ	
ಕೋರ್ಟ್(ತೆ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಸ್ಟರ್ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಡಿಪ್ಲೊಮೆಟ್ (ಹಿಂ): ಬೆ.10ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ಇಂಟರ್‌ಸ್ಟೆಲ್ಲರ್ (ಇಂ): ಮ.3.40ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ನೊವೊಕೇನ್ (ಇಂ): ಬೆ.10.30ಕ್ಕೆ, ರಾ.10.20ಕ್ಕೆ, ಡ್ರ್ಯಾಗನ್ (ತ): ಮ.1ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಸಂ.4.10ಕ್ಕೆ, ದಿಲ್‌ರೂಬ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಡ್ರ್ಯಾಗನ್ (ತ): ಬೆ.10ಕ್ಕೆ, ಸ್ವೀಟ್‌ಹಾರ್ಟ್ (ತ): ಮ.1.05ಕ್ಕೆ, ಅ (ಕ): ಸಂ.4.10ಕ್ಕೆ, ಛಾವಾ (ಹಿಂ): ರಾ.7.10ಕ್ಕೆ, ದಿ ಡಿಪ್ಲೊಮೆಟ್ (ಹಿಂ): ಬೆ.10
ಸ್ಕ್ರೀನ್ 4	ಅಪ್ಪು (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.30ಕ್ಕೆ, ಪೆರುಸು (ತ): ಸಂ.6.30ಕ್ಕೆ, ಸ್ವೀಟ್ ಹಾರ್ಟ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅಪ್ಪು (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ದಿಲ್‌ರೂಬಾ (ತೆ): ರಾ.9.25ಕ್ಕೆ.
ಸ್ಕ್ರೀನ್ 3	ಛಾವಾ (ಹಿಂ): ಸಂ.6.10ಕ್ಕೆ, ಅಪ್ಪು (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆಯಿಂದ ಸಂತ ಫಿಲೋಮಿನಾ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ

ಮೈಸೂರು, ಮಾ.18(ಜಿಎ)–ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಮಾ.20, 21ರಂದು ಅಂತಾರಾಷ್ಟ್ರೀಯ ಸಮ್ಮೇಳನವನ್ನು ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ರೆ.ಡಾ.ಲೂರ್ದ್ ಪ್ರಸಾದ್ ಜೋಸೆಫ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 20ರಂದು ಬೆಳಿಗ್ಗೆ 10ಗಂಟೆಗೆ ನಿವೃತ್ತ ಡಿಜಿಪಿ ಡಾ.ಡಿ.ವಿ.ಗುರುಪ್ರಸಾದ್ ಸಮ್ಮೇಳನವನ್ನು ಉದ್ಘಾಟಿಸುವರು. ಅಮೆರಿಕದ ಬೌಲಿಂಗ್ ಗ್ರೀನ್ ಸ್ಟೇಟ್ ಯೂನಿವರ್ಸಿಟಿಯ ಪ್ರಾಧ್ಯಾಪಕ ಪ್ರೊ.ಶ್ರೀನಿವಾಸ್ ಮೇಲುಕೋಟೆ ಮುಖ್ಯ ಭಾಷಣ ಮಾಡಲಿದ್ದಾರೆ. ಮೈಸೂರು ಧರ್ಮಪ್ರಾಂತ್ಯದ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಡಾ.ಎಂ.ಕೆ.ವೇಣುಗೋಪಾಲಗೌಡ ಮಾತನಾಡಿ, ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ದೇಶದ 28 ರಾಜ್ಯಗಳ 155 ಸಂಶೋಧನಾರ್ಥಿಗಳು ಹಾಗೂ ಶಿಕ್ಷಣ ತಜ್ಞರು ಮತ್ತು ಸಂಶೋಧನಾ ಲೇಖನವನ್ನು ಮಂಡಿಸಲಿದ್ದಾರೆ. ದೇಶ, ವಿದೇಶಗಳ ತಜ್ಞರು ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಕಾಲೇಜಿನ 7 ಕಡೆಗಳಲ್ಲಿ ಚರ್ಚಾಗೋಷ್ಠಿಗಳು ನಡೆಯಲಿವೆ 20ರಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ರವಿ ಜೆ.ಡಿ.ಸಲ್ಡಾನ್ಹಾ, ಸಮ್ಮೇಳನದ ಸಂಯೋಜಕರಾದ ಡಾ. ಎಚ್.ಎಸ್.ವಾಗ್ದೇವಿ ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮುಕ್ತ ವಿವಿ ನೌಕರರ ಪ್ರತಿಭಟನೆ

ಕುಲಸಚಿವರ ಕಚೇರಿ ಬಾಗಿಲಿಗೆ ನೋಟಿನ ತೋರಣ ಕಟ್ಟಿ ಧಿಕ್ಕಾರ ಕೂಗಿದ ಪ್ರತಿಭಟನಾಕಾರರು



ಕೆಎಸ್‌ಒಯು ಕುಲಸಚಿವರ ಕಚೇರಿ ಬಾಗಿಲಿಗೆ ನೋಟಿನ ತೋರಣ ಕಟ್ಟಿ ಕುಲಸಚಿವರಿಗೆ ಧಿಕ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿ, ಕಾಯಂ ನೌಕರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.18(ಜಿಎ)–ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಕಾಯಂ ನೌಕರರ ಸಂಘದ ವತಿಯಿಂದ ವಿವಿಯ ಕುಲಸಚಿವರ ಕಚೇರಿ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಕುಲಸಚಿವರ ಕಚೇರಿ ಬಾಗಿಲಿಗೆ ನೋಟಿನ ತೋರಣ ಕಟ್ಟಿ ಕುಲಸಚಿವರಿಗೆ ಧಿಕ್ಕಾರ ಧಿಕ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿ, ಕೆಎಸ್‌ಒಯು ಸಿಬ್ಬಂದಿಗಳ ವರ್ಗಾವಣೆ, ಪದನಾಮ ಬದಲಾವಣೆ, ಪದೋನ್ನತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ಕೆಎಸ್‌ಒಯು ಆಡಳಿತ ಮಂಡಳಿ ಕೈಗೊಂಡಿರುವ ಕೆಲವೊಂದು ಕ್ರಮ, ನಿರ್ಣಯಗಳಿಂದ ವಿಶ್ವವಿದ್ಯಾನಿಲಯ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಮಾರಕವಾಗಿದೆ. ವಿವಿಗೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರರ ಹುದ್ದೆಗಳಿಗಿಂತಲೂ ಹೆಚ್ಚು ಹಾಗೂ ನಿಯಮ ಉಲ್ಲಂಘಿಸಿ ತಾತ್ಕಾಲಿಕವಾಗಿ ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದು, ಈ ನೇಮಕಾತಿಯನ್ನು ಕೂಡಲೇ ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕಿದೆ. ವಿಶ್ವವಿದ್ಯಾನಿಲಯ ಪ್ರಾದೇಶಿಕ, ಜಿಲ್ಲಾ ಕೇಂದ್ರಗಳ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸುವುದು ಹಾಗೂ ಹಾಲಿ ತಾಲೂಕು, ಗ್ರಾಮಗಳ ಮಟ್ಟದಲ್ಲಿ ಪ್ರಾರಂಭಿಸಿರುವ ಪ್ರಾದೇಶಿಕ ಕೇಂದ್ರಗಳನ್ನು ಮುಚ್ಚಲು ಕ್ರಮ ವಹಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕೆಲ ವರ್ಷಗಳಿಂದ ವಿವಿಯ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ಆರ್ಥಿಕ ಅಭದ್ರತೆ ಕಾಡುತ್ತಿರುವ ಹಿನ್ನೆಲೆಯಲ್ಲಿ ಕಳೆದ 5 ವರ್ಷಗಳ ಜಮಾ ಖರ್ಚಿನ ಅಂಕಿ ಅಂಶಗಳನ್ನು ಬ್ಯಾಂಕಿನ ಹೆಸರಿನೊಂದಿಗೆ ಒದಗಿಸಿ ಹಾಗೂ ವಿವಿಯ ವೇತನ ಮತ್ತು ಪಿಂಚಣಿಗೆ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವ ಹಣದ ಮಾಹಿತಿಯನ್ನು ಬಿಡುಗಡೆಗೊಳಿಸಿ ಎಂದು ಒತ್ತಾಯಿಸಿದರು.

ವಿಶ್ವವಿದ್ಯಾನಿಲಯದಲ್ಲಿ ನಿಗದಿಪಡಿಸಲಾಗಿರುವ ಪ್ರತ್ಯೇಕ ವೇತನ ಮತ್ತು ಪಿಂಚಣಿ ನಿಧಿಗಳನ್ನು ಯಾವುದೇ ಸಂದರ್ಭದಲ್ಲೂ ಇತರೆ ವೆಚ್ಚಗಳಿಗೆ ಬಳಕೆ ಮಾಡದಂತೆ ತುರ್ತಾಗಿ ಪರಿನಿಯಮ ರಚಿಸಿ, ವಿವಿಯಲ್ಲಿ ಯಾವುದೇ ಕಟ್ಟಡ ಕಾಮಗಾರಿ, ಹೊಸ ಯೋಜನೆ ಪ್ರಾರಂಭಿಸಿದೆ ಸ್ಥಗಿತಗೊಳಿಸುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷ ಎಸ್.ಎನ್. ಸತೀಶ್, ಉಪಾಧ್ಯಕ್ಷ ನಾಗೇಂದ್ರ, ಕಾರ್ಯದರ್ಶಿ ಎನ್.ಪ್ರದೀಪ್ ಗಿರಿ, ಟಿ.ರವೀಂದ್ರ, ಗೀತ, ಸಿ.ಎಂ.ಕೃಷ್ಣೇಗೌಡ, ಬಸವರಾಜು, ಹೆಚ್.ಎಂ.ನಾಗರಾಜ ಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ರೇಣುಕಾಸ್ವಾಮಿ ಹತ್ಯೆ ಕೇಸ್: ಏ.2ಕ್ಕೆ ದರ್ಶನ್ ಜಾಮೀನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ



ನವದೆಹಲಿ, ಮಾ.18– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳಿಗೆ ಹೈಕೋರ್ಟ್ ನೀಡಿದ ಜಾಮೀನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಏ.2ಕ್ಕೆ ವಿಚಾರಣೆ ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಜಾಮೀನು ಪ್ರಶ್ನಿಸಿ ಬೆಂಗಳೂರು ಪೊಲೀಸರು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ಇಂದು ನಡೆಯಬೇಕಿತ್ತು. ವಿಚಾರಣೆಗೆ ಪಟ್ಟಿಯಾಗದ ಹಿನ್ನೆಲೆಯಲ್ಲಿ ದರ್ಶನ್ ಪ್ರಕರಣದಲ್ಲಿನ ರಾಜ್ಯದ ವಿಶೇಷ ವಕೀಲ ಅನಿಲ್ ನಿಶಾನಿ ಅರ್ಜಿ ವಿಚಾರಣೆ ನಡೆಸುವಂತೆ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಕೋರ್ಟ್ ಏ.2ರಂದು ವಿಚಾರಣೆ ನಡೆಸಲಾಗುವುದು ಎಂದು ಹೇಳಿದೆ.

ಕಳೆದ ವಿಚಾರಣೆಯಲ್ಲಿ ಅರ್ಜಿ ವಿಚಾರಣೆಗೆ ಒಪ್ಪಿಕೊಂಡಿದ್ದ ಸುಪ್ರೀಂಕೋರ್ಟ್ ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿತ್ತು ಮೂಲಗಳ ಪ್ರಕಾರ ಈವರೆಗೂ ದರ್ಶನ್ ಸುಪ್ರೀಂ ಕೋರ್ಟ್ ನೋಟಿಸ್‌ಗೆ ಪ್ರತಿಕ್ರಿಯಿಸಿಲ್ಲ ಹಾಗೂ ಅವರ ವಕೀಲರು ವಕಾಲತ್ತು ಕೂಡ ಹಾಕಿಲ್ಲ.

ಹೈಕೋರ್ಟ್‌ನಲ್ಲಿ ಗೆಲುವು ಪಡೆದಂತೆ ಸುಪ್ರೀಂಕೋರ್ಟ್‌ನಲ್ಲಿಯೂ ಗೆಲುವು ಪಡೆಯಲು ಖ್ಯಾತ ಹಿರಿಯ ವಕೀಲ ಕಪಿಲ್ ಸಿಬಲ್ ಅವರನ್ನು ದರ್ಶನ್ ಕುಟುಂಬದವರು ನೇಮಿಸಿಕೊಂಡಿದ್ದಾರೆ. ಹೈಕೋರ್ಟ್‌ನಲ್ಲಿ ನಡೆದವಾದ ಪ್ರತಿವಾದದ ಎಲ್ಲ ದಾಖಲೆ ನೀಡಲಾಗಿದೆ ಎನ್ನಲಾಗಿತ್ತು. ಆದರೆ ಈ ಬಗ್ಗೆ ಸದ್ಯಕ್ಕೆ ಯಾವುದೇ ಬೆಳವಣಿಗೆ ಕಂಡು ಬಂದಿಲ್ಲ.

ನಟ ದರ್ಶನ್ 131 ದಿನಗಳ ಜೈಲುವಾಸದ ನಂತರ ವೈದ್ಯಕೀಯ ಕಾರಣಗಳನ್ನು ಉಲ್ಲೇಖಿಸಿ ಅ.30 ರಂದು ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ನಂತರ ಹೈಕೋರ್ಟ್ ಡಿ.13 ರಂದು ದರ್ಶನ್ ಮತ್ತು ಪ್ರಮುಖ ಆರೋಪಿ ಪವಿತ್ರಗೌಡ ಸೇರಿದಂತೆ ಇತರ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿತ್ತು.

ನಡೆದುಕೊಂಡು ಹೋಗುತ್ತಿದ್ದವರ ಮೇಲೆ ಬಿದ್ದ ವಿದ್ಯುತ್ ಕಂಬ; ಗರ್ಭಿಣಿ ಸೇರಿ ಇಬ್ಬರು ಮಹಿಳೆಯರ ಸಾವು



ಬೆಂಗಳೂರು: ವಿದ್ಯುತ್ ಕಂಬ ತಲೆ ಮೇಲೆ ಬಿದ್ದು 4 ತಿಂಗಳ ಗರ್ಭಿಣಿ ಸೇರಿ ಇಬ್ಬರು ಮಹಿಳೆಯರು ಮೃತಪಟ್ಟಿರುವ ಘಟನೆ ನಗರದ ಸದ್ದುಗುಂಟೆಪಾಳ್ಯದಲ್ಲಿ ನಡೆದಿದೆ.

ಸೋಮವಾರ ಈ ಘಟನೆ ನಡೆದಿದ್ದು, ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸುಮತಿ (35) ಮತ್ತು ಸೋನಿ (36) ಮೃತಪಟ್ಟಿದ್ದಾರೆ. ಇಬ್ಬರು ತಮ್ಮ ಮಕ್ಕಳನ್ನು ಟ್ಯೂಷನ್‌ನಿಂದ ಕರೆದುಕೊಂಡು ಬರಲು ಹೋಗುತ್ತಿರುವಾಗ ಈ ಅವಘಡ ಸಂಭವಿಸಿದೆ.

ರಸ್ತೆ ಕಾಮಗಾರಿ ನಡೆಯುವ ವೇಳೆ ಬೆಳಿಗ್ಗೆ ವಿದ್ಯುತ್ ಕಂಬಕ್ಕೆ ಜೆಸಿಬಿ ಡಿಕ್ಕಿ ಹೊಡೆದಿತ್ತು. ಸಂಜೆ ಕಂಬ ಮಹಿಳೆಯರ ಮೇಲೆ ಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಬೈಯಪ್ಪನಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ರಸ್ತೆ ಕಾಮಗಾರಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ರಸ್ತೆ ಕಾಮಗಾರಿಯ ವೇಳೆ ಜೆಸಿಬಿ ಡ್ರೈವರ್ ಕಿವಿಗೆ ಹೆಡ್‌ಫೋನ್ ಹಾಕಿಕೊಂಡು ಕೆಲಸ ಮಾಡುತ್ತಿದ್ದ. ಈ ವೇಳೆ ಲೈಟ್ ಕಂಬದಿಂದ ಬೇರೆ ಕಡೆಗೆ ಕನೆಕ್ಟ್ ಮಾಡಿದ್ದ ವೈಯರ್‌ಗೆ ಜೆಸಿಬಿಯ ಮುಂಭಾಗ ಟಚ್ ಆಗಿದೆ. ಜನ ಜೋರಾಗಿ ಕೂಗಿಕೊಂಡರೂ ಡ್ರೈವರ್ ಕೇಳಿಸಿಕೊಳ್ಳದೇ ವೈಯರ್ ಎಳೆದಿರುವುದೇ ಘಟನೆಗೆ ಕಾರಣ ಎಂದು ಆರೋಪಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಕೆಲವು ಸ್ಪಷ್ಟನೆ ನೀಡುವಂತೆ ಲೋಕಾಯುಕ್ತರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಸೂಚನೆ

ವಕೀಲರ ನೆರವಿಲ್ಲದೆ ಸ್ವತಃ ವಾದ ಮಂಡಿಸಿದ ಸ್ನೇಹಮಯಿ ಕೃಷ್ಣ



ಮೈಸೂರು, ಮಾ.18(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಂಬಂಧ ಕೆಲವು ಸ್ಪಷ್ಟನೆ ನೀಡುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಲೋಕಾಯುಕ್ತ ತನಿಖಾಧಿಕಾರಿ ಟಿ.ಜೆ. ಉದೇಶ್ ಅವರಿಗೆ ಸೂಚನೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರು ಮುಡಾದಿಂದ ಅಕ್ರಮವಾಗಿ ನಿವೇಶನ ಪಡೆದಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ತನಿಖೆ ನಡೆಸಿದ ಮೈಸೂರಿನ ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ವರದಿ ಕೂಡ ಸಲ್ಲಿಸಿದ್ದರು.

ಈ ಸಂಬಂಧ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್, ಇಂದು ವಾದ–ಪ್ರತಿವಾದ ಆಲಿಸಿದರು.

ಈ ವೇಳೆ ಸ್ನೇಹಮಯಿ ಕೃಷ್ಣ ವಕೀಲರ ನೆರವು ಪಡೆಯದೆ ತಾವೇ ವಾದ ಮಂಡಿಸಿದರು. ಈ ಸಂದರ್ಭದಲ್ಲಿ ಲೋಕಾಯುಕ್ತ ಪರವಾಗಿ ವಿಶೇಷ ಅಭಿಯೋಜಕ ವೆಂಕಟೇಶ್ ಅರಭಟ್ಟಿ ಕೂಡ ವಾದ ಮಾಡಿದರು.

ಲೋಕಾಯುಕ್ತರು ತನಿಖೆ ನಡೆಸಿ ನೀಡಿರುವ ವರದಿಯ ಕಲಂ 14ರಲ್ಲಿ 1 ರಿಂದ 4 ಆರೋಪಿಗಳು ಯಾವುದೇ ತಪ್ಪು ಎಸಗಿಲ್ಲ ಎಂದು ಹೇಳುತ್ತಾರೆ. ಆದರೆ ಕಲಂ 17ರಲ್ಲಿ ಶೇಕಡ 50:50 ಅನುಪಾತದಲ್ಲಿ ಮುಡಾ ಆಯುಕ್ತರಾಗಿದ್ದ ನಟೇಶ್ ನಿವೇಶನ ಮಂಜೂರು ಮಾಡಿರುವ ಕಾರಣ ಮುಡಾಗೆ ನಷ್ಟವಾಗಿದೆ ಎಂದು ಹೇಳಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ವಾದ ಮಂಡಿಸಿದರು.

ಲೋಕಾಯುಕ್ತ ತನಿಖಾಧಿಕಾರಿಗಳು ಹೇಳಿರುವಂತೆ ಮುಡಾಗೆ ನಷ್ಟವಾಗಿದೆ ಎಂದರೆ ಅಕ್ರಮ ನಡೆದಿದೆ ಎಂದರ್ಥ. ಈ ಮೂಲಕ ಆರೋಪಿಗಳು ತಪ್ಪೆಸಗಿರುವುದು ಸ್ಪಷ್ಟವಾಗಿದೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದರು.

ಈ ಬಗ್ಗೆ ವಾದ ಆಲಿಸಿದ ಸಂತೋಷ್ ಗಜಾನನ ಭಟ್, ಮುಡಾ ಪ್ರಕರಣ ಸಂಬಂಧ ಕೆಲವು ಸ್ಪಷ್ಟನೆ ನೀಡುವಂತೆ ಲೋಕಾಯುಕ್ತರಿಗೆ ಸೂಚಿಸಿ ಮುಂದಿನ ವಿಚಾರಣೆಯನ್ನು ಮಾರ್ಚ್ 24ಕ್ಕೆ ಮುಂದೂಡಿದ್ದಾರೆ.

ಸಂಚಾರಿ ನಿಯಮ ಪಾಲಿಸಿ; ಸುಗಮ ಸಂಚಾರಕ್ಕೆ ಸಹಕರಿಸಿ

ಸಾರಿಗೆ ವಿಭಾಗದ ಅಧಿಕಾರಿಗಳೊಂದಿಗೆ ಸಂಚಾರಿ ಪೊಲೀಸ್ ಅಧಿಕಾರಿಗಳ ಸಭೆ



ಮೈಸೂರಲ್ಲಿ ಸಾರಿಗೆ ಸಂಸ್ಥೆಯ ಬಸ್ ಚಾಲಕ, ನಿರ್ವಾಹಕರು ಸಂಚಾರ ನಿಯಮ ಪಾಲನೆ ಕುರಿತಂತೆ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್, ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ನಗರ ವಿಭಾಗದ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಹಾಗೂ ಇನ್ನಿತರರೊಂದಿಗೆ ಸಭೆ ನಡೆಸಿದರು.

ಮೈಸೂರು, ಮಾ.18(ಎಂಟಿವೈ)– ಮೈಸೂರಲ್ಲಿ ಸಂಚಾರ ದಟ್ಟಣೆ ತಡೆಗಟ್ಟುವ ನಿಟ್ಟಿನಲ್ಲಿ ಸಂಚಾರ ಪೊಲೀಸರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಹಕಾರ ಕೋರಿದರು.

ಮೈಸೂರಿನ ಬನ್ನಿಮಂಟಪದ ಸಾರಿಗೆ ಸಂಸ್ಥೆಯ ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಅವರ ಕಚೇರಿ ಸಭಾಂಗಣದಲ್ಲಿ ನಗರ ಪೊಲೀಸ್ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್, ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಂಚಾರ ಪೊಲೀಸರಿಗೆ ಸಾರಿಗೆ ಸಂಸ್ಥೆಯ ಬಸ್ ಚಾಲಕ, ನಿರ್ವಾಹಕರು ಸಹಕಾರ ನೀಡಿ, ಸಂಚಾರ ನಿಯಮವನ್ನು ಕಡ್ಡಾಯವಾಗಿ ಪಾಲಿಸಲು ಸೂಚನೆ ನೀಡುವಂತೆ ಕೋರಿದರು.

ಸಭೆಯಲ್ಲಿ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್ ಮಾತನಾಡಿ, ಮೈಸೂರು ನಗರದಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳ ಸಂಚಾರ ನಿಯಮ ಪಾಲನೆ ಮಾಡದೆ ಇರುವುದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದಿಂದ ದೂರು ಬಂದಿದ್ದು, ಈ ಹಿನ್ನೆಲೆಯಲ್ಲಿ ಕಡ್ಡಾಯವಾಗಿ ಸಂಚಾರ ನಿಯಮ ಪಾಲನೆಗೆ ಸಂಸ್ಥೆಯ ಬಸ್‌ಗಳ ಚಾಲಕರು, ನಿರ್ವಾಹಕರಿಗೆ ಸೂಚನೆ ನೀಡಬೇಕು. ನಿಗದಿತ ಸ್ಥಳದಲ್ಲಿ ಬಸ್ ನಿಲ್ಲಿಸುತ್ತಿಲ್ಲ. ಪ್ರಯಾಣಿಕರಿಗೆ ಟಿಕೆಟ್ ನೀಡುವುದಕ್ಕಾಗಿ ಸಂಚಾರ ದಟ್ಟಣೆ ಇರುವ ರಸ್ತೆಯಲ್ಲಿಯೇ ಬಸ್ ನಿಲುಗಡೆ ಮಾಡುತ್ತಿದ್ದಾರೆ. ಚಾಲಕರು ಸಮವಸ್ತ್ರ ಹಾಗೂ ಸೀಟ್ ಬೆಲ್ಟ್ ಧರಿಸುತ್ತಿಲ್ಲ. ಕೆಲವು ಬಸ್‌ಗಳು ದಟ್ಟ ಹೊಗೆ ಸೂಸುತ್ತಿದ್ದು, ವಾಯುಮಾಲಿನ್ಯ ಉಂಟಾಗುತ್ತಿದೆ. ಇಂತಹ ಬಸ್‌ಗಳ ಪರೀಕ್ಷೆ ಮಾಡಿಸಬೇಕು. ಆಸ್ಪತ್ರೆಗಳ ಮುಂದೆ ಹಾರ್ನ್ ಮಾಡಬಾರದು. ನಗರ ಪ್ರದೇಶದಲ್ಲಿ ಅತೀ ವೇಗದ ಚಾಲನೆ ಮಾಡಬಾರದು. ನಿಗದಿತ ಸ್ಥಳದಲ್ಲಿ ಬಸ್ ನಿಲುಗಡೆ ಮಾಡಬೇಕು ಎಂದು ಮನವರಿಕೆ ಮಾಡಿಕೊಟ್ಟರು.

ಯಾವುದಾದರೂ ಪ್ರದೇಶದಲ್ಲಿ ಗಲಭೆ, ಮೆರವಣಿಗೆ, ಪ್ರತಿಭಟನೆ, ಬಂದ್ ವೇಳೆ ಸಂಚಾರ ಪೊಲೀಸರ ಸೂಚನೆ ತಪ್ಪದೇ ಪಾಲಿಸಬೇಕು. ಪೊಲೀಸರೊಂದಿಗೆ ವಾಗ್ವಾದಕ್ಕೆ ಮುಂದಾದರೆ ವಾಹನ ದಟ್ಟಣೆಯಂತಹ ಘಟನೆಗಳು ನಡೆಯುತ್ತವೆ. ಸಂಚಾರ ಪೊಲೀಸರೊಂದಿಗೆ ಸಾರಿಗೆ ಇಲಾಖೆ ಸಿಬ್ಬಂದಿ ಸಹಕರಿಸಿದರೆ ಸುಗಮ ಸಂಚಾರ ಸಾಧ್ಯ. ಈ ಹಿನ್ನೆಲೆಯಲ್ಲಿ ಸಹಕಾರ ನೀಡುವಂತೆ ಕೋರಿದರು.

ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮಾತನಾಡಿ, ಸಿಬ್ಬಂದಿಗಳಿಗೆ ಸಂಚಾರ ನಿಯಮ ಪಾಲನೆಗೆ ಸೂಚನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ನಿಯಮವನ್ನು ಕಡ್ಡಾಯವಾಗಿ ಪಾಲಿಸುವಂತೆ ಮನವರಿಕೆ ಮಾಡಿಕೊಡಲಾಗುತ್ತದೆ. ಗ್ರಾಮಾಂತರ ಬಸ್ ನಿಲ್ದಾಣದ ಮುಂದೆ ಆಟೋರಿಕ್ಷಾಗಳು ಅಡ್ಡಲಾಗಿ ನಿಂತಿರುತ್ತವೆ. ಇದರಿಂದ ಬಸ್ ನಿಲ್ದಾಣಕ್ಕೆ ಬರುವ ಹಾಗೂ ಹೊರಗೆ ಹೋಗುವ ಸಾರಿಗೆ ಬಸ್ ಮತ್ತು ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಈ ಸಂಬಂಧ ಪ್ರಯಾಣಿಕರಿಂದಲೂ ದೂರು ಕೇಳಿ ಬಂದಿದೆ. ಗ್ರಾಮಾಂತರ ಬಸ್ ನಿಲ್ದಾಣದ ಮುಂದೆ ಆಟೋರಿಕ್ಷಾಗಳ ಕ್ರಮಬದ್ಧ ನಿಲುಗಡೆಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ನಗರ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಮಾತನಾಡಿ, ಸಾರಿಗೆ ಸಂಸ್ಥೆ ಸಂಚಾರ ಪೊಲೀಸರಿಗೆ ಸಹಕಾರ ನೀಡಲು ಸದಾ ಸಿದ್ಧವಿದ್ದು, ಸಂಚಾರ ನಿಯಮ ಪಾಲಿಸುವಂತೆ ಈಗಾಗಲೇ ಚಾಲಕರಿಗೆ ಮನವರಿಕೆ ಮಾಡಿಕೊಡಲಾಗಿದೆ. ಮುಂದಿನ ದಿನಗಳಲ್ಲಿ ಸಾರಿಗೆ ಸಂಸ್ಥೆಯ ಟ್ರಾಫಿಕ್ ಇನ್ಸ್‌ಪೆಕ್ಟರ್ ಹಾಗೂ ಸಂಚಾರ ಪೊಲೀಸರೊಂದಿಗೆ ಸಭೆ ನಡೆಸಿ, ನಿಯಮ ಪಾಲನೆ, ಸಂಸ್ಥೆಯ ಬಸ್‌ಗಳ ಚಾಲಕರಿಗೆ ಕೆಲ ಬಸ್ ನಿಲ್ದಾಣದ ಬಳಿ ಆಟೋರಿಕ್ಷಾಗಳ ನಿಲುಗಡೆಯಿಂದ ಆಗುತ್ತಿರುವ ಸಮಸ್ಯೆ ಪರಿಹಾರ, ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಚರ್ಚಿಸಿ ಪರಿಹಾರ ಕಂಡುಹಿಡಿಯುವುದಕ್ಕೆ ಸಹಕರಿಸುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ವಿವಿ ಪುರಂ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಲವ, ಸಿದ್ಧಾರ್ಥ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಶ್ರೀಧರ್, ದೇವರಾಜ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಮಮತಾ, ಕೆಆರ್.ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಮಹದೇವಪ್ಪ, ಎನ್.ಆರ್.ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ರೇಖಾಬಾಯಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ರೋಟರಿ ಸೈನಿಕ್ ದೇಶ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಮಾ.18(ಜಿಎ)–ರೋಟರಿ ಮೈಸೂರು ಮಿಡ್‌ಟೌನ್, ಶ್ರೀ ಸೈನಿಕ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಮಾ. 19 ರ ಸಂಜೆ 6.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸೆಂಟ್ರಲ್ ಹಾಲ್‌ನಲ್ಲಿ ರೋಟರಿ ಸೈನಿಕ್ ದೇಶ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಎಸ್. ಕುಮಾರಸ್ವಾಮಿ ಈ ವಿಷಯ ತಿಳಿಸಿ, ಜಮ್ಮು ಕಾಶ್ಮೀರದ ರಜೌರಿಯಲ್ಲಿ ಉಗ್ರರ ಎನ್‌ಕೌಂಟರ್ ನಡೆಸುತ್ತಿದ್ದ ವೇಳೆ ಹುತಾತ್ಮರಾದ ಮಂಗಳೂರು ಮೂಲದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರ ಕುಟುಂಬದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ನಿವೃತ್ತ ವಿಂಗ್ ಕಮಾಂಡರ್ ಗಿರೀಶ್ ಕುಮಾರ್ ಮುಖ್ಯ ಅತಿಥಿಗಳಾಗಿರುವರು. ಇದೇ ರೀತಿ ತಮ್ಮ ಸಂಸ್ಥೆ ವರ್ಷವಿಡೀ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ಎಲಿಝಬೆತ್ ಮಿಲ್ಟನ್, ಕೆ.ವಿ.ಭಾಸ್ಕರ್, ಅಭಿಲಾಶ್, ರಾಕೇಶ್ ಬಾಬು ಉಪಸ್ಥಿತರಿದ್ದರು.

5ನೇ ವರ್ಷದ ಸವಿನೆನಪು



ಹೆಚ್.ವಿ.ಹೇಮಲತಾ
19-03-2020

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷವಾದರು ಸದಾ ನಿಮ್ಮ ನೆನಪಿನಲ್ಲಿರುವ
ದು:ಖತಪ್ತರು
ಪಿ.ಎಸ್.ಕುಮಾರಸ್ವಾಮಿ
ಪುಷ್ಕಲ್, ರಜತ್, ನವೀನ್ ಕುಮಾರ್, ಹಾಗೂ ಕುಟುಂಬವರ್ಗದವರು









ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ "ಜಿ.ಎಸ್.ಎಸ್. ಪ್ರಾಜೆಕ್ಟ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ಅದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ. ಡಿ. ಶ್ರೀರಾಮ್ ಬಿನ್ ಲೇಟ್ ದ್ವಾರಕನಾಥ್ ಎಸ್.ಆರ್", ಕಛೇರಿ ಸಂಖ್ಯೆ 1104, ಕುವೆಂಪುನಗರ, ಮೈಸೂರು ನಗರ, ಮೈಸೂರು ಜಿಲ್ಲೆ, ರವರುಗಳಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕರಾರುಪತ್ರವನ್ನು ನೋಂದಾಯಿಸಿಕೊಳ್ಳಲು ತಯಾರಿರುತ್ತೇವೆ, ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಹಾಗೂ ಯಾವುದೇ ರೀತಿಯ ಕೋರ್ಟ್ ಡಿಕ್ರಿ, ಬ್ಯಾಂಕ್, ಹಣಕಾಸಿನ ಸಂಸ್ಥೆಗಳ ಅಟ್ಯಾಚ್‌ಮೆಂಟ್ ಇದ್ದಲ್ಲಿ ಇಂದಿನಿಂದ 10 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟವರು ಅಸಲು ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕರಾರು/ಕ್ರಯ ಪತ್ರವನ್ನು ನೊಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗದಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ : ಮೈಸೂರು ಜಿಲ್ಲೆ, ಮೈಸೂರು ತಾಲೂಕು, ಜಯಪುರ ಹೋಬಳಿ, ಜಯಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 55/3, 58/1, 71/4 ರಲ್ಲಿ "ಯೋಗಿಕ್ ವಿಲೇಜ್" ಎಂಬ ಬಡಾವಣೆ ಹೆಸರಿನಲ್ಲಿ ಅಭಿವೃದ್ಧಿಪಡಿಸಿರುವ ಖಾಲಿ ನಿವೇಶನ ಸಂಖ್ಯೆ. 48, ಜಯಪುರ ಗ್ರಾಮ ಪಂಚಾಯಿತಿ ವತಿಯಿಂದ ವಿತರಿಸಿರುವ ನಮೂನೆ-9 ಮತ್ತು 11ಬಿ ರ ಪ್ರಕಾರ ಸ್ವತ್ತಿನ ಸಂಖ್ಯೆ. 152200423 08202 4457, ವಿಸ್ತೀರ್ಣ ಪೂರ್ವ-ಪಶ್ಚಿಮ 12.20 ಮೀಟರ್, ಉತ್ತರ-ದಕ್ಷಿಣ 9.14 ಮೀಟರ್ ಒಟ್ಟು ವಿಸ್ತೀರ್ಣ 111.51 ಚ.ಮೀ. ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ. 22, ಉತ್ತರಕ್ಕೆ : ನಿವೇಶನ ಸಂಖ್ಯೆ. 49, ದಕ್ಷಿಣಕ್ಕೆ : ನಿವೇಶನ ಸಂಖ್ಯೆ. 47.

ಸಹಿ/- ನಾಗೇಶ ಕೆ,
ನಂ. 1197, 12/2, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ, ಮೈಸೂರು. (ಮೊ.9538842045)

ದಿನಾಂಕ : 18/03/2025, ಮೈಸೂರು.



[illegible] ನ್ಯಾಯಾಲಯ, ಮೈಸೂರು
[illegible] ಸಂಖ್ಯೆ 10/2025

ಅರ್ಜಿದಾರರು: [illegible] ... 560040

ವಿರುದ್ಧ ಎದುರುದಾರರು : ಇಲ್ಲ

ಸಾರ್ವಜನಿಕ ಪತ್ರಿಕಾ ಪ್ರಕಟಣೆ

[illegible] 01-09-2023 [illegible] 21/04/2025 [illegible] 11:00 [illegible]

ಷೆಡ್ಯೂಲ್ ಸ್ವತ್ತಿನ ವಿವರ: [illegible] ನಂ.669, [illegible] ನಂ.669/1 [illegible] 20 X 25 [illegible]

[illegible]

ದಿನಾಂಕ: 15.03.2025 [illegible]

[illegible]



2ನೇ ವರ್ಷದ ಸವಿನೆನಪು

ಶ್ರೀಮತಿ ಮೀನಾಕ್ಷಿ
(ಬಳಕಿ ಗುರುಸ್ವಾಮಪ್ಪನವರ ಧರ್ಮಪತ್ನಿ)
ಬದನಗುಪ್ಪೆ ಚಾ.ನಗರ ತಾ॥

ನೀವು ನಮ್ಮನ್ನಗಲಿ ಇಂದಿಗೆ 19.3.2025ಕ್ಕೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪು ದಾರಿದೀಪವಾಗಲಿ

ದುಃಖತಪ್ತರು: ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು



ಪುರಸಭಾ ಕಾರ್ಯಾಲಯ, ಮದ್ದೂರು-571428

ದೂರವಾಣಿ : 08232-232600/236222 ಫ್ಯಾಕ್ಸ್ : 08232-233021
Email : ka.maddur.tmc@gmail.com website : www.maddurtown.mrc.gov.in

ನಂ.ಪು.ಸ.ಮ/ಕಂ.ಶಾ./ಸಿ.ಆರ್-01/2024-25 ದಿನಾಂಕ:-10-03-2025

ಟೆಂಡರ್ ಕಂ. ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ, ಮದ್ದೂರು ಪುರಸಭೆಗೆ ಸೇರಿದ ಮಂಗಳವಾರ ನಡೆಯುವ ವಾರದ ಸಂತೆ ಸುಂಕ, ಖಾಸಗಿ ಬಸ್, ಟೆಂಪೋ, ಹಾಗೂ ಅಪೇ ಆಟೋ ವಾಹನ ಸುಂಕ ವಸೂಲಾತಿ ಮಾಡುವ ಹಕ್ಕನ್ನು, ದಿನಾಂಕ:01-04-2025 ರಿಂದ 31-03-2026ರವರೆಗೆ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇ ಪಡಿಸಲು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿರುತ್ತದೆ. 2025-26ನೇ ಸಾಲಿನ ಅವಧಿಗೆ ಮಂಗಳವಾರ ನಡೆಯುವ ವಾರದ ಸಂತೆ ಸುಂಕ ಖಾಸಗಿ ಬಸ್, ಟೆಂಪೋ, ಹಾಗೂ ಅಪೇ ಆಟೋ ವಾಹನ ಸುಂಕ ವಸೂಲಾತಿ ಮಾಡುವ ಹಕ್ಕನ್ನು ಪಡೆದುಕೊಳ್ಳಲು ಸೀಲ್ ಮಾಡಿದ ಲಕೋಟೆಯಲ್ಲಿ ಟೆಂಡರ್ ಫಾರಂನಲ್ಲಿ ಬಿಡ್ ಮೊತ್ತ ನಮೂದಿಸಿ ಪ್ರಾಥಮಿಕ ಠೇವಣಿ ಡಿ.ಡಿ. ಲಗತ್ತಿಸಿ ಮುಂಗಡ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮುಖ್ಯಾಧಿಕಾರಿ, ಪುರಸಭೆ ಮದ್ದೂರು ರವರ ಹೆಸರಿನಲ್ಲಿ ಡಿ.ಡಿ. ಪಡೆದು ದಿನಾಂಕ:27-03-2025 ರ ಗುರುವಾರ ಬೆಳಗ್ಗೆ 10-30ಗಂಟೆಯಿಂದ ಸಂಜೆ 5.00 ಗಂಟೆಯೊಳಗೆ ಕಛೇರಿಗೆ ಸಲ್ಲಿಸಿ ನೋಂದಾಯಿಸಿಕೊಂಡು ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬಹುದಾಗಿರುತ್ತದೆ. ದಿನಾಂಕ:28-03-2025ರ ಶುಕ್ರವಾರ ಬೆಳಗ್ಗೆ 11-00ಗಂಟೆಗೆ ಪುರಸಭಾ ಕಾರ್ಯಾಲಯದ ಸಿ.ಡಿ.ಎಸ್ ಭವನದಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗಳು ಮತ್ತು ಪುರಸಭಾ ಸದಸ್ಯರು ಸಮ್ಮುಖದಲ್ಲಿ ಬಹಿರಂಗ ಹರಾಜು ಮಾಡಲಾಗುತ್ತದೆ. ಆಸಕ್ತಿಯುಳ್ಳವರು ಟೆಂಡರ್ ಕಂ. ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಸುಂಕದ ಹಕ್ಕನ್ನು ಭಿಡ ಸವಾಲು ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರ ಹಾಗೂ ಷರತ್ತುಗಳನ್ನು ಕಛೇರಿಯ ವೇಳೆಯಲ್ಲಿ ಕಂದಾಯ ಶಾಖೆಯಲ್ಲಿ ಹಾಗೂ ಕಛೇರಿಯ ವೆಬ್‌ಸೈಟ್‌ನಲ್ಲಿ WWW.maddurtown.mrc.gov.in ನಲ್ಲಿ ತಿಳಿದುಕೊಳ್ಳತಕ್ಕದ್ದು.

ಕ್ರಸಂ : 01. ಹರಾಜಿನ ವಿವರ : ಖಾಸಗಿ ಬಸ್ ನಿಲ್ದಾಣದಲ್ಲಿ ಪ್ರತಿ ಮಂಗಳವಾರ ನಡೆಯುವ ವಾರದ ಸಂತೆ ಸುಂಕ ವಸೂಲಾತಿ ಮಾಡುವ ಹಕ್ಕು. **ಠೇವಣಿ ಮೊತ್ತ : 2,00,000-00. ಸರ್ಕಾರಿ ಸವಾಲ್ : 5,00,300-00. ಹರಾಜು ಅವಧಿ :** 01.04.2025 ರಿಂದ 31.03.2025 ರವರೆಗೆ (ಶ್ರೀನರಸಿಂಹಸ್ವಾಮಿ ದೇವಾಲಯದ ರಸ್ತೆಯಲ್ಲಿ ಅಂಗಡಿ ಮುಗಟ್ಟುಗಳನ್ನು ಇಟ್ಟುಕೊಳ್ಳದಂತೆ ವ್ಯಾಪಾರಸ್ಥರಿಗೆ ತಿಳಿಸುತ್ತಾ ಇದನ್ನು ಹೊರತು ಪಡಿಸಿ).

ಕ್ರಸಂ : 02. ಹರಾಜಿನ ವಿವರ : ಮದ್ದೂರು ಪುರಸಭಾ ವ್ಯಾಪ್ತಿಯಲ್ಲಿ ಓಡಾಡುವ ಖಾಸಗಿ ಬಸ್, ಟೆಂಪೋ, ಅಪೇ ಆಟೋ ವಾಹನಗಳ ಸುಂಕ ವಸೂಲಾತಿ ಮಾಡುವ ಹಕ್ಕು. **ಠೇವಣಿ ಮೊತ್ತ :** 2,00,000-00. **ಸರ್ಕಾರಿ ಸವಾಲ್** : 4,50,000-00. **ಹರಾಜು ಅವಧಿ :** 01.04.2025 ರಿಂದ 31.03.2026 ರವರೆಗೆ.

ಹೆಚ್ಚಿನ ವಿವರ ಹಾಗೂ ಷರತ್ತುಗಳನ್ನು ಕಂದಾಯ ಶಾಖೆಯಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-	ಸಹಿ/-	ಸಹಿ/-	ಸಹಿ/-
(ಅಧ್ಯಕ್ಷರು)	(ಉಪಾಧ್ಯಕ್ಷರು)	(ಸ್ಥಾಯಿ ಸಮಿತಿ ಅಧ್ಯಕ್ಷರು)	(ಪ್ರಭಾರ ಮುಖ್ಯಾಧಿಕಾರಿ)
ಪುರಸಭೆ ಮದ್ದೂರು	ಪುರಸಭೆ ಮದ್ದೂರು	ಪುರಸಭೆ ಮದ್ದೂರು	ಪುರಸಭೆ ಮದ್ದೂರು

ವಾಇಸಾಪ್ರಸಂ/ಸಹಿ-ಮಂ/ಕೆಎಸ್ ಎಂಪಿಐಎ/769/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.

ಬೆಂಗಳೂರು-ಮೈಸೂರು ರಸ್ತೆ, ಕಲ್ಲಹಳ್ಳಿ, ಮಂಡ್ಯ-571401
ಇ-ಮೇಲ್:apmcmandya@rediffmail.com, :apmcmandya@gmail.com, ದೂ: 220792;238120;220110, ಫ್ಯಾಕ್ಸ್: 220792

ಸಂಖ್ಯೆ: ಕೃಉಮಾಸ(ಮಂ)/375/2024-25, ದಿನಾಂಕ:17-03-2025

ಹಂಚಿಕೆ ಪ್ರಕಟಣೆ-2

ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಖ್ಯ ರಸ್ತೆಯಲ್ಲಿರುವ ಸಣ್ಣ ಅಂಗಡಿ ಮಳಿಗೆಗಳು, ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಚಹಾ ಅಂಗಡಿಗಳು, ಕ್ಯಾಂಟಿನ್(ಉಪಹಾರ ಗೃಹ) ಕಟ್ಟಡ ಹಾಗೂ ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕ್ಯಾಂಟೀನ್ (ಉಪಹಾರ ಗೃಹ) ಕಟ್ಟಡವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು 2004ರ ನಿಯಮ 14 ರನ್ವಯ 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೊಮ್ಮೆ ಶೇ.5ರಂತೆ ಲೀವ್ ಅಂಡ್ ಲೈಸನ್ಸ್ ಶುಲ್ಕವನ್ನು ಹೆಚ್ಚಿಸುವ, ಗರಿಷ್ಠ 55 ತಿಂಗಳುಗಳ ಅವಧಿಗೆ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ರೈತರು, ವೇಟಿ ಕಾರ್ಯಕರ್ತರುಗಳು ಹಾಗೂ ಮತ್ತಿತರ ಉಪಯೋಗಕ್ಕಾಗಿ ಕೃಷಿ ಚಟುವಟಿಕೆಗಳಿಗೆ ಪೂರಕವಾದ ರಸಗೊಬ್ಬರ, ಕ್ರಿಮಿನಾಶಕ, ಬಿತ್ತನೆ ಬೀಜ, ಕೃಷಿ ಉಪಕರಣಗಳು, ಬೇಕರಿ, ಕೂಲ್ ಡ್ರಿಂಕ್ಸ್, ಟ್ರಾನ್ಸ್ ಪೋರ್ಟ್ ಕಛೇರಿ, ದೂರವಾಣಿ, ಫ್ಯಾಕ್ಸ್, ಜೆರಾಕ್ಸ್, ಎ.ಟಿ.ಎಂ., ಔಷಧಾಲಯಗಳಿಗೆ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಖ್ಯ ರಸ್ತೆಯಲ್ಲಿ ಖಾಲಿ ಇರುವ ಸಣ್ಣ ಅಂಗಡಿ ಮಳಿಗೆಗಳು

ಕ್ರ ಸಂ	ಕಟ್ಟಡಗಳ ವಿವರ	ಸಾಮರ್ಥ್ಯ/ ವಿಸ್ತೀರ್ಣ	ಮೀಸಲಾತಿ ವರ್ಗ	ನಿಗಧಿಪಡಿಸಿದ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ ರೂ.	ಅರ್ಜಿ ಶುಲ್ಕ (ತೆರಿಗೆ ಪ್ರತ್ಯೇಕ)	ನೋಂದಣಿ ಶುಲ್ಕ	ಮುಂಗಡ ಠೇವಣಿ ಪ್ರತಿಯೊಂದು ಮಳಿಗೆಗೆ
01	ಸಣ್ಣ ಮಳಿಗೆ ಸಂಖ್ಯೆ- 03, 06, 08, 11, 12	205.43 Sft	ಸಾಮಾನ್ಯ	3405.00+ ಜಿ.ಎಸ್.ಟಿ. ಪ್ರತ್ಯೇಕ	1000.00	500.00	6810.00
02	ಸಣ್ಣ ಮಳಿಗೆ ಸಂಖ್ಯೆ -04	205.43 Sft	ಎಸ್.ಸಿ.	3405.00			6810.00
03	ಸಣ್ಣ ಮಳಿಗೆ ಸಂಖ್ಯೆ -07	205.43 Sft	ಮಹಿಳೆ	3405.00			6810.00
04	ಸಣ್ಣ ಮಳಿಗೆ ಸಂಖ್ಯೆ -09	205.43 Sft	ಪರಿಶಿಷ್ಟ ಜಾತಿ	3405.00			6810.00
05	ಸಣ್ಣ ಮಳಿಗೆ ಸಂಖ್ಯೆ -10	205.43 Sft	ಪರಿಶಿಷ್ಟ ಪಂಗಡ	3405.00			6810.00
ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಚಹಾ ಅಂಗಡಿ							
1	2	3	4	5	6	7	8
01	ಚಹಾ ಅಂಗಡಿ ಸಂಖ್ಯೆ-02	280.50 Sft	ಸಾಮಾನ್ಯ	2865.00	1000.00	500.00	5730.00
ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಕ್ಯಾಂಟಿನ್(ಉಪಹಾರ ಗೃಹ) ಕಟ್ಟಡದ ವಿವರ							
01	ಕ್ಯಾಂಟಿನ್(ಉಪಹಾರ ಗೃಹ) ಸಂಖ್ಯೆ-01	300.00 Sft	ಸಾಮಾನ್ಯ	10025.00	1000.00	500.00	20050.00
ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಕ್ಯಾಂಟೀನ್(ಉಪಹಾರ ಗೃಹ) ಕಟ್ಟಡದ ವಿವರ							
01	ಉಪಹಾರ ಗೃಹ ಕಟ್ಟಡ ಸಂಖ್ಯೆ-01	481.16 Sft	ಸಾಮಾನ್ಯ	12000-00	1000.00	500.00	24000.00

ಷರತ್ತುಗಳು ಹಾಗೂ ನಿಬಂಧನೆಗಳಿಗೆ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯದರ್ಶಿ(ಪ್ರ), ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ ಸಹಿ/-ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ